ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 43

ಅಕ್ಟೋಬರ್ 25, 2009

ರೂ. 5/-



ಪ್ರವಾಹ : ಪರಿಹಾರದಲ್ಲಿ ತಾತ್ಸಾರ - ತಾರತಮ್ಯ



ಆಹಾರ ಬಿಕ್ಕಟ್ಟು : ಬೆಲೆ ಏರಿದರೆ ರೈತನಿಗೆ ಲಾಭವೇ ?



ನಕ್ಸಲ್ ಚಟುವಟಿಕೆ ಯಾರ ಹಿತಾಸಕ್ತಿಗಾಗಿ ?



ಆಟೋ ಚಾಲಕರ ಬೆನ್ನಿಗೆ ಬರೆ

ಮಾನವ ಅಭಿವೃದ್ಧಿಯಲ್ಲಿ ಭಾರತದ ಸ್ಥಾನ ಮತ್ತೆ ಕುಸಿತ

ಭಾರತ - ಚೀನಾ ಗಡಿ ವಿವಾದದ ಮೂಲವೇನು?

'ಜಗತ್ತಿನ ಕೊನೆ' ಎಂಬ ಮಾಧ್ಯಮಗಳ ಸುಳ್ಳು ಬೊಬ್ಬೆ

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನ 126 ರಿಂದ 128, ಈಗ 134ಕ್ಕೆ!

ಬಹುಪಾಲು ಭಾರತೀಯ ಜನತೆಯ ಬದುಕಿನ ಜೀವನಮಟ್ಟ ಬಹಳ ನಿಕೃಷ್ಟವಾಗಿದೆ ಎಂದು ನಾವು ಮತ್ತೆ-ಮತ್ತೆ ಹೇಳುತ್ತಿರುವುದನ್ನು ಮಾನವ ಅಭಿವೃದ್ಧಿ ವರದಿ 'ಹೆಚ್‌ಡಿಆರ್-2009' ದೃಢಗೊಳಿಸಿದೆ. 'ಆಮ್ ಆದ್ಮಿ'ಯ ಅಬ್ಬರ ಮತ್ತು 'ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ'ಯೆಂಬ ಪೊಳ್ಳು ಮಾತುಗಳು ಎಷ್ಟೇ ಪ್ರಮಾಣದಲ್ಲಿದ್ದರೂ ಈ ಪರಿಸ್ಥಿತಿಯನ್ನು ಬದಲಿಸಲಾರವು.

ವಿಶ್ವ ಸಂಸ್ಥೆಯ ವಾರ್ಷಿಕ ಮಾನವ ಅಭಿವೃದ್ಧಿ ಸೂಚ್ಯಂಕ(ಹೆಚ್‌ಡಿಆರ್ -2009) ಪ್ರಕಟವಾಗಿದೆ. ಇದರಲ್ಲಿ 182 ದೇಶಗಳಲ್ಲಿ ಭಾರತದ ಸ್ಥಾನ 134ಕ್ಕಿಳಿದಿದೆ. ಎರಡು ವರ್ಷಗಳ ಹಿಂದೆ ಅದು 126ನೇ ಸ್ಥಾನದಲ್ಲಿತ್ತು; ಕಳೆದ ವರ್ಷ 128ನೇ ಸ್ಥಾನಕ್ಕಿಳಿದಿತ್ತು. ಈ ಬಾರಿ ಮತ್ತಷ್ಟು ಕೆಳಗಿಳಿದಿದೆ. ನಮ್ಮ ಭಯ ದುರದೃಷ್ಟವಶಾತ್ ನಿಜವಾಗಿದೆ. ಭಾರತದ ಸ್ಥಾನ ಈಗ ಲಾವೊಸ್ ಮತ್ತು ಸೊಲೊಮನ್ ದ್ವೀಪದ ನಡುವೆ!


ಇದು 2007ರ ಮಾಹಿತಿಗಳ ಮೇಲೆ ಕಲೆ ಹಾಕಿದ ಸೂಚ್ಯಂಕ. ಅಂದರೆ ಕಳೆದ ವರ್ಷದ ಅತಿ ಕೆಟ್ಟ ಬಂಡವಾಳಶಾಹಿ ಬಿಕ್ಕಟ್ಟು ತಂದ ಜಾಗತಿಕ ಹಿಂಜರಿತ ಅಭಿವೃದ್ಧಿಶೀಲ ದೇಶಗಳ ಕೋಟ್ಯಂತರ ಮಂದಿಯ ಬದುಕನ್ನು ಚಿಂದಿ ಮಾಡುವ ಮೊದಲಿನ ಸ್ಥಿತಿಯಿದು. ನಂತರದ ಪರಿಸ್ಥಿತಿ ಇದರಲ್ಲಿ ಬಿಂಬಿತವಾಗಿಲ್ಲ ಎಂಬುದು ಗಮನಾರ್ಹ.

ಅಸಮಾನತೆಯ ಜಗತ್ತು

ಅದೇನೇ ಇರಲಿ. 2009ರ ಈ ಸೂಚ್ಯಂಕಗಳೂ ಮತ್ತೊಮ್ಮೆ ನವ-ಉದಾರೀಕರಣ ಪ್ರಕ್ರಿಯೆಯ ದುಷ್ಪರಿಣಾಮಗಳನ್ನು ದೃಢ ಪಡಿಸಿವೆ. ಅಂದರೆ ಶ್ರೀಮಂತ ಮತ್ತು ಬಡದೇಶಗಳ ನಡುವಿನ ಹಾಗೂ ಒಂದು ದೇಶದೊಳಗೂ ಶ್ರೀಮಂತರು ಮತ್ತು ಬಡವರ ನಡುವಿನ ಆರ್ಥಿಕ ಅಸಮಾನತೆ ಇನ್ನೂ ತೀಕ್ಷ್ಣಗೊಂಡಿದೆ. ಇದರ ಪರಿಣಾಮವಾಗಿ ಜಗತ್ತಿನ ಬಹುಪಾಲು ಜನಗಳ ಕೊಳ್ಳುವ ಶಕ್ತಿ ಕುಂಠಿತಗೊಂಡುದೇ ಜಾಗತಿಕ ಹಣಕಾಸು ಕುಸಿತಕ್ಕೆ, ಅದರಿಂದಾಗಿ ಆರ್ಥಿಕ ಹಿಂಜರಿತಕ್ಕೆ ಒಂದು ಮೂಲ ಕಾರಣವಾಯಿತು ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಬಹುಪಾಲು ಜನರಿಗೆ ಕೊಳ್ಳುವ ಶಕ್ತಿಯೇ ಇಲ್ಲದಿರುವಾಗ ಅಗ್ಗದ ಸಾಲಗಳಿಂದ ಗಾಳಿ ತುಂಬಿಕೊಂಡ ಜಾಗತಿಕ ಆರ್ಥಿಕ ಎಷ್ಟು ದಿನ ತಾನೇ ತಾಳಿಕೊಂಡೀತು.

ಉದಾಹರಣೆಗೆ, ಹೆಚ್‌ಡಿಆರ್-2009ರಲ್ಲಿ ಮೊದಲ ಸ್ಥಾನದಲ್ಲಿರುವ ನಾರ್ವೆ ದೇಶದ ಸರಾಸರಿ ಆದಾಯ, ಕೊನೆಯ ಅಂದರೆ 182ನೇ ಸ್ಥಾನದಲ್ಲಿರುವ ನೈಗರ್ ದೇಶದ ಸರಾಸರಿ ಆದಾಯಕ್ಕಿಂತ 85 ಪಟ್ಟು ಹೆಚ್ಚು! ಇದರಿಂದಾಗಿ ನಾರ್ವೆಯಲ್ಲಿ ಹುಟ್ಟಿದ ಒಂದು ಮಗು ನೈಗರ್‌ನಲ್ಲಿ ಹುಟ್ಟಿದ ಮಗುವಿಗಿಂತ 30 ವರ್ಷ ಹೆಚ್ಚು ಬದುಕುವ ಸಾಧ್ಯತೆ ಬಹಳ.

ಈ ಬಾರಿಯ ಮಾನವ ಅಭಿವೃದ್ಧಿ ಸೂಚ್ಯಂಕ ವಲಸೆಯ (ದೇಶಗಳ ನಡುವೆಯೂ, ದೇಶಗಳ ಒಳಗೂ) ಪ್ರಶ್ನೆಯ ಮೇಲೆ ಪ್ರಮುಖವಾಗಿ ಗಮನ ಕೇಂದ್ರೀಕರಿಸಿದೆ. ಇದರಿಂದ ಕೆಲವು ಕುತೂಹಲಕಾರೀ ಸಂಗತಿಗಳು ಬೆಳಕಿಗೆ ಬಂದಿವೆ. ಅಂತರ್ರಾಷ್ಟ್ರೀಯ ವಲಸೆಯ ಸಂಖ್ಯೆ 21.4 ಕೋಟಿ, ಅಂದರೆ ಜಗತ್ತಿನ ಜನಸಂಖ್ಯೆಯ 3.1ಶೇ. 74 ಕೋಟಿ ಜನ ದೇಶದೊಳಗೇ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗಿದ್ದಾರೆ. ಅಭಿವೃದ್ಧಿಶೀಲ ದೇಶಗಳಿಂದ ಅಭಿವೃದ್ಧಿ ಹೊಂದಿದ ದೇಶಗಳಿಗೆ ವಲಸೆ ಹೋದವರ ಪ್ರಮಾಣ ಸಾಮಾನ್ಯವಾಗಿ ಭಾವಿಸುವಂತೆ ಬಹಳವೇನೂ ಇಲ್ಲ, ಅಂತರ್ರಾಷ್ಟ್ರೀಯ ವಲಸೆಯ 37ಶೇ. ಮಾತ್ರ. ಸುಮಾರು 60 ಶೇ. ವಲಸೆ ಸಮಾನ ಮಟ್ಟದ ದೇಶಗಳ ನಡುವೆಯೇ ನಡೆಯುತ್ತಿದೆ. ಭಾರತದ ವಲಸೆ ಪ್ರಮಾಣ 0.8ಶೇ. ಮಾತ್ರ, ಜಾಗತಿಕ ಪ್ರಮಾಣಕ್ಕೆ ಹೋಲಿಸಿದರೆ ಸುಮಾರು ಮೂರನೇ ಒಂದಷ್ಟೇ. ಆದರೆ ವಲಸಿಗರಿಂದಾಗಿ ಪಡೆಯುವ ವಾರ್ಷಿಕ ಪಾವತಿ 3530 ಕೋಟಿ ಡಾಲರು ಅಂದರೆ ತಲಾವಾರಾಗಿ 30ಡಾಲರು. ಶ್ರೀಲಂಕಾ ಪಡೆಯುವ ತಲಾ ಪಾವತಿ 131ಡಾಲರು.



ಇದು ನರಳುತ್ತಿರುವ ಭಾರತ

ಜಿ-20 ಸಂಭ್ರಮ ಮತ್ತೀಗ......

ಇರಲಿ. ಉದಾರೀಕರಣದ ಅಡಿಯಲ್ಲಿ ಭಾರತ 'ಸಾಧಿಸಿದ' ಭಾರೀ ಮುನ್ನಡೆಯ ಹಿನ್ನೆಲೆಯಲ್ಲಿ ಮಾನವ ಅಭಿವೃದ್ಧಿ ರಂಗದಲ್ಲಿನ 'ಸಾಧನೆ'ಗಳ ಬಗ್ಗೆ ನೋಡೋಣ. 'ಮೂಡಿ ಬರುತ್ತಿರುವ' ಆರ್ಥಿಕದ ನಮ್ಮ ಪ್ರಧಾನಿಗಳು ಜಿ-20ರ ಘಟಾನುಘಟಿಗಳಿಗೆ ಹೆಗಲೆಣೆಯಾಗಿ ನಿಂತಿದ್ದಾರೆ ಎಂಬ ಸಂಭ್ರಮ ಈ ಹೆಚ್‌ಡಿಆರ್-2009ರ ಎದುರು ಆವಿಯಾಗಿ ಬಿಟ್ಟಿದೆ. ಒಂದು ರೀತಿಯಲ್ಲಿ ಇದು ಆರ್ಥಿಕ ಬೆಳವಣಿಗೆಯ ಫಲಗಳೆಲ್ಲಾ 'ಹೊಳೆಯುತ್ತಿರುವ' ಭಾರತದ ಕೆಲವೇ ಮಂದಿಯ ಪಾಲಾಗಿ, ಉಳಿದವರನ್ನೆಲ್ಲಾ 'ನರಳುತ್ತಿರುವ' ಭಾರತಕ್ಕೆ ತಳ್ಳಲಾಗುತ್ತಿದೆ ಎಂಬುದನ್ನು ದೃಢ ಪಡಿಸಿದೆ.

ಕೊಳ್ಳುವ ಸಾಮರ್ಥ್ಯದ ಹೋಲಿಕೆ(ಪಿಪಿಪಿ)ಯ ಆಧಾರದಲ್ಲಿ ಪ್ರತಿಯೊಂದು ದೇಶದ ತಲಾ ಆದಾಯವನ್ನು ಲೆಕ್ಕ ಹಾಕಿ ಅದರ ಆಧಾರದಲ್ಲಿಯೂ ಪ್ರತಿಯೊಂದು ದೇಶದ ಸ್ಥಾನವನ್ನು ಪಟ್ಟಿ ಮಾಡಲಾಗುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕದ ಆಧಾರದ ಮತ್ತು ಈ ಪಿಪಿಪಿ ಆಧಾರದ ಸ್ಥಾನದ ಹೋಲಿಕೆ ಒಂದು ದೇಶದೊಳಗಿನ ಅಸಮಾನತೆ ಎಷ್ಟು ಎಂಬುದರ ಸೂಚನೆ ಕೊಡುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕದ ಆಧಾರದಲ್ಲಿ ಭಾರತದ ಸ್ಥಾನ ಪಿಪಿಪಿ ಆಧಾರದ ಸ್ಥಾನಕ್ಕಿಂತ ಆರು ಮೆಟ್ಟಿಲಷ್ಟು ಕೆಳಗಿದೆ. ಪಕ್ಕದ ದೇಶಗಳಿಗಿಂತ ಇದು ಭಿನ್ನ. ಬಾಂಗ್ಲಾದೇಶ ಪಿಪಿಪಿ ಆಧಾರದ ಸ್ಥಾನಕ್ಕಿಂತ ಒಂಭತ್ತು ಮೆಟ್ಟಲು ಮೇಲಿದೆ, ಚೀನಾ 10, ಶ್ರೀಲಂಕಾ 14, ನೇಪಾಳ 21 ಮತ್ತು ಮ್ಯಾನ್ಮಾರ್ 29 ಮೆಟ್ಟಿಲು ಮೇಲಿವೆ. ಇದು ಕೂಡಾ ನಮ್ಮ ದೇಶದಲ್ಲಿ ಉನ್ನತ ಬೆಳವಣಿಗೆಯ ಫಲಗಳು ಕೆಲವೇ ಮಂದಿಗೆ ಸೀಮಿತಗೊಂಡಿವೆ, ಆದರಿಂದ ಬಹುಪಾಲು ಜನಸಮೂಹಗಳ ಬದುಕಿನ ಗುಣಮಟ್ಟ ಏರಲಿಲ್ಲ ಎಂಬುದನ್ನೇ ತೋರಿಸುತ್ತದೆ. 'ಹೊಳೆಯುತ್ತಿರುವ' ಮತ್ತು 'ನರಳುತ್ತಿರುವ' ಭಾರತಗಳ ನಡುವಿನ ಕಂದರ ವಾಸ್ತವವಾಗಿ ಆಳವಾಗುತ್ತಿದೆ.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಐದು ದೇಶಗಳು ಕಳೆದ ವರ್ಷಕ್ಕೆ ಹೋಲಿಸಿದರೆ ಮೂರಕ್ಕಿಂತ ಹೆಚ್ಚು ಸ್ಥಾನಗಳಷ್ಟು ಮೇಲೇರಿವೆ. ಅತಿ ಹೆಚ್ಚು ಮೇಲೇರಿಕೆ ಸಾಧಿಸಿರುವುದು ಚೀನಾ. ಅದರ ಸ್ಥಾನ ಕಳೆದ ವರ್ಷಕ್ಕಿಂತ ಏಳು ಮೆಟ್ಟಿಲೇರಿ 92 ತಲುಪಿದೆ. ಅಮೆರಿಕಾ-ವಿರೋಧಿ ನವ-ಉದಾರವಾದಿ ಪ್ರಗತಿಪರ ಸರಕಾರಗಳಿರುವ ವೆನೆಜುವೆಲಾ ಮತ್ತು ಪೆರು ದೇಶಗಳ ಜನಗಳ ಜೀವನ ಗುಣಮಟ್ಟವೂ ಗಮನಾರ್ಹವಾಗಿ ಉತ್ತಮಗೊಂಡಿದೆ. ಮೇಲಕ್ಕೇರಿದ ಉಳಿದೆರಡು ದೇಶಗಳೆಂದರೆ ಫ್ರಾನ್ಸ್ ಮತ್ತು ಕೊಲಂಬಿಯಾ. ●

'ಅಭಿವೃದ್ಧಿ'ಯ ಈ ಕಥೆ...

ಭಾರತಕ್ಕೆ ಕೆಟ್ಟ ಸುದ್ದಿ ಇದಷ್ಟೇ ಅಲ್ಲ. ವಯಸ್ಕ ಸಾಕ್ಷರತೆ ಬಿಟ್ಟರೆ ಮಾನವ ಅಭಿವೃದ್ಧಿ ಸೂಚ್ಯಂಕದ ಬೇರೆಲ್ಲಾ ಅಂಶಗಳಲ್ಲಿ ಇಳಿಕೆ ಕಂಡಿದೆ. ಮೇಲೆ ಹೇಳಿದ ಪಿಪಿಪಿ ತಲಾ ಆದಾಯ 3452ಡಾಲರಿನಿಂದ 2753 ಡಾಲರಿಗಿಳಿದಿದೆ. ಸರಾಸರಿ ಆಯುಸ್ಸು 63.7 ರಿಂದ 63.4 ವರ್ಷಕ್ಕಿಳಿದಿದೆ. ಶಾಲಾ ದಾಖಲಾತಿ ಅನುಪಾತ 63.8ಶೇ.ದಿಂದ 61ಶೇ. ಕ್ಕೆ ಇಳಿದಿದೆ. ಶಾಲೆಯನ್ನು ಮಧ್ಯದಲ್ಲೇ ಬಿಡುವ ಮಕ್ಕಳ ಸಂಖ್ಯೆಯನ್ನು ಇಲ್ಲಿ ಗಣನೆಗೆ ತಗೊಳ್ಳುವುದಿಲ್ಲ. ಅದು ಭಾರತದಲ್ಲಿ ಸಾಕಷ್ಟು ಹೆಚ್ಚಿದೆ. ಒಂದನೇ ತರಗತಿ ಸೇರುವ 100 ಮಕ್ಕಳಲ್ಲಿ 10ನೇ ತರಗತಿ ತಲುಪುವುದು 31 ಮಾತ್ರ. ಇವರಲ್ಲಿ 12ನೇ ತರಗತಿ ಪಾಸಾಗುವವರು ಕೇವಲ 16. ಉನ್ನತ ಶಿಕ್ಷಣದ ಮೆಟ್ಟಿಲು ಹತ್ತುವವರು ಕೇವಲ 9. ಇತರ ಹಲವು ದೇಶಗಳಲ್ಲಿ ಒಮ್ಮೆ ಒಬ್ಬ ವಿದ್ಯಾರ್ಥಿ ಒಂದು ಶಾಲೆಯನ್ನು ಪ್ರವೇಶಿಸಿದನೆಂದರೆ ಎಲ್ಲವೂ ಸುಸೂತ್ರವಾಗಿ ಸಾಗುತ್ತದೆ. ಆದರೆ ಭಾರತದಲ್ಲಿ ಹಾಗಾಗುವುದಿಲ್ಲ. 1980ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ 0.427 ಇತ್ತು. ಸುಮಾರು ಮೂರು ದಶಕಗಳ ನಂತರ ಅದು ಸ್ವಲ್ಪವೇ ಮೇಲೇರಿ 0.612 ಆಗಿರುವುದು ಒಂದು ರೀತಿಯಲ್ಲಿ ಇದನ್ನೇ ತೋರಿಸುತ್ತದೆ. ಅಂದರೆ ಭಾರತದ ಅಭಿವೃದ್ಧಿಯ ಕಥೆ ಇಲ್ಲಿಯ ಬಹುಪಾಲು ಜನತೆಗೆ ಅನ್ವಯವಾಗುವುದಿಲ್ಲ ಎಂದು ಹೆಚ್‌ಡಿಆರ್-2009 ಮತ್ತೊಮ್ಮೆ ದೃಢಪಡಿಸಿದೆ. ಈ ವರದಿಯ ಪ್ರಕಾರ ಭಾರತದ 41.6ಶೇ. ಮಂದಿ ದಿನಕ್ಕೆ 1.25 ಡಾಲರಿಗಿಂತಲೂ ಕಡಿಮೆ ಆದಾಯದಲ್ಲಿ ಬದುಕು ಸಾಗಿಸುತ್ತಿದ್ದಾರೆ. ದಿನಕ್ಕೆ ಎರಡು ಡಾಲರಿಗಿಂತ ಕಡಿಮೆ ಆದಾಯದಲ್ಲಿ ಬದುಕುವವರ ಸಂಖ್ಯೆ 75.6ಶೇ. ಮೇಲೆ ಹೇಳಿದ ಕೊಳ್ಳುವ ಶಕ್ತಿ ಹೋಲಿಕೆ ಅಥವಾ ಪಿಪಿಪಿ ಆಧಾರದಲ್ಲಿ ಲೆಕ್ಕ ಹಾಕಿದರೆ ಇದು ಪ್ರಧಾನ ಮಂತ್ರಿಗಳೇ ನೇಮಿಸಿದ ಅರ್ಜುನ್ ಸೇನ್‌ಗುಪ್ತಾ ವರದಿ ಹೇಳಿರುವುದನ್ನು ದೃಢಪಡಿಸುತ್ತದೆ. ಅಂದರೆ 77ಶೇ. ಭಾರತೀಯರು ಕೇವಲ ದಿನಕ್ಕೆ 20ರೂ.ಗಳಿಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. ಅತ್ತ, ಭಾರತದಲ್ಲಿ ಬಡತನದ ಮಟ್ಟ ಇಳಿಯುತ್ತಿದೆ ಎಂಬ ಯೋಜನಾ ಆಯೋಗದ ಭ್ರಮಾತ್ಮಕ ಅಂದಾಜನ್ನು ಇದು ಸಂಪೂರ್ಣವಾಗಿ ನಿರಾಕರಿಸುತ್ತದೆ.

ಬಹುಪಾಲು ಭಾರತೀಯ ಜನತೆಯ ಮಟ್ಟ ಬಹಳ ನಿಕೃಷ್ಟವಾಗಿದೆ ಎಂದು ನಾವು ಮತ್ತೆ-ಮತ್ತೆ ಹೇಳುತ್ತಿರುವುದನ್ನು ಹೆಚ್‌ಡಿಆರ್-2009 ದೃಢಗೊಳಿಸಿದೆ. 'ಆಮ್ ಆದ್ಮಿ'ಯ ಅಬ್ಬರ ಮತ್ತು 'ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ'ಯೆಂಬ ಪೊಳ್ಳು ಮಾತುಗಳು ಎಷ್ಟೇ ಪ್ರಮಾಣದಲ್ಲಿದ್ದರೂ ಪರಿಸ್ಥಿತಿಯನ್ನು ಬದಲಿಸಲಾರವು. ಜನಗಳ ಹೋರಾಟಗಳ ಒತ್ತಡದಿಂದಾಗಿ ಯುಪಿಎ-2 ಸರಕಾರ ಸಾರ್ವಜನಿಕ ಹೂಡಿಕೆಗಳನ್ನು ಅಪಾರ ಪ್ರಮಾಣದಲ್ಲಿ ವಿಸ್ತರಿಸಿದರೆ ಮಾತ್ರವೇ ಒಂದೆಡೆ ಉದ್ಯೋಗಾವಕಾಶಗಳನ್ನು ನಿರ್ಮಿಸಿ ಇನ್ನೊಂದೆಡೆ ದೇಶದಲ್ಲಿ ಬಹಳಷ್ಟು ಅಗತ್ಯವಾದ ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಯನ್ನು ಕಟ್ಟಬಹುದು. ●

ಸಂಪಾದಕೀಯ

ನೆರೆ ಪರಿಹಾರ : ಸರ್ಕಾರದ ಕಾರ್ಯಸೂಚಿ ಏನು?

ತಡವಾಗಿಯಾದರೂ ಸರ್ವ ಪಕ್ಷಗಳ ಒಂದು ಸಭೆಯನ್ನು ಮುಖ್ಯಮಂತ್ರಿಗಳು ನಡೆಸಿದ್ದಾರೆ. ಇದು 'ಸಾಧನೆ' ಎಂದು ಸರ್ಕಾರ ಹೇಳಿಕೊಳ್ಳಬಹುದಾದರೂ, ನೆರೆ ಹಾನಿಯ ಒಟ್ಟು ಸಂದರ್ಭವನ್ನು ಎದುರಿಸಲು ಹೇಳಿಕೊಳ್ಳುವಂತಹ ಗಟ್ಟಿ ನಿರ್ಧಾರ ಇಲ್ಲಿಂದ ಹೊರಬಂದಿಲ್ಲ. ಮೊದಲನೆಯದಾಗಿ ಇಡೀ ರಾಜ್ಯದಲ್ಲಿನ ಎಲ್ಲಾ ಪಕ್ಷಗಳು ಸಂಘಟನೆಗಳು ವ್ಯಕ್ತಿಗಳು ಒಂದಾಗಿ ಜನರನ್ನು ಉಳಿಸಲು ಹಾಗೂ ಪುನರ್ ನಿರ್ಮಾಣ ಮಾಡಲು ಧುಮುಕುವಂತಾಗಬೇಕಿತ್ತು. ಈ ದಿಶೆಯಲ್ಲಿ ಅಂತಹ ಪ್ರಯತ್ನಗಳು ಅಷ್ಟಾಗಿ ಆಗಿಲ್ಲ. ಇದರ ಅಗತ್ಯವನ್ನು ಸರ್ಕಾರವೂ ಕಂಡಿಲ್ಲ. ಸರ್ವ ಪಕ್ಷಗಳು, ಜನಸಂಘಟನೆಗಳ ಸಮಿತಿಗಳನ್ನು ಕೆಳಹಂತದಲ್ಲಿ ರಚಿಸಬೇಕೆಂಬ ಸಿಪಿಎಂ ನ ಸೂಚನೆಗಳನ್ನು ಸರ್ಕಾರ ಪರಿಗಣಿಸಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿಯೋಜನೆ ಬಳಕೆಗೆ ಕಿವಿಗೊಡಲೇ ಇಲ್ಲ. ಈ ಹೊಣೆ ಮುಖ್ಯಮಂತ್ರಿಗಳ ಮೇಲಿತ್ತು.

ಮುಖ್ಯಮಂತ್ರಿಗಳು ಸಂಭವಿಸಿದ ಹಾನಿ, ಕೈಗೊಂಡ ರಕ್ಷಣಾ ಕಾರ್ಯ, ಸಂಪನ್ಮೂಲಗಳ ಸಂಗ್ರಹದಂತಹ ವಿಷಯಗಳ ಬಗ್ಗೆ ವರದಿಯನ್ನೇನೋ ನೀಡಿದ್ದಾರೆ. ಕೇಂದ್ರದ ನೆರವನ್ನು ನಿರೀಕ್ಷಿಸಿದ್ದಾರೆ. ಸಂಪನ್ಮೂಲ ಸಂಗ್ರಹಕ್ಕೆ ಸಾರ್ವಜನಿಕ ದೇಣಿಗೆಗಳನ್ನು ಹೆಚ್ಚು ಅವಲಂಬಿಸಿದ್ದಾರೆ. ಈ ಆಪತ್ತು ನಿರ್ವಹಣೆಗಾಗಿ ಹೆಚ್ಚುವರಿ ವಿಶೇಷ ತೆರಿಗೆ ಹಾಕುವ ಪ್ರಸ್ತಾಪ ಬಂದಿದೆಯಾದರೂ ಅದು ಪೆಟ್ರೋಲ್, ಡೀಸೆಲ್‌ನಂತಹ ಜನಸಾಮಾನ್ಯರು ಬಳಸುವ ಇತರೆ ವಸ್ತುಗಳ ಮೇಲೆಯೇ ತೆರಿಗೆ ಹಾಕುವ ನಿರ್ಧಾರವು ನಿಧಿ ನೀಡಿದ ಜನಸಾಮಾನ್ಯರ ಸೀಮಿತ ಆದಾಯಕ್ಕೆ ಕೈಹಾಕಿ ಕೊಳ್ಳೆ ಹೊಡೆದಂತೆಯೇ. ಮುಖ್ಯವಾಗಿ ಇಂತಹ ವಿಶೇಷ ತೆರಿಗೆಯನ್ನು ಸರ್ಕಾರದ ಸಕಲ ಸವಲತ್ತು ಪಡೆದು ಬೆಳೆದ ರಾಜ್ಯದ ಕೈಗಾರಿಕೋದ್ಯಮಿಗಳು, ಗಣ್ಯ ಶ್ರೀಮಂತರ ಆದಾಯದ ಮೇಲೆ ವಿಧಿಸಿ ಸಂಪನ್ಮೂಲ ಸಂಗ್ರಹಿಸಬೇಕಿತ್ತು. ಅದರ ಬದಲು ಅಷ್ಟಿಷ್ಟು ದಾನ ಪಡೆದು ಸಂತೃಪ್ತರಾಗಿ ಖುಲಾಸೆ ಮಾಡಿದ್ದು ಸರಿಯಲ್ಲ. ಹೀಗಾಗಿ ಸರ್ಕಾರ ತನ್ನ ನಿರ್ಧಾರ ಪುನರ್ ಪರಿಶೀಲಿಸಲೇಬೇಕು.

ಸರ್ಕಾರವೇ ಹೇಳಿಕೊಂಡಂತೆ ಇಡೀ ಆಡಳಿತ ಯಂತ್ರ, ಚುರುಕಿನಿಂದ ಪೂರ್ಣ ಪ್ರಮಾಣದಲ್ಲಿ ಇಳಿದಿದೆಯೆಂಬುದನ್ನು ನಂಬಲಾಗದು. ಪರಿಹಾರ ಕಾರ್ಯ ನಡೆಯುತ್ತಿದೆ ಎನ್ನುವುದು ಕೆಳಹಂತಗಳಲ್ಲಿ ನೋಡಿದಾಗ ಅದರ ಪೊಳ್ಳುತನ ಬಯಲಾಗುತ್ತದೆ. ಇನ್ನು ರಜೆ ಪಡೆಯದೆ ಅನೇಕ ಹಳ್ಳಿಗಳಿಗೆ ಆಡಳಿತ ಹಗಲಿರುಳೂ ಶ್ರಮಿಸಬೇಕೆಂಬ ಸೂಚನೆ ಕೇವಲ ಪ್ರಚಾರಕ್ಕಷ್ಟೆ. ಆಡಳಿತ ಯಂತ್ರ ಹಳ್ಳಿಗಳನ್ನು ತಲುಪಿಯೇ ಇಲ್ಲ. ಶಾಸಕರು, ಸಚಿವರು ಜನರ ಕೈಗೆ ಸಿಗುತ್ತಿಲ್ಲ. ಅನ್ನಾಹಾರ, ತಾತ್ಕಾಲಿಕ ವಸತಿ, ಹೊದಿಕೆಗಳು ಇಲ್ಲದೇ ಜನ ಈಗಲೂ ಪರದಾಡುವ ಚಿತ್ರಣವನ್ನು ಮಾಧ್ಯಮಗಳು ಬಯಲಿಗಿಟ್ಟಿವೆ. ಪರಿಹಾರ ನೀಡುವಾಗಲೂ ಇದ್ದುಳ್ಳವರಿಗೆ, ಬಿಜೆಪಿಯ ಕೆಲ ಬೆಂಬಲಿಗರಿಗೆ ಮಾನದಂಡ ಮೀರಿ ಹೆಚ್ಚಿನ ಸಹಾಯ ನೀಡುತ್ತಿರುವುದು, ಸಾಮಾಜಿಕ, ಆರ್ಥಿಕವಾಗಿ ದುರ್ಬಲರಾದವರನ್ನು ನಿರ್ಲಕ್ಷಿಸುತ್ತಿರುವುದು ವರದಿಯಾಗುತ್ತಿದೆ. ಜನತೆಯು ಸರ್ಕಾರದ ಮನವಿಗೆ ಓಗೊಟ್ಟು ಅತ್ಯಂತ ಮಾನವೀಯತೆಯಿಂದ ನೀಡಿದ ಸಹಾಯವನ್ನು ಭ್ರಷ್ಟತೆಗೆ, ಪಕ್ಷಪಾತ ಮತ್ತು ರಾಜಕೀಯ ಸೇಡಿಗೆ ಬಳಸುತ್ತಿರುವುದು ಅಕ್ರಮ, ಖಂಡನೀಯ. ಪುನರ್ವಸತಿಯಲ್ಲಿಯೂ ಈ ಹಣ ಕಂಟ್ರಾಕ್ಟರ್‌ಗಳು, ಸ್ಥಳೀಯ ರಾಜಕೀಯ ನಾಯಕರ ಬಾಯಿಗೆ ಹೋಗುವ ಆತಂಕವಂತೂ ಇದೆ.

ಪರಿಹಾರ, ಪುನರ್ ನಿರ್ಮಾಣವೆಂದು ಯೋಚಿಸುವಾಗ ಅಥವಾ ಜಾರಿಗೊಳ್ಳುವಾಗ ಒಂದು ಪ್ರಮುಖ ಸಾಮಾಜಿಕ, ಆರ್ಥಿಕ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಿದೆ. ವಿಶೇಷವಾಗಿ ಆಹಾರವಾಗಲಿ, ಪರಿಹಾರದ ನೆರವೇ ಇರಲಿ ಅದು ಮೊದಲು ತಲುಪುವುದು ಮೇಲ್ಜಾತಿ, ಮೇಲ್ವರ್ಗಗಳಿಗೆ. ಅಂದರೆ ದಲಿತರು, ಅಲ್ಪಸಂಖ್ಯಾತರು ಇವುಗಳಿಂದ ವಂಚಿತರಾಗುವುದು ಸಾಮಾಜಿಕ ದುರ್ಬಲರನ್ನು ಅಥವಾ ಪ್ರಜ್ಞಾಪೂರ್ವಕವಾಗಿಯೇ ನಿರ್ಲಕ್ಷಿಸಿದ ಅಸಂಖ್ಯಾತ ಉದಾಹರಣೆಗಳು ಹಿಂದೆ ದೇಶದ ಹಲವೆಡೆ ಸಂಭವಿಸಿದ ಸುನಾಮಿ, ಒರಿಸ್ಸಾ, ಗುಜರಾತ್, ಮಹಾರಾಷ್ಟ್ರಗಳಂತಲ್ಲಿ ನೈಸರ್ಗಿಕ ಪ್ರಕೋಪದ ಸಂದರ್ಭದಲ್ಲಿ ನೋಡಬಹುದು. ಇದಾಗದಂತೆ ನಡೆಯುವುದು ಅತ್ಯಂತ ಜರೂರಿನ ಸವಾಲಾಗಿದೆ.


ಈಗೇನೋ ನೆರವನ್ನು 'ಮಹಾಪೂರ'ದಂತೆ ಸಂಗ್ರಹಿಸಲಾಗುತ್ತಿದ್ದು ಅದು ನಿಜಕ್ಕೂ ಪೂರ್ಣವಾಗಿ ಪರಿಹಾರ ಕಾರ್ಯಕ್ಕೆ ಸಿಗುವಂತಾಗಬೇಕು. ಇದನ್ನು ಹೇಗೆ ನಿರ್ವಹಿಸಬೇಕೆಂಬ ಬಗ್ಗೆ ಸರ್ಕಾರದಲ್ಲಿ ಖಚಿತ ಕಾರ್ಯ ಯೋಜನೆ ಯಿಲ್ಲ. ಹಾಗೆ ನೋಡಿದರೆ ನೈಸರ್ಗಿಕ ಪ್ರಕೋಪ ಎದುರಿಸುವಂತಹ ನೀತಿಯೊಂದನ್ನು ಕರ್ನಾಟಕ ಸರ್ಕಾರ ಇದುವರೆಗೂ ರೂಪಿಸಿಯೇ ಇಲ್ಲ.

ಇಂತಹ ಪರಿಹಾರ ಕಾರ್ಯವನ್ನು ಸರ್ಕಾರ, ಸಾರ್ವಜನಿಕ ಸಹಭಾಗಿತ್ವದೊಂದಿಗೆ ಕೈಗೊಳ್ಳುವುದಾಗಿ ಹೇಳಿರುವ ಮುಖ್ಯಮಂತ್ರಿ, ಸಚಿವರ ನಡೆಯು ಹಲವು ಅನುಮಾನ ಆತಂಕಗಳನ್ನು ಹುಟ್ಟುಸುವುದಾಗಿದೆ. ಅಂದರೆ ಸಾರ್ವಜನಿಕ ಸಹಭಾಗಿತ್ವವೆಂದರೆ ಕುಖ್ಯಾತ ಆರ್.ಎಸ್.ಎಸ್ ಎಂದಾಗಿದೆ. ಸಚಿವರು, ಸರ್ಕಾರದ ವಕ್ತಾರರು ಹೇಳಿದಂತೆ ನಿಧಿಯನ್ನು ಸರ್ಕಾರ ಇಲ್ಲವೇ ಆರ್.ಎಸ್.ಎಸ್ ಚಾಲಿತ 'ಸೇವಾ ಭಾರತಿ'ಗೆ ನೀಡಲೇಬೇಕೆಂದು ಬಹಿರಂಗ ಮನವಿ ಮಾಡಿರುವುದು ಗುಪ್ತ ಅಜೆಂಡಾದ ಬಹಿರಂಗ ಯತ್ನವಾಗಿದೆ. ಇದೇ ಆರ್‌ಎಸ್‌ಎಸ್ ಪ್ರಣೀತ 'ಸೇವಾಭಾರತಿ', ಸೇವಾ ಇಂಟರ್‌ನ್ಯಾಷನಲ್, ಹಿಂದೂ ಸ್ವಯಂಸೇವಾ ಸಂಘ, ವಿಶ್ವ ಹಿಂದೂ ಪರಿಷತ್, ಜನಕಲ್ಯಾಣ ಸಮಿತಿ ಇತ್ಯಾದಿಗಳು ಗುಜರಾತ್, ಸುನಾಮಿ ಹಾಗೂ ಮಹಾರಾಷ್ಟ್ರದಲ್ಲಿ ಹಣವನ್ನು ದುರ್ಬಳಕೆ ಮಾಡಿವೆಯಲ್ಲದೇ ಅದನ್ನು ಆರ್.ಎಸ್.ಎಸ್.ನ ಸಂಸ್ಥೆಗಳಿಗೆ ವರ್ಗಾಯಿಸಿವೆ(ಶಿಕ್ಷಣ) ಅಲ್ಪಸಂಖ್ಯಾತರ ವಿರೋಧಿ ದ್ವೇಷ ಪ್ರಸಾರಕ್ಕೆ ಬಳಸಿರುವ ನಿದರ್ಶನಗಳಿವೆ. ಇಂತಹ ಸಂಸ್ಥೆಗಳಿಗೆ ದೇಣಿಗೆ ನೀಡಿದವರೇ ವಿಚಾರಣೆ ನಡೆಸಿ (ಲಂಡನ್‌ನಲ್ಲಿರುವ ಅನಿವಾಸಿ ಭಾರತೀಯರು) ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೇಲಾಗಿ ಗುಜರಾತ್‌ನ ಮೋದಿ ಸರ್ಕಾರವಂತೂ ದಲಿತರು ಅಲ್ಪಸಂಖ್ಯಾತರಿಗೆ ಪರಿಹಾರ ನೀಡುವಲ್ಲಿ ಅತ್ಯಂತ ಅಮಾನವೀಯವಾಗಿ ನಡೆದುಕೊಂಡದ್ದು, ನಂತರದ ಮಾರಣ ಹೋಮಕ್ಕೆ ಇಂತಹ ಹಣ ಬಳಕೆಯಾದದ್ದು ಜಗಜ್ಜಾಹೀರಾಗಿದೆ. ಬರ - ನೆರೆಯಲ್ಲೂ ಆರ್‌ಎಸ್‌ಎಸ್ ಜಾಲ ವಿಸ್ತರಣೆ ಬಳಸುವ ಅಪಾಯಕಾರಿ ಕೃತ್ಯಕ್ಕೆ ಸರ್ಕಾರ ಇಳಿದಿದೆ. ಇಂತಹ ಫ್ಯಾಸಿಸ್ಟ್ ಮನೋಭಾವದ ಸಂಘಟನೆಗಳಿಗೆ ಸರ್ಕಾರವೇ ಮುಕ್ತ ಅವಕಾಶ ಕಲ್ಪಿಸಿರುವುದು ಉಗ್ರ ಖಂಡನೀಯ. ಇದನ್ನು ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಿ, ಆ ಯತ್ನಗಳನ್ನು ವಿಫಲಗೊಳಿಸಬೇಕು. ಇಂತಹ ಸ್ಥಿತಿಯಲ್ಲಿ ಸ್ಥಳೀಯವಾಗಿ ಜನತೆಯ ಸಮಿತಿಗಳನ್ನು ರಚಿಸಿ ಹಕ್ಕಿಗಾಗಿ, ತಾರತಮ್ಯದ ವಿರುದ್ಧ, ನ್ಯಾಯಯುತ ಪರಿಹಾರ ದಕ್ಕಿಸಿಕೊಳ್ಳಲು ಹೋರಾಡದೇ ಅನ್ಯ ಮಾರ್ಗವಿಲ್ಲ.

ನ್ಯಾ. ದಿನಕರನ್ ಪ್ರಕರಣ

ನ್ಯಾಯಮೂರ್ತಿಗಳ ಆಯ್ಕೆ- ಉತ್ತರದಾಯಿತ್ವ ಹೇಗೆ?

ನಮ್ಮ ಎಲ್ಲಾ ಹಳ್ಳಿಗಳಂತೆ ಇದೂ ಒಂದು ಹಳ್ಳಿ. ಹೆಸರು ಕಾವೇರಿ ರಾಜಪುರಂ. ಊರಿಗೊಂದು ಕೆರೆಯೂ ಇದೆ. ಇದು ಹಿಂದೆ ಜನರ ಪಾಲಿಗೆ ಇತ್ತು. ಜನ-ಜಾನುವಾರಗಳ ದಾಹ ತಣಿಸುತ್ತಿತ್ತು. ಹಾಗೆ ನೋಡಿದರೆ ಈ ಕೆರೆಗೂ - ಊರಿಗೂ ಬಿಡಿಸಲಾಗದ ನಂಟು. ಬಹುತೇಕ ನಮ್ಮ ನಾಗರೀಕತೆಗಳು ಇಂತಹದೇ ನದಿ, ಹೊಳೆ - ಹಳ್ಳ, ಕೊಳ್ಳ-ಕೆರೆಗಳಿಗೆ ಹೊಂದಿಕೊಂಡೇ ಬೆಳೆದಿವೆ. ಇಂತಹ ಕೆರೆಗಳ ಬಗ್ಗೆ ನಮ್ಮಲ್ಲಿಯೂ, ಪರವೂರಲ್ಲಿಯೂ ಅದರದ್ದೇ ಆದ ವಿಶಿಷ್ಟ ಜನಪದ ಹಾಡುಗಳಿವೆ. ನಂಬಿಕೆಗಳಿವೆ.



ಹೀಗೆ ಬದುಕಿನೊಂದಿಗೆ ಬೆಸೆದುಕೊಂಡ ರಾಜಪುರಂನ ಕೆರೆ ಜನರ ಪಾಲಿಗೆ ಇಲ್ಲ. ಅದಕ್ಕೆ 'ದೊಡ್ಡವರು' ಬೇಲಿ ಹಾಕಿಬಿಟ್ಟಿದ್ದಾರೆ. ಇದ್ದಕ್ಕಿದ್ದ ಹಾಗೇ ಸುರುಳಿ ಬಿಚ್ಚಿ ಕೈ ಚಾಚಿದ ಬೇಲಿ ಮುಳ್ಳುಗಳು ಕೆರೆಯಿಂದ ಜನರನ್ನು ದೂರಕ್ಕಟ್ಟಿವೆ. ಈ ಊರಿನಲ್ಲಿರುವ ಬಹುತೇಕರು ದಲಿತರೇ. ಭೂಮಿ ಇಲ್ಲದವರೇ. ಅವರ ಕಣ್ಣೆದುರೇ ನೂರಾರು ಎಕರೆ ಭೂಮಿ ಇದೆ. ಆದರೆ ಅಲ್ಲಿ ಕಿರು ಬೆರಳೂ ಇಡುವಂತಿಲ್ಲ. ಅದಕ್ಕೂ ದೊಡ್ಡವರದ್ದೇ ಬೇಲಿ! ಈ ಬೇಲಿ ಮುಳ್ಳು ದಲಿತರ ಬಾಳಿಗೆ ಹಚ್ಚಿದ ಜಾಲಿಮುಳ್ಳು!

ದೊಡ್ಡವರ ಬೇಲಿ - ಜಾಲಿ

'ದೊಡ್ಡವರ' ಇಂತಹ ಬೇಲಿ ಹರಡಿಕೊಂಡಿರುವುದು ಏನಿಲ್ಲವೆಂದರೂ ಸರಿಸುಮಾರು 550 ಎಕರೆಯಷ್ಟು. ಇದರಲ್ಲಿ ಸರ್ಕಾರದ್ದು 130 ಎಕರೆ. ಇದು ಪರಂಪೋಕು ಭೂಮಿ. ಅಂದರೆ ಭೂಹೀನ ದಲಿತರಿಗೆ ಹಂಚಬೇಕಾದ್ದು. ಆದರೆ 'ದೊಡ್ಡವರ' 'ಬಲ ನ್ಯಾಯ'ದಲ್ಲಿ ಇಲ್ಲದವರ ಕೈ ತಪ್ಪಿದೆ.

ಇಲ್ಲಿಯ ಕೆರೆಯ ಬಗ್ಗೆಯಾಗಲೀ, ಅತಿಕ್ರಮಿಸಿರುವ ಭೂಮಿಯ ಕುರಿತಾಗಲೀ ಮಾತನಾಡಲು ಸುತ್ತಲಿನ ಹಳ್ಳಿಯ ಜನ ಹೆದರುತ್ತಾರೆ. ಸ್ಥಳೀಯ ಅಧಿಕಾರಿಗಳೂ ಸಹ ತುಟಿ ಬಿಚ್ಚದಂತೆ ಅವರನ್ನು ಬೆದರಿಸಲಾಗಿದೆ. ಕಾನೂನು ಉಲ್ಲಂಘಿಸಿದವರ, ಅತಿಕ್ರಮಿಸಿರುವ ಸರ್ಕಾರದ ಭೂಮಿ ಹಂಚಬೇಕೆಂದು ದನಿ ಎತ್ತಿದವರ ಮೇಲೆ ದೌರ್ಜನ್ಯ ನಡೆದಿದೆ. ಹೋರಾಟ ನಿರತ 300 ಜನರನ್ನು ಜಿಲ್ಲಾಡಳಿತ ಬಂಧಿಸಿ, ಅಲ್ಲಿಂದ ಹೊರಗಟ್ಟಿದೆ. ಅಂದರೆ ಈ ದೊಡ್ಡವರ ಕೈ ಎಷ್ಟು ದೊಡ್ಡದು, ಹೇಗೆಲ್ಲಾ ಚಾಚಬಲ್ಲದು ಎಂಬುದು ಅರ್ಥವಾದೀತು.

ನ್ಯಾಯಮೂರ್ತಿಗಳ ನ್ಯಾಯ?!

ಹೀಗೆ ಕಾನೂನು, ಕಟ್ಟಳೆ ಉಲ್ಲಂಘಿಸಿದ ಆರೋಪವಿರುವುದು ಬೇರ್‍ಯಾರೂ ಅಲ್ಲ. ಸ್ವತಃ 'ನ್ಯಾಯದೇವತೆ'ಯೇ! ಈ ನ್ಯಾಯದೇವತೆಯದ್ದೇ ನಮ್ಮ ಕರ್ನಾಟಕದಲ್ಲಿಯೂ, ದೇಶದಲ್ಲಿಯೂ ವ್ಯಾಪಕ ಚರ್ಚೆ, ಕರ್ನಾಟಕದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿರುವ ಜ. ಪಿ.ಡಿ. ದಿನಕರನ್‌ರವರೇ ಆ 'ದೊಡ್ಡವರು'.!

ಜಸ್ಟೀಸ್ ದಿನಕರನ್‌ರವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ ಮೇಲ್ ಹಂತಕ್ಕೇರಲು ಆಯ್ಕೆಯಾಗಿರುವಾಗ ಹಲವು ವಿವಾದಗಳು ಹೊರಬಂದಿವೆ. 'ಅಕ್ರಮ ಆಸ್ತಿ' ಗಳಿಕೆ, ಅಧಿಕಾರದ ದುರ್ಬಳಕೆ, ನ್ಯಾಯ ನೀಡುವಲ್ಲಿ ಅನುಮಾನಾಸ್ಪದ ತೀರ್ಪುಗಳು, ಭ್ರಷ್ಟಾಚಾರದಂತಹ ಆರೋಪಗಳನ್ನು ಹೊತ್ತ ಇವರು ಸರ್ವೋಚ್ಚ ನ್ಯಾಯಾಲಯದ ಪೀಠ ಅಲಂಕರಿಸುವುದಾದರೂ ಎಂತು ಎಂಬ ಆಕ್ಷೇಪಗಳು ತೀವ್ರವಾಗಿ ಎದ್ದುಬಂದವು. 'ಇವುಗಳ ತನಿಖೆ ಆಗಬೇಕು ಅಲ್ಲಿಯವರೆಗೂ ಕರ್ನಾಟಕದ ನ್ಯಾಯಾಲಯದ ಕಲಾಪಗಳಲ್ಲಿ ಭಾಗಿಯಾಗುವುದು ಕೂಡದು'ಎಂದು ರಾಜ್ಯ ವಕೀಲರ ಸಂಘ ಹೇಳಿದರೆ, 'ಆರೋಪ ಮುಕ್ತರಾಗುವವರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಆಯ್ಕೆ ಆಗಕೂಡದು' ಎಂದು ಚೆನ್ನೈನ ವಕೀಲರು ಆಗ್ರಹಿಸಿದರು. ಅಂತೂ ಸದ್ಯಕ್ಕೆ ಸರ್ವೋಚ್ಚ ನ್ಯಾಯಾಲಯದ ಮಟ್ಟದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಗಳ ಒಳಗೊಂಡ ಇತರೆ ನಾಲ್ಕು ನ್ಯಾಯಮೂರ್ತಿಗಳು ಇರುವ ಕೋರ್ಟ್‌ನ ವಿಶೇಷ ಹಕ್ಕು ಬಾಧ್ಯತೆಯ ಮಂಡಳಿ (ಕಲಿಜಿಯಂ) ಯು ಇವರ ನೇಮಕಾತಿ ಪ್ರಕ್ರಿಯೆಯನ್ನು ಹಿಡಿದಿಟ್ಟಿದೆ. ಭಾರತದ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳುಳ್ಳ ಆಸ್ಟ್ರೇಲಿಯಾ ಪ್ರವಾಸದಿಂದಲೂ ದಿನಕರನ್‌ರವರು ಹೊರಗುಳಿದಿದ್ದಾರೆ. ಒಂದು ವಾರದೊಳಗೆ ಅವರ ಅಭಿಪ್ರಾಯ ತಿಳಿಸುವಂತೆ 'ಕಲಿಜಿಯಂ' ಸೂಚಿಸಿದೆ. ಪ್ರಾಥಮಿಕ ವರದಿಗಳನ್ನು ಪರಿಶೀಲಿಸಿ ವಿಚಾರಣೆಗೂ ಮು.ನ್ಯಾ. ಗಳು ಆದೇಶಿಸಿದ್ದಾರೆ. ಆದರೆ ಇಂತಹ ಗಂಭೀರ ಆರೋಪ, ವಿಚಾರಣೆಯ ಹಿನ್ನೆಲೆಯಲ್ಲಿ ತಾಂತ್ರಿಕ ವಿವರಣೆಗಳಿಗಿಂತ ನ್ಯಾ. ದಿನಕರನ್ ಕನಿಷ್ಟ ಕಲಾಪಗಳಿಂದ ಹೊರಗುಳಿಯಬೇಕಿತ್ತು. ಅಂತಹ ಯಾವುದೇ ಛಾಯೆ, ಅಳುಕು, ಸಂವೇದನೆ ಕಾಣದಿರುವುದೇ ನ್ಯಾಯಾಂಗದಲ್ಲಿನ ಒಂದು ದುರಂತ, ದುಃಸ್ಥಿತಿ.

ಏನೀ ಆರೋಪ ?

ನ್ಯಾ. ದಿನಕರನ್ ಮೇಲಿನ ಆರೋಪಗಳ ಸ್ವರೂಪವಾದರೂ ಏನು? ತಿರುವಳ್ಳೂರು ಜಿಲ್ಲೆಯ ತಿರುತ್ತಣಿ ತಾಲ್ಲೂಕಿನ ಕಾವೇರಿ ರಾಜಪುರಂನಲ್ಲಿ 440 ಎಕರೆ ಜಮೀನು.ಇದರಲ್ಲಿ 310.33 ಎಕರೆ ಪಟ್ಟಾ ಭೂಮಿ. ಇದು ಅವರ ಪತ್ನಿ, ಪುತ್ರಿಯರ ಹೆಸರಿನಲ್ಲಿದೆ. 42.27ಎಕರೆ ಸರ್ಕಾರದ ಪರಂಪೋಕು. ಇದು ಲೆಕ್ಕದಲ್ಲೇ ಇಲ್ಲ. ವೆಲ್ಲೂರು ಜಿಲ್ಲೆಯ ಅರಕ್ಕೋಣಂ ತಾಲೂಕಿನ ಅಣ್ಣೆಪಕ್ಕಂ, ಮುಲ್ಲೆ ಗಳಲ್ಲಿಯೂ ಜಮೀನು ಇದೆ. ಇವರ ಪಟ್ಟಾ ಭೂಮಿಯ ಸುತ್ತ ಇರುವ ಸರ್ಕಾರದ ಜಮೀನು ಒತ್ತುವರಿ ಮಾಡಿ ಅಕ್ರಮವಾಗಿ ಬೇಲಿ ಹಾಕಲಾಗಿದೆ. ಈ ಭೂಮಿ ಸಂಪರ್ಕಕ್ಕೆಂದು ರಸ್ತೆಯನ್ನು ಮಾಡಿದ್ದು 'ನೀತಿ ಅರಸನ್' ಪಿ.ಡಿ. ದಿನಕರನ್ ಸಾಲಾಯ್' (ನ್ಯಾಯ ಚಕ್ರವರ್ತಿ ಪಿ.ಡಿ. ದಿನಕರನ್ ರಸ್ತೆ ಎಂದು

ಪುಟ 4ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ನ್ಯಾ. ದಿನಕರನ್.....

ಪುಟ 3 ರಿಂದ

ತಮಿಳಿನಲ್ಲಿ ಬೋರ್ಡ್ ಹಾಕಲಾಗಿದೆ!

ಇದಲ್ಲದೇ ಚೈನ್ನೈನ ಪ್ರಮುಖ ಶೈಣೈ ನಗರದಲ್ಲಿ 5 ಮಹಡಿಗಳ ವಾಣಿಜ್ಯ ಸಂಕೀರ್ಣ, (2.5 ಕೋಟಿ 2001 ರ ಅಂದಾಜು), ಚೈನ್ನೈನ ಪ್ರತಿಷ್ಠಿತ ಬಡಾವಣೆ ಅನ್ನೈನಗರದಲ್ಲಿ ಮನೆ (2004-05 ರಲ್ಲಿ 90 ಲಕ್ಷ ಅಂದಾಜು) ಅರ್ಕೋಣಂ ಅಂಬೆಗಂ ನಲ್ಲಿ ವಾಸಯೋಗ್ಯ ಕಟ್ಟಡ. ಪತ್ನಿ, ಮಕ್ಕಳು, ಸಂಬಂಧಿಕರುಳ್ಳ ಕಂಪನಿಯೂ ಇದೆ. ನ್ಯಾ. ದಿನಕರನ್ ಭೂಮಾಲೀಕ ಕುಟುಂಬದಲ್ಲೇನೋ ಹುಟ್ಟಿದ್ದಾರೆ. ಆದರೆ ಇದೆಲ್ಲಾ ಪಿತ್ರಾರ್ಜಿತ ಆಸ್ತಿಯಲ್ಲ. ಕಾವೇರಿ ರಾಜಪುರಂನ ಅದರ ಸಂಬಂಧ ಇತ್ತೀಚಿನ 18 ವರ್ಷಗಳಲ್ಲಿ ಮಾತ್ರವೆನ್ನುತ್ತಾರೆ ಗ್ರಾಮಸ್ಥರು. ಅಂದರೆ ಇಷ್ಟು ಆಸ್ತಿ ಹೇಗೆ ಬಂತು ಎಂಬುದು ಒಂದಾದರೆ, ಪ್ರಮುಖವಾಗಿ ತಮಿಳುನಾಡಿನ 'ಭೂಸುಧಾರಣಾ ಕಾಯ್ದೆ 1961' ಪ್ರಕಾರ ಐದು ಜನರಿರುವ ಒಂದು ಕುಟುಂಬ 15 ಎಕರೆಗಿಂತ ಹೆಚ್ಚು ಸಾಮಾನ್ಯ ದರ್ಜೆಯ ಜಮೀನು ಹೊಂದುವಂತಿಲ್ಲ ಎಂಬ ಕಾಯ್ದೆಯ ನಗ್ನ ಉಲ್ಲಂಘನೆಯೂ ಆಗಿದೆ.

ಇವಲ್ಲದೇ ನ್ಯಾಯ ನೀಡಿಕೆಯಲ್ಲಿಯೂ ಹಲವಾರು ಆರೋಪಗಳಿವೆ. ಮೋಟಾರು ವಾಹನ ಕಾಯ್ದೆ ಉಲ್ಲಂಘಿಸಿ ಪ್ರಧಾನಿ ಕೂಡಾ ಬಳಸದಂತಹ ಕಾರಿಗೆ ವಿಶಿಷ್ಟ ನಂಬರ್ ಪ್ಲೇಟ್ ಹಾಕಿಕೊಂಡಿರುವುದು, ... ಅವಧಿಯಲ್ಲಿ 500 ಅಪರಾಧಿಗಳ ಬಿಡುಗಡೆಗೆ ಆದೇಶ - ಇದರಲ್ಲಿ ಜಾಮೀನು ಪಡೆದವರಲ್ಲಿ ಕುಖ್ಯಾತ ರೌಡಿಗಳಿದ್ದಾರೆ. ಪೆರೆಂಬೂರಿನ ಬಿನ್ನಿ ಲಿಮಿಟೆಡ್‌ನ 70 ಎಕರೆ ಬೆಲೆ ಬಾಳುವ 180 ಕೋಟಿ ಮೌಲ್ಯದ ಜಮೀನನ್ನು 66 ಕೋಟಿಗೆ ಹರಾಜಾಕುವಂತೆ ತೀರ್ಪು ನೀಡಿದ್ದರು ನ್ಯಾ. ದಿನಕರನ್. ಆದಾಯ ತೆರಿಗೆ ಇಲಾಖೆ ಒಬ್ಬ ವ್ಯಕ್ತಿಗೆ 50 ಕೋಟಿ ರೂ.ಗಳ ದಂಡ ಹಾಕಿದ ಕೇಸ್‌ನಲ್ಲಿ ಅದನ್ನು ರದ್ದುಗೊಳಿಸಿದ ಆರೋಪವೂ ಇವರ ಮೇಲೆ ಇದೆ. ಇವರ ತೀರ್ಪಿನ ವಿರುದ್ಧ ಇಲಾಖೆ ಮೇಲ್ಮನವಿಗೆ ಹೋಗಿದೆ. ಇವೆಲ್ಲಾ ತಮಿಳುನಾಡಿನ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳಾಗಿರುವಾಗ.

ಗಣಿಗಾರಿಕೆಯಲ್ಲೂ...


ಇನ್ನು ಕರ್ನಾಟಕದ ಮುಖ್ಯನ್ಯಾಯಮೂರ್ತಿಗಳಾಗಿ ಗಣಿ ಗುತ್ತಿಗೆಗೆ ಸಂಬಂಧಿಸಿದ ಹಲವು ಮೊಕದ್ದಮೆಗಳಲ್ಲಿನ ತೀರ್ಪು ಆಕ್ಷೇಪಿಸಲ್ಪಟ್ಟಿವೆ. ಅರಣ್ಯ ಭೂಮಿಯಲ್ಲಿ ಅಕ್ರಮ ಗಣಿಗಾರಿಕೆ ಸಂಬಂಧಿಸಿ ಹಲವು ಪ್ರಕರಣಗಳನ್ನು ಹಿಂತೆಗೆದುಕೊಂಡು ಧಾರವಾಡದ ಪೀಠಕ್ಕೆ (ವಲಯ ವ್ಯಾಪ್ತಿಯೆಂದು) ವರ್ಗಾಯಿಸಿದರು. 'ಹಸಿರುಪೀಠ' (ಗ್ರೀನ್ ಬೆಂಚ್) ವನ್ನು ರಚಿಸಿ ಅದರ ಮುಖ್ಯಸ್ಥರಾಗಿ ನೀಡಿದ ತೀರ್ಪುಗಳು ಅಸಹಜವಾಗಿವೆ. ಇದರಿಂದಾಗಿ ಅನೇಕ 'ಗಣಿಧಣಿ'ಗಳಿಗೆ ಲಾಭ ತಂದವು ಎಂದು ಗಮನಿಸಲಾಗಿದೆ. ಅಂತಹ ಒಂದು ಉದಾಹರಣೆಯೆಂದರೆ - ವಿನೋದ್ ಗೋಯಲ್ ಎಂಬ ಗಣಿಗಾರ 2009 ರಲ್ಲಿ ಅರ್ಜಿ ದಾಖಲಿಸಿ ಒಂದು ಲಕ್ಷ ಟನ್ ಕಬ್ಬಿಣದ ಅದಿರು ಸಾಗಿಸಲು ಅವಕಾಶ ಕೋರಿದ್ದ. ಅದು 1985 ರ ಹಿಂದೆ ಗಣಿಗಾರಿಕೆ ಮಾಡಿದ್ದಂತೆ. (ಒಪ್ಪಂದದ ಅವಧಿ ಮುಗಿದುಹೋಗಿತ್ತು). 24 ವರುಷಗಳಾದರೂ ಅದಿರನ್ನು ಎತ್ತಿರಲಿಲ್ಲವಂತೆ. ಅದಕ್ಕೆ ಈಗ ಅವಕಾಶ ನೀಡಿದ ಆದೇಶ ಅನುಮಾನಾಸ್ಪದ ಎನ್ನಲಾಗುತ್ತಿದೆ. ಇಂತಹ ಹಲವು ಪ್ರಕರಣಗಳು 'ಗ್ರೀನ್ ಬೆಂಚ್' ನಿಂದ ಹೊರಟಿವೆ.

ಸಾಧಾರ - ಆರೋಪ

ಈ ಆರೋಪಗಳನ್ನು ಅತ್ಯಂತ ಸಾಧಾರ ಸಮೇತವಾಗಿ ವಿವರಿಸಿ ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ, ಕಲಿಜಿಯಂಗೆ ನೀಡಿದವರು ತಮಿಳುನಾಡಿನ ಹಿರಿಯ, ಖ್ಯಾತ ನ್ಯಾಯವಾದಿಗಳುಳ್ಳ 'ಕಮಿಟಿ ಆನ್ ಜುಡಿಷಿಯಲ್ ಅಕೌಂಟ್‌ಬಿಲಿಟಿ' (COJA). ಅಂತಹವರನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿ ಮನವಿ ಸಲ್ಲಿಸಿದವರು ದೇಶದ 'ಫೋರಂ ಫಾರ್ ಜುಡಿಶಿಯಲ್ ಅಕೌಂಟಬಿಲಿಟಿ (ನ್ಯಾಯಾಂಗ ಉತ್ತರದಾಯಿತ್ವದ ವೇದಿಕೆ). COJA ಇದರಲ್ಲಿ ದೇಶದ ಅತ್ಯಂತ ಅನುಭವಿ, ಖ್ಯಾತ ನ್ಯಾಯವಾದಿಗಳಾದ ರಾಮ್‌ಜೇಠ್ಮಲಾನಿ, ಶಾಂತಿಭೂಷಣ್, ಫಾಲಿ ನಾರಿಮನ್, ಅನಿಲ್ ದಿವಾನ್ ಇದ್ದಾರೆ.

ಕಡಿವಾಣ ಇಲ್ಲವೇ?

ಹಿಂದೆ ಇಂತಹ ನ್ಯಾಯಮೂರ್ತಿಗಳು ಹಲವಾರು ಆರೋಪಗಳ, ಹಗರಣಗಳಲ್ಲಿ ಭಾಗಿಯಾದದ್ದು, ಕೆಲವರ ಮೇಲೆ ಪಾರ್ಲಿಮೆಂಟಿನಲ್ಲಿ ವಾಗ್ದಂಡನೆಗೆ ಒಳಗಾಗಿದ್ದು (ಕೆಲವರು ಇವರನ್ನು ಬಚಾವು ಮಾಡಿದ್ದು) ಇದೆ. ಈಗ ನ್ಯಾ. ದಿನಕರನ್‌ರವರ ಪ್ರಕರಣವು ಹಲವು ಗಂಭೀರವಾದ ಪ್ರಶ್ನೆಗಳನ್ನೆತ್ತಿದೆ. ಹೈಕೋರ್ಟ್‌ಗಾಗಲೀ,



ತಮಿಳುನಾಡಿನ ಜಮೀನಿ ಸಮೀಪ 'ನ್ಯಾ.ದಿನಕರನ್ ರಸ್ತೆ'

ಸುಪ್ರೀಂಕೋರ್ಟ್‌ಗಾಗಲಿ ನ್ಯಾಯಮೂರ್ತಿಗಳನ್ನಾಗಿ ನೇಮಿಸುವಾಗ ಆಯ್ಕೆಯ ಪ್ರಕ್ರಿಯೆ ಹೇಗಿರಬೇಕು? ಅದರ ಮಾನದಂಡಗಳೇನು? ಈ ಆಯ್ಕೆ ಸಾರ್ವಜನಿಕವಾಗಿ ಪಾರದರ್ಶಕವಾಗಿರಬೇಕೆ, ಬೇಡವೇ? ಕಳಂಕಿತರ ಮೇಲೆ ಕೈಗೊಳ್ಳುವ ಕ್ರಮಗಳೇನು? ಹೇಗೆ? ನ್ಯಾಯಮೂರ್ತಿಗಳಿಗೆ ಸಾರ್ವಜನಿಕವಾಗಿ ಉತ್ತರದಾಯಿತ್ವ ಇಲ್ಲವೇ? ಇತ್ಯಾದಿ. ಒಂದು ವೇಳೆ ನ್ಯಾ. ದಿನಕರನ್ ಸುಪ್ರೀಂಕೋರ್ಟ್‌ಗೆ ನೇಮಕಗೊಳ್ಳದಿದ್ದರೂ ಅಂತಹವರು ಕರ್ನಾಟಕದ ಮು. ನ್ಯಾ.ಮೂ. ಗಳಾಗಿ ಇರಲು ಹೇಗೆ ಸಾಧ್ಯ?

ಸಡಿಲ ವ್ಯವಸ್ಥೆ

ಹಿಂದೆ ನ್ಯಾಯಮೂರ್ತಿಗಳನ್ನು ಸರ್ಕಾರ ನೇಮಿಸುವ ಅಧಿಕಾರ ಹೊಂದಿತ್ತು. ಇಲ್ಲಿ ರಾಜಕೀಯ ಪರಿಗಣನೆಯ ಪಕ್ಷಪಾತ ಅನುಸರಿಸಲಾಗುತ್ತಿದೆ ಎಂದು ತೀವ್ರ ಆಕ್ಷೇಪದ ಬಳಿಕ ನ್ಯಾಯಾಂಗಕ್ಕೆ ಒಪ್ಪಿಸಲಾಯಿತು. 'ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಸಮಾಲೋಚಿಸಿ ರಾಷ್ಟ್ರಪತಿಗಳು ನೇಮಿಸುವುದು' ಎಂಬ ನೀತಿ ಇದೆ. ನ್ಯಾಯಮೂರ್ತಿಗಳ ಕಲಿಜಿಯಂ ರಾಷ್ಟ್ರಪತಿಗಳೊಂದಿಗೆ ಸಮಾಲೋಚಿಸಿ' ಎಂದಾಗಿದೆ. ಇಲ್ಲೂ ಆಯ್ಕೆಗೆ ಪರಿಗಣಿಸುವಲ್ಲಿ ಹಲವು ವ್ಯತ್ಯಾಸಗಳಿವೆ. ಆರೋಪಿತರು. ನೇಮಕಗೊಂಡಿರುವುದು, ಆರೋಪಗಳು ಮೇಲ್ನೋಟದಲ್ಲೇ ಸಾಬೀತಾದವರು ಹಾಗೇ ಅಧಿಕಾರದಲ್ಲಿ ಉಳಿದಿರುವುದು ಇದೆ. ಒಂದು ವೇಳೆ ದಂಡನೆ ಅಥವಾ ನ್ಯಾಯಮೂರ್ತಿ ಸ್ಥಾನದಿಂದ ವಜಾ ಗೊಳಿಸಬೇಕೆಂದರೆ ಅದನ್ನು ಜನತೆಯ ಚುನಾಯಿತ ಪರಮಾಧಿಕಾರವಾದ ಸಂಸತ್ತು ತೀರ್ಮಾನಿಸಬೇಕು. ಆಶಯ ಒಳ್ಳೆಯದೇ. ಇದನ್ನು ಕೈಗೆತ್ತಿಕೊಳ್ಳಲೇ ಕನಿಷ್ಟ 100 ಜನ ಸಂಸತ್ ಸದಸ್ಯರ ಸಹಿ ಇರಬೇಕು. ಇಂತಹ ಅಭಿಪ್ರಾಯ ರೂಪಿಸುವುದೇ ಒಂದು ಪ್ರಯಾಸದ ಕೆಲಸ. ಮೇಲಾಗಿ ಹಲವು 'ಪ್ರಾಯೋಗಿಕ ಅನುಕೂಲ'ಗಳಿಂದ ಅದು ಸಾಧ್ಯವಾಗದೇ ಹೋಗಬಹುದು. ಅಥವಾ ಸಾಧ್ಯವಾದರೂ ಸಂಸತ್ತಿನಲ್ಲಿ ಒಮ್ಮತ ಮೂಡದೆಯೂ ಇರಬಹುದು (ನಿದರ್ಶನಗಳಿವೆ). ಆದಾಗ್ಯೂ ಇದನ್ನು ಪಾಲಿಸಿದರೂ ಅದು ಆಯ್ಕೆಯ ನಂತರ. ಆದರೆ ಆಯ್ಕೆ ಹೇಗೆ?

ಈ ದೋಷಗಳು ವ್ಯಕ್ತಿಗತವಾಗಿರದೇ ಒಂದು ವ್ಯವಸ್ಥೆಯಲ್ಲೇ ಇರುವುದು ಕಾಣುತ್ತದೆ. ನ್ಯಾಯಮೂರ್ತಿಗಳ ಆಯ್ಕೆ ಹಾಗೂ ದೂರುಗಳನ್ನು ಪರಿಶೀಲಿಸಿ ಕ್ರಮ ವಹಿಸುವ ಒಂದು ಪ್ರತ್ಯೇಕ ವ್ಯವಸ್ಥೆಯೇ ಬೇಕು. ಅದು ಅತ್ಯಂತ ಪಾರದರ್ಶಕವಾಗಿರಬೇಕು.

ಪಾರದರ್ಶಕತೆ - ಉತ್ತರದಾಯಿತ್ವ

ಕೆಳಹಂತಗಳಲ್ಲಿ ನ್ಯಾಯ ದೊರೆಯಲಿಲ್ಲವೆಂದು ಹೈಕೋರ್ಟ್, ಅಂತಿಮವಾಗಿ ಸುಪ್ರೀಂಕೋರ್ಟ್‌ಗಳಿಗೆ ನ್ಯಾಯಕ್ಕಾಗಿ ಜನ ಮೊರೆ ಇಡುತ್ತಾರೆ. ಅತ್ಯಂತ ಗೌರವವನ್ನು ಇಟ್ಟುಕೊಂಡಿದ್ದಾರೆ. ಅದು ವಿಶ್ವಾಸಾರ್ಹವಾಗಿರಬೇಕಾದುದು ಅತ್ಯಗತ್ಯ. ಇಲ್ಲಿ ಭೂಮಿಯ ಪ್ರಶ್ನೆಗಳೇ ಇರಲಿ, ಕೈಗಾರಿಕೆ, ನೈಸರ್ಗಿಕ ಸಂಪತ್ತು, ಜನರ ಪ್ರಜಾಸತ್ತಾತ್ಮಕ ಮೂಲಭೂತ ಹಕ್ಕುಗಳೇ ಆಗಲಿ, ಭ್ರಷ್ಟಾಚಾರ, ಹಗರಣಗಳೇ ಇರಲಿ ಇಡೀ ದೇಶದ, ಪ್ರಜೆಗಳ ಭವಿಷ್ಯದ ಮೇಲೆಯೇ ಗಾಢ ಪರಿಣಾಮ ಬೀರುವ ಇಂತಹ ಹಲವು ಸಂಗತಿಗಳು ಅಲ್ಲಿ ತೀರ್ಮಾನಕ್ಕಾಗಿ ಬರುತ್ತವೆ. ಅದೇನೇ ಮಿತಿಗಳಿದ್ದರೂ ಕಾನೂನು, ಸಂವಿಧಾನವನ್ನು ಆಧರಿಸಿ ದೇಶದ - ಜನತೆಯ ಹಿತದಲ್ಲಿ ತೀರ್ಪು ನೀಡುವುದು ಅಗತ್ಯ. ಆದರೆ 'ಕಳಂಕಿತ'ರು ಈ ನ್ಯಾಯಾಲಯಗಳಿಗೆ ಆಯ್ಕೆಯಾದಲ್ಲಿ ದೇಶದ ಭವಿಷ್ಯವಾದರೂ ಏನಾದೀತು? ಇಂತಹ ಪ್ರಮುಖ ಸ್ಥಾನಕ್ಕೆ ಆಯ್ಕೆ ಮಾಡುವಾಗ ಪಾರದರ್ಶಕತೆ, ಉತ್ತರದಾಯಿತ್ವ ಬೇಡವೇ?

ಆದ್ದರಿಂದಲೇ ನ್ಯಾಯಾದೀಶರು - ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ, ಅವರ ಮೇಲಿನ ದೂರುಗಳ ನಿರ್ವಹಣೆಯಲ್ಲಿ ಪಾರದರ್ಶಕ, ಹೆಚ್ಚಿನ ಪ್ರಜಾಸತ್ತಾತ್ಮಕತೆ, ಪ್ರಕ್ರಿಯೆ ನೀತಿ ಅಗತ್ಯವಿದೆ. ವಿಚಾರಣೆ ನಡೆಸಿ ತಪ್ಪಿತಸ್ತರ ಮೇಲೆ ಕ್ರಮಗಳೂ ಆಗಬೇಕು. ಆದ್ದರಿಂದಲೇ ಇದಕ್ಕಾಗಿ ಹೊಸ ಆಯೋಗ ರಚಿಸಿ ಜಾರಿಗೆ ತರಲು ಸಿಪಿಐ(ಎಂ) ನಿರಂತರವಾಗಿ ಒತ್ತಾಯಿಸುತ್ತಿದೆ. ನ್ಯಾಯಮೂರ್ತಿಗಳು, ಸರ್ಕಾರ ಮತ್ತು ಅತ್ಯುತ್ತಮ ಸಾರ್ವಜನಿಕ ಪ್ರಮುಖರುಳ್ಳ ಆಯೋಗ ಬೇಕು ಎಂದು ಅದು ಕೇಳಿದೆ. ಹಲವಾರು ಪ್ರಖ್ಯಾತ ನ್ಯಾಯಾಂಗ ತಜ್ಞರು, ಹಿರಿಯ ಅನುಭವಿ ನ್ಯಾಯವಾದಿಗಳು ಇಂತಹ ನಿರ್ದಿಷ್ಟವಾದ ವಿವಿಧ ಸೂಚನೆಗಳನ್ನು ಮಂಡಿಸುತ್ತಿದ್ದಾರೆ. ಇವೆಲ್ಲವನ್ನು ಪರಿಗಣಿಸಿ ವ್ಯಾಪಕ ಸಮಾಲೋಚನೆ ಮೂಲಕ ಅಂತಹ ಪದ್ಧತಿಯನ್ನು ತುರ್ತಾಗಿ ತರಲು ಕೇಂದ್ರ ಸರ್ಕಾರ ಕ್ರಮ ವಹಿಸಬೇಕಿದೆ.

ಯುಪಿಎ ಸರ್ಕಾರದ ಮೌನವೇಕೆ?

ಆದರೆ ಇಷ್ಟೆಲ್ಲಾ ಘಟಿಸುತ್ತಿದ್ದರೂ ಕೇಂದ್ರ ಯು
ಸರ್ಕಾರ ಇಂತಹ ಪಾರದರ್ಶಕ, ಉತ್ತರದಾಯಿ
ಒಂದು ಆಯೋಗವನ್ನು ರಚಿಸಲು ಅಗತ್ಯ ಕ್ರಮಗ
ಕೈಗೊಳ್ಳದಿರುವುದು ಆಶ್ಚರ್ಯ! ಇದಕ್ಕೇನನ್ನಬೇ
ರಾಜಕೀಯ ಇಚ್ಛಾಶಕ್ತಿ ಹೀನತೆಯ ಕೊರತೆಯ
ಹೇಳಬೇಕೆ? ಅಥವಾ ಈಗಿನ ವ್ಯವಸ್ಥೆಯ ಬ
ಒಲವೆನ್ನಬೇಕೆ?

ಈಗಲೂ ನ್ಯಾ.ದಿನಕರನ್ ಸಂಬ
'ನ್ಯಾಯಾಂಗ ಉತ್ತರದಾಯಿತ್ವ'ದ ಸಂಘಟನೆ
ವಿವರಗಳೊಂದಿಗೆ ಪ್ರಶ್ನೆ ಎತ್ತದೇ ಇದ್ದಲ್ಲಿ ಕೇ
ಸರ್ಕಾರ ಹಾಗೂ ಸುಪ್ರೀಂಕೋರ್ಟ್‌ನಿಂದ ಅ
ನೇಮಕಾತಿ ಆಗಿಯೇ ಹೋಗುತ್ತಿತ್ತು. ಅಂದರೆ
ವಿಧಾನ ಎಷ್ಟು ದುರ್ಬಲವೆಂಬುದು ಇದ
ಗೊತ್ತಾಗುತ್ತದೆ.

ಇಷ್ಟಾದಮೇಲೂ ನ್ಯಾ. ದಿನಕರನ್ 'ಏನ
ಕಾದು ನೋಡುವ' ನಿರೀಕ್ಷೆಯಲ್ಲಿದ್ದಂತೆ ಕಾಣು
ಮೊದಮೊದಲು ತಾನು ದಲಿತನೆಂದು,
ಪಕ್ಷಪಾತದ ಕಾರಣದಿಂದ ಆರೋಪಿಸಲಾಗ
ಯೆಂದು ಜಾತಿ ಗುರಾಣಿಯಾಗಿ ಬಳಸಲು ನ
ಹಾಸ್ಯಾಸ್ಪದಕ್ಕೀಡಾದರು. ಆದರೆ ಇಂತಹ
ಮೇಲೂ, ಇಲ್ಲಿ ಕೆಳಗೂ ಇರಲೇಬಾರದು. ಹ
ತಪ್ಪಿಸಿಕೊಳ್ಳಲೂ ಬಾರದು. ಸೂಕ್ತ ತೀರ್ಮಾನ
ಸುಪ್ರಿಂಕೋರ್ಟ್ ಕೈಗೊಳ್ಳಬೇಕು. ಅಲ್ಲದೆ
ಒಂದು ಸಾರ್ವಜನಿಕ ಆಂದೋಲನವೇ ಬೇಕ

ಅಕ್ರಮ ಭೂಮಿ ಭೂರಹಿತರಿಗೆ ನೀಡಲು ಆಗ್ರಹ

ಮುಖ್ಯ ನ್ಯಾಯಮೂರ್ತಿ ಪಿ.ಡಿ
ದಿನಕರನ್ ಹಾಗೂ ಮತ್ತಿತರರ ವಶದಲ್ಲಿರು
ಅಕ್ರಮ ಜಮೀನನ್ನು ಸರ್ಕಾರ ಪುನಃ ವಶ
ಪಡೆದು ಭೂರಹಿತರಿಗೆ ಹಂಚಬೇಕೆಂದ
ಆಗ್ರಹಿಸಿ ಅಖಿಲ ಭಾರತ ಕಿಸಾನ್ ಸಭ
ಸಂಯೋಜಿತ ತಮಿಳುನಾಡು ವ್ಯವಸಾಯ
ಸಂಘ ಹೋರಾಟವನ್ನು ತೀವ್ರಗೊಳಿಸಿದೆ. ಈ
ಬಗ್ಗೆ ಹಲವು ಪ್ರತಿಭಟನೆಗಳನ್ನು ನಡೆಸಿದೆ
ಬೆದರಿಕೆಗಳನ್ನು ಎದುರಿಸಿದೆ. ಈ ಭೂಮಿ
ಕೂಡಲೇ ವಶಕ್ಕೆ ತೆಗೆದುಕೊಳ್ಳಲ
ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದೆ.

ಈ ಅಕ್ರಮ ಜಮೀನನ್ನು ನವೆಂಬರ್
ರೊಳಗೆ ಸರ್ಕಾರ ವಶಕ್ಕೆ ತೆಗೆದುಕೊಂಡ
ಹಂಚದೇ ಹೋದರೆ ಜನತೆಯೇ
ಭೂಮಿಯನ್ನು ಪಡೆಯುತ್ತಾರೆ ಎಂದು ಸರ್ಕಾರ
ಸಂಘದ ಜಿಲ್ಲಾ ಕಾರ್ಯದರ್ಶಿ ಕಾಂ. ತುಳ
ನಾರಾಯಣನ್ ಎಚ್ಚರಿಸಿದ್ದಾರೆ. ಈ
ಭೂರಹಿತರಿಗೆ ಭೂ ಹಂಚುವ ರೈ
ಹೋರಾಟದಲ್ಲಿ ತಾವೂ ಭಾಗವಹಿಸುವುದಾ
ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ
ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ
ಕೆ.ವರದರಾಜನ್ ಘೋಷಿಸಿದ್ದಾರೆ.

ಹೋರಾಟ ತೀವ್ರಗೊಳ್ಳುತ್ತಿದೆ.

ಆಟೋ ಚಾಲಕರು, ಮಾಲೀಕರು ಪರಿಸರ ರಕ್ಷಣೆಗಾಗಲೀ, ಮೀಟರ್ ಬದಲಾವಣೆಗಾಗಲೀ ವಿರೋಧ ಇಲ್ಲ. ಆದರೆ....

ಆಟೋ ಬಣ್ಣ ಬದಲಾವಣೆ, ದುಬಾರಿ ಮೀಟರ್ ಬಡಪಾಯಿಗಳಿಗೇಕೆ ಬರೆ ?

ಕೆ.ಎನ್.ಉಮೇಶ್

...ಹತ್ ಬೆಂಗಳೂರು ವ್ಯಾಪ್ತಿಯ 80 ಸಾವಿರ ...ಗಳ ಸುಮಾರು ಒಂದುವರೆ ಲಕ್ಷ ಚಾಲಕರು ...ಬರ್ 12 ರಂದು ಅಭೂತಪೂರ್ವ ಮುಷ್ಕರ ...ಸಿದ್ದಾರೆ. ಸಿಐಟಿಯು ಸಂಯೋಜಿತ ...ಆರ್.ಡಿ.ಯು. ಕರೆಯ ಮೇರೆಗೆ ಬೆಳಗ್ಗೆ 10.00 ...ದ ಸಂಜೆ 6.00 ರವರೆಗೆ 12 ತಾಸಿನ ಆಟೋ ...ದ್‌ನಲ್ಲಿ ಭಾಗವಹಿಸಿದ್ದಾರೆ. ಆಟೋ ಚಾಲಕರ ...ಷ್ಕರದ ಬೇಡಿಕೆ, ಕೊಡಿ ಎಂಬುದಲ್ಲ ...ಕೊಳ್ಳಬೇಡಿ ಎಂಬುದು! ಮುಷ್ಕರದ ಪ್ರಧಾನ ...ಡಿಕೆ ಆಟೋಗಳ ಬಣ್ಣ ಬದಲಾಯಿಸಬೇಡಿ ...ಬಾರಿ ಡಿಜಿಟಲ್ ಮೀಟರ್ ಬೇಡ, ದುಬಾರಿ ...ರ್ಟ್ ಕಾರ್ಡ್ ಬೇಡ, ಸಿಂಪ್ಯೂಟರ್ ಕೇಸ್ ...ರಿನಲ್ಲಿ ಹಿಂದಿನ, ಎಂದಿನದೂ ದಂಡ ವಸೂಲಿ ...ಡ ಎಂಬುದು.

...ಆಟೋ ಮೈಕ್ ಪ್ರಚಾರಕ್ಕೆ, ಧರಣಿಗೆ ಅನುಮತಿ ...ಕರಿಸಿದರೂ, ತಮ್ಮ ಬಾಲಬಡುಕ ಸಂಘಗಳು ...ರೋಕ್ಷವಾಗಿ ಮುಷ್ಕರ ವಿಫಲಗೊಳಿಸಲು ...ಸಿದರೂ ಚಾಲಕರು ಸಂಪೂರ್ಣವಾಗಿ ...ಹಿಸಿದರು. ಇದನ್ನು ಸಹಿಸದೆ ಸಾರಿಗೆ ...ವರಾದ ಆರ್. ಅಶೋಕ್ ಹೂಂಕರಿಸಿದ್ದಾರೆ. ...ಳಿಯಂತೆ ಗುಟುರು ಹಾಕುತ್ತಾ 'ಮುಷ್ಕರಕ್ಕೆ ...ರುವ ಪ್ರಶ್ನೆಯಿಲ್ಲ, ಬಣ್ಣ ಬದಲಾವಣೆ ತೀರ್ಮಾನ ...ವುದೇ ಕಾರಣಕ್ಕೂ ವಾಪಸ್ಸು ಪಡೆಯಲು ಆಗದು, ...ಸ್ಟ್ರೋಕ್ ಆಟೋಗಳಿಗೆ ಬೃಹತ್ ಬೆಂಗಳೂರಿನಲ್ಲಿ ...ಕಾಶ ಇಲ್ಲ' ಎಂದು ಅಬ್ಬರಿಸಿದ್ದಾರೆ. 2009 ...ಲ್‌ನಿಂದ ಚಾಲಕರು ಈ ಬೇಡಿಕೆಗಳಿಗಾಗಿ ...ರಾಡುತ್ತಾ ಬಂದಿದ್ದರು. ಅವರನ್ನು ಕರೆಸಿ ...ರ್ಚಿಸುವ ಕನಿಷ್ಠ ಪ್ರಜಾಪ್ರಭುತ್ವ ಪ್ರಕ್ರಿಯೆ ನಡೆಸದೆ, ...ಗಾರರಂತೆ ವರ್ತಿಸಿದ್ದಾರೆ. ಆದರೆ ಚಾಲಕರ ...ರಾಟದ ತೀವ್ರತೆ ಪರಿಣಾಮವಾಗಿ, ಮುಷ್ಕರದ ...ನ್ನಾದಿನ ಬಣ್ಣ ಬದಲಾವಣೆಗೆ ಒಂದು ವರ್ಷ ...ಾವಕಾಶ ನೀಡಿ ಆದೇಶಕ್ಕೆ ತಿದ್ದುಪಡಿ ...ದ್ದಾರೆ.


...ಯಾಣಿಕರ ತೊಂದರೆಗೆ ಪರಿಹಾರ ಎಂಬಂತೆ ...ನೂರೋ, ಮುನ್ನೂರೋ ಹೆಚ್ಚುವರಿ ಬಸ್ ...ಡುವುದಾಗಿ ಪ್ರಕಟಿಸಿದ್ದಾರೆ. ಜುಲೈನಿಂದ ...ರಾಟ ಮಾಡುತ್ತಿದ್ದರೂ ಆಗಸ್ಟ್‌ನಲ್ಲಿ ಎಲ್ಲಾ ...ಟಿಒ ಕಛೇರಿಗಳ ಮುಂದೆ ಪ್ರತಿಭಟಿಸಿದ್ದರೂ ...ಸ್ಟ್ 24 ರಂದು ಆದೇಶ ಹೊರಡಿಸಿದ್ದಾರೆ. ...ಬರ್ 15 ರಂದು ಅಕ್ಟೋಬರ್ 12 ರ ಮುಷ್ಕರದ ...ಟೀಸ್ ನೋಡಿದರೂ ಆದೇಶ ...ನಃಪರಿಶೀಲನೆಗೆ ಕ್ರಮವಹಿಸದ ಸರ್ಕಾರ, ...ವರ ಹೊಣೆಗೇಡಿತನದಿಂದಾಗಿ ಮುಷ್ಕರ ...ದಿದೆ. ಆದರಿಂದಾಗಿ ಪ್ರಯಾಣಿಕರಿಗೆ ...ೊಂದರೆಯಾಗಿದೆ ಎಂಬುದನ್ನು ಮರೆಮಾಚಲು ...ಷ್ಕರವನ್ನು ಚಾಲಕರ ವಿರುದ್ಧ ಎತ್ತಿಕಟ್ಟುವ ಯತ್ನವನ್ನು ...ವರು ನಡೆಸಿದ್ದಾರೆ.

...ಟೋ ಬಣ್ಣ ಬದಲಾವಣೆಯಿಂದ ...ಗಳೂರು ಪರಿಸರ ...ಣ..........ಆವಿಷ್ಕಾರ!

...ಬಣ್ಣ ಬದಲಾವಣೆ ಏಕೆ ಎಂಬ ಪ್ರಶ್ನೆ ಎಲ್ಲರನ್ನು ...ತ್ತಿದೆ. ಅದಕ್ಕೆ ರಾಜ್ಯ ಸರ್ಕಾರದ ಉತ್ತರ ...ದರೆ, ಬಣ್ಣ ಬದಲಾಯಿಸುವ ಮೂಲಕ ...ಗಳೂರು ಪರಿಸರ ರಕ್ಷಿಸಬಹುದಂತೆ! ಎಂತಹ ...ತ್ ಆವಿಷ್ಕಾರ! ಪರಿಸರ ರಕ್ಷಣೆಗೇನಾದರೂ ...ಲ್ ಪ್ರಶಸ್ತಿ ಕೊಟ್ಟರೆ ಅದನ್ನು ರಾಜ್ಯದ ಬಿಜೆಪಿ ಸರ್ಕಾರಕ್ಕೆ, ಸಚಿವ ಅಶೋಕ್‌ಗೆ ಕೊಡಬೇಕು! ಬೆಂಗಳೂರಿನ ಸ್ಟ್ರೋಕ್ ಆಟೋಗಳಿಗೆ ಚಾಲಕರು ಸೀಮೆ ಎಣ್ಣೆ ಹಾಕುತ್ತಾರೆ. ಹೊಗೆ ಹೆಚ್ಚು ಬರುತ್ತದೆ. ಅನೇಕ 2 ಸ್ಟ್ರೋಕ್ ಆಟೋಗಳಲ್ಲಿ ಮೆಕಾನಿಕಲ್ ಮೀಟರ್‌ಗಳಿವೆ, ಅವನ್ನು ಚಾಲಕರು ಟ್ಯಾಂಪರ್(ಹೆಚ್ಚು ಓಡುವಂತೆ ತಿರುಚುವುದು) ಮಾಡುತ್ತಾರೆ. ಪ್ರಯಾಣಿಕರನ್ನು ದೋಚುತ್ತಾರೆ. ಅದಕ್ಕೆ ಕಡಿವಾಣ ಹಾಕಲು 4 ಸ್ಟ್ರೋಕ್ ಗಾಡಿಗಳಿಗೆ, ಡಿಜಿಟಲ್ ಮೀಟರ್, ಎಲ್.ಪಿ.ಜಿ ಇಂಧನ ಆಧಾರಿತ ನೂತನ ಆಟೋಗಳು ಪರಿಸರ ಆಟೋಗಳನ್ನು ಹಸಿರು ಬಣ್ಣದ ಆಟೋಗಳನ್ನು ಬಜಾಜ್, ಟಿ.ವಿ.ಎಸ್. ಕಂಪನಿಗಳು ಮತ್ತಿತರರು ನೂತನವಾಗಿ ಬಿಡುಗಡೆ ಮಾಡಿದ್ದಾರೆ. ಮುಂದೆ ಹಸಿರು ಬಣ್ಣದ ಆಟೋಗಳು ಮಾತ್ರ ಕಂಪನಿಗಳಿಂದ ಹೊರಬರುತ್ತವೆ. ಅದಕ್ಕೆ ಸಮಾನವಾಗಿ ನಗರದ ಎಲ್ಲಾ 2 ಸ್ಟ್ರೋಕ್‌ಗಳು 4ಸ್ಟ್ರೋಕ್ ಗಳಾಗಬೇಕು, ಮೆಕಾನಿಕಲ್ ಮೀಟರ್, ಡಿಜಿಟಲ್ ಆಗಬೇಕು. ಅಂತಹಕ್ಕೆ ಮಾತ್ರ ಅರ್ಹತಾ ಪತ್ರ (ಎಫ್.ಸಿ.)ನೀಡಲಾಗುತ್ತದೆ. ಅಷ್ಟರಲ್ಲಿ ಬಣ್ಣ ಬದಲಾಯಿಸಿಕೊಳ್ಳಬೇಕು. 2009 ಅಕ್ಟೋಬರ್ 1 ರಿಂದ ಅದನ್ನು ಜಾರಿಗೊಳಿಸಬೇಕು ಎಂಬುದೇ ಸರ್ಕಾರದ 2009 ಆಗಸ್ಟ್ 24 ರ ಮೂಲ ಆದೇಶ. ಅದೇ ಗಡುವನ್ನು ಮುಷ್ಕರದಿಂದಾಗಿ ಒಂದು ವರ್ಷ 1.10.2010 ರವರೆಗೆ ಸರ್ಕಾರ ಮುಂದೂಡಿದೆ. ಆದರೆ ಹೊಸ ಆಟೋಗಳು ಮಾತ್ರ ಹಸಿರು ಬಣ್ಣದೊಂದಿಗೆ ಹೊರಬರುತ್ತವೆ ಎಂಬ ಮತ್ತೊಂದು ತಿದ್ದುಪಡಿಯನ್ನು ಆದೇಶಕ್ಕೆ ಮಾಡಿ, ಆಟೋಗಳ ಬಣ್ಣದಲ್ಲಿ ಸಮಾನ ಬಣ್ಣ ಇರಬೇಕೆಂಬ ನಿಯಮವನ್ನು ಸರ್ಕಾರವೇ ಮುರಿದಿದೆ.

ಆದರೆ ವಾಸ್ತವ ಏನು?

ಬೃಹತ್ ಬೆಂಗಳೂರು ವ್ಯಾಪ್ತಿಯಲ್ಲಿ ಸುಮಾರು 30 ರಿಂದ 40 ಸಾವಿರ 4 ಸ್ಟ್ರೋಕ್ ಆಟೋಗಳಿವೆ, ಉಳಿದ 40 ಸಾವಿರ ಆಟೋ 2 ಸ್ಟ್ರೋಕ್ ಆಟೋಗಳು ಒಟ್ಟು 80 ಸಾವಿರ ಅಧಿಕೃತ ಆಟೋಗಳು, ಅನಧಿಕೃತವಾಗಿ ಮತ್ತೆ 20 ಸಾವಿರ ಆಟೋಗಳು ಇರಬಹುದು. ಎಲ್ಲಾ ಆಟೋಗಳು ಎಲ್.ಪಿ.ಜಿ. ಇಂಧನ ಆಧಾರಿತವಾಗಿವೆ. ಏಕೆಂದರೆ ದುಬಾರಿ ಪೆಟ್ರೋಲ್ ಹಾಕಿ ಓಡಿಸಿದರೆ ಆದಾಯ ಏನು ಸಿಕ್ಕದು. ಪೆಟ್ರೋಲ್ ಗಾಡಿಗಳು ಇಲ್ಲವೇ ಇಲ್ಲ ಎಂಬ ಸ್ಥಿತಿ ಇದೆ. ಒಂದೊಮ್ಮೆ ಸೀಮೆ ಎಣ್ಣೆ ಬೆರೆಸಿ ಪರಿಸರಕ್ಕೆ ಹಾನಿ ಮಾಡುವವರಿದ್ದರೆ ಅಂತಹ ಆಟೋಗಳನ್ನು ಸರ್ಕಾರ ಹಿಡಿದು ಶಿಕ್ಷಿಸಲಿ. ಆದರೆ ಸಚಿವರ ವಾದ ಇಲ್ಲದ ಸೀಮೆ ಎಣ್ಣೆ ಹಾಕಿಸಿ ಓಡಿಸಿ ಪರಿಸರ ನಾಶ ಮಾಡುವ ಆಟೋಗಳನ್ನು ಇಲ್ಲದಂತೆ ಮಾಡುವುದಾಗಿದೆ. ಅದಕ್ಕಾಗಿ ಜನತೆ ಪರಿಸರ ಸ್ನೇಹಿ ಆಟೋಗಳನ್ನು ಗುರುತಿಸಲು ಸಹಾಯ ಮಾಡಲು, ಹಸಿರು ಆಟೋ ಕ್ರಾಂತಿ! ಹೀಗಿದೆ ಬಿಜೆಪಿ ಸರ್ಕಾರದ ಕಾಗಕ್ಕ, ಗುಬ್ಬಕ್ಕ ಕಥೆ?



ಸಚಿವರ ಮೀಟರ್ ಪುರಾಣ......!

ಆಟೋಗಳ ಮೆಕಾನಿಕಲ್ ಮೀಟರ್‌ಗಳು ಟ್ಯಾಂಪರ್ ಆಗಿವೆ. 10, 20, 30, 40 ಹೀಗೆ ಮನಸ್ಸಿಗೆ ಬಂದಷ್ಟು ಪೈಸೆಗಳ ಹೆಚ್ಚು ಇರಿಸಿಕೊಂಡು, ಜನರ ಸುಲಿಗೆ ಮಾಡುತ್ತಿದ್ದಾರೆ. ಅದನ್ನು ತಪ್ಪಿಸಲು ಡಿಜಿಟಲ್ ಮೀಟರ್ ಹಾಕಿಸಿಕೊಳ್ಳಿ ಎಂದರೆ ಹಾಕಿಸಿಕೊಳ್ಳುತ್ತಿಲ್ಲ. ಜನರನ್ನು ರಕ್ಷಿಸಲು ಈ ಕ್ರಮ ಎಂಬುದು ಸಚಿವರ, ಸರ್ಕಾರದ ಅಂಬೋಣ. ವಾಸ್ತವದಲ್ಲಿ ಮೆಕಾನಿಕಲ್ ಮೀಟರ್ ಟ್ಯಾಂಪರಿಂಗ್ ಇದೆ. ಇಲ್ಲವೆಂದಲ್ಲ, ಆದರೆ ಮೆಕಾನಿಕಲ್ ಮೀಟರ್ ಟ್ಯಾಂಪರ್ ಮಾಡಿದರೆ ಆಟೋ ಓಡುವಾಗ ಮಾತ್ರ ಓಡುತ್ತದೆ. ಡಿಜಿಟಲ್ ಮೀಟರ್ ಟ್ಯಾಂಪರ್ ಮಾಡಿದರೆ, ನಿಂತಲ್ಲೇ ಮೀಟರ್ ಓಡುತ್ತದೆ. ಅದರಿಂದಾಗಿ ಟ್ಯಾಂಪರಿಂಗ್ ನಿಲ್ಲಲ್ಲ, ಮೀಟರ್ ಬದಲಾವಣೆಯಿಂದ ಸಮಸ್ಯೆ ಬಗೆಹರಿಯದು. ಸರ್ಕಾರದ ತೂಕ ಮತ್ತು ಅಳತೆ ಇಲಾಖೆ ಟ್ಯಾಂಪರ್ ಮೀಟರ್‌ಗಳನ್ನು ಪತ್ತೆ ಹಚ್ಚುವ, ಅಂತಹ ಆಟೋಗಳನ್ನು ಸೀಜ್ ಮಾಡುವ ಕ್ರಮದಿಂದ ಮಾಡಬಹುದು. ಅದನ್ನು ಬಿಟ್ಟು, ಇಲಾಖೆಗೆ ಸಿಬ್ಬಂದಿ ನೀಡದೆ, ಅಧಿಕಾರ ನೀಡದೆ ಹಲ್ಲು ಕಿತ್ತ ಹಾವಿನಂತೆ ಮಾಡಿ. ಜನತೆಯ ಮುಂದೆ ಪೋಸ್ ಕೊಡುತ್ತಾ ಹಾವನ್ನು ಬಡಿಯುವ ಬದಲು ಪೊದೆಯನ್ನು ಬಡಿಯುವ ಯತ್ನ ಮಾಡುತ್ತಿದೆ ಸರ್ಕಾರ.

ಬಣ್ಣಕ್ಕೆ, ಡಿಜಿಟಲ್ ಮೀಟರ್‌ಗೆ ವಿರೋಧಿಗಳಲ್ಲ


ಹೈದರಾಬಾದ್‌ನಲ್ಲಿ 1700 ರೂಪಾಯಿಗೆ ಡಿಜಿಟಲ್ ಮೀಟರ್ ಸಿಗುತ್ತದೆ. ಸರ್ಕಾರ 1 ಸಾವಿರ ರೂಪಾಯಿ ಸಬ್ಸಿಡಿ ನೀಡಿ, ಚಾಲಕರಿಗೆ ತಗಲುವ ವೆಚ್ಚ ಕೇವಲ 700 ರೂಪಾಯಿ. ಆದರೆ ಬೆಂಗಳೂರಿನಲ್ಲಿ ಮಾತ್ರ ಅದಕ್ಕೆ 3700 ರೂಪಾಯಿ. ಸರ್ಕಾರದ ಸಬ್ಸಿಡಿ 1 ಸಾವಿರ ರೂಪಾಯಿ ತೆಗೆದರೆ, ಚಾಲಕರು 2700 ರೂಪಾಯಿ ನೀಡಬೇಕಾಗುತ್ತದೆ. ಏಕೆ ಇಂತಹ ದುಬಾರಿ ಮೀಟರ್ ಎಂಬುದಷ್ಟೇ ಚಾಲಕರ ಪ್ರಶ್ನೆ. ಮುಷ್ಕರದ ನಂತರ ಸರ್ಕಾರಕ್ಕೆ ಜ್ಞಾನೋದಯವಾಗಿ ಅಕ್ಟೋಬರ್ 16 ರಂದು ಈ ಕುರಿತು ಚರ್ಚೆಗೆ ಸಭೆ ನಿಗದಿಪಡಿಸಿದೆ.

ಅಂತೆಯೇ ಬಣ್ಣದ ಪ್ರಶ್ನೆಯಲ್ಲೂ ಸರ್ಕಾರವೇ ಬಣ್ಣ ಬಳಿಸಿಕೊಡುವುದಾದರೆ ಚಾಲಕರ ವಿರೋಧವೇನೂ ಇಲ್ಲ. ಆದರೆ ಸರ್ಕಾರ ಅದಕ್ಕೆ ತಯಾರಿಲ್ಲ. ಒಂದು ಆಟೋಗೆ ಬಣ್ಣ ಬದಲಾಯಿಸಲು ಕನಿಷ್ಠ 12 ಸಾವಿರ ರೂಪಾಯಿ ವೆಚ್ಚ, ಮೀಟರ್‌ಗೆ 2700 ರೂಪಾಯಿ. ಅದರ ಬ್ಯಾಟರಿಗೆ 2000 ರೂಪಾಯಿ, ಬಣ್ಣ ಬದಲಾವಣೆ ದಿನಗಳಿಗೆ ಗಾಡಿ ಬಿಸಿನೆಸ್ ಇರದ ಕಾರಣ. ಆದಾಯ ಕೋತಾ. ಎಲ್ಲಾ ಸೇರಿದರೆ, ಕನಿಷ್ಠ ಒಬ್ಬ ಚಾಲಕನಿಗೆ ರೂ. 20,000 ರೂಪಾಯಿ. ಆದರೆ, 1 ಲಕ್ಷ ಆಟೋಗಳಿಗೆ ಒಟ್ಟು 20 ಸಾವಿರ ಲಕ್ಷ ರೂಪಾಯಿ ಆಗಲಿದೆ. ಇದರ ಬಹುಭಾಗ ಬಣ್ಣ ತಯಾರಕ ಕಂಪನಿಗಳು ಮತ್ತು ಮೀಟರ್ ತಯಾರಿಕಾ ಕಂಪನಿಗಳಿಗೆ ಹೋಗಲಿದೆ. ನೋಡಿ ಹೇಗಿದೆ ಬಂಡವಾಳಿಗರ ಹಿತಕಾಯುವ ಬಿಜೆಪಿ ಸರ್ಕಾರದ ಕಾಯಕ!

ಸ್ಮಾರ್ಟ್ ಕಾರ್ಡ್ ಹೆಸರಿನ ದರೋಡೆ

ಪ್ರತಿ ಚಾಲಕನಿಗೂ ತನ್ನ ಎಲ್ಲಾ ದಾಖಲಾತಿಗಳನ್ನು ಕಂಪ್ಯೂಟರೀಕರಣಗೊಳಿಸಲು ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ. ಒಂದು ಕಾರ್ಡ್‌ಗೆ ತಗಲುವ ನಿಜ ವೆಚ್ಚ ರೂ.49 ಮಾತ್ರ, ಆದರೆ ಚಾಲಕರಿಂದ ವಸೂಲಿ ಮಾಡುತ್ತಿರುವುದು ರೂ.250. ಪ್ರತಿ ಮೂರು ವರ್ಷಕ್ಕೊಮ್ಮೆ ಮತ್ತೆ ರೂ.200 ನೀಡಬೇಕು. ಏಕೆ ಈ ದುಬಾರಿ ವೆಚ್ಚ ಎಂಬುದು ಚಾಲಕರ ಪ್ರಶ್ನೆ. ಅದಕ್ಕೆ ಉತ್ತರ ನೀಡದ ಸರ್ಕಾರ ಪ್ರತಿ ಮೂರು ವರ್ಷದ ಶುಲ್ಕ ರದ್ದು ಮಾಡಬಹುದು, ಆದರೆ ಆರಂಭಿಕ ಶುಲ್ಕ ಕಡಿಮೆ ಮಾಡಲು ಸಾಧ್ಯವಾಗದು ಎನ್ನುತ್ತದೆ. ಪ್ರತಿ ಸ್ಮಾರ್ಟ್ ಕಾರ್ಡ್‌ನಿಂದ ಸರ್ಕಾರಕ್ಕೆ ಉಳಿಯುವ ರೂ.150 ರಲ್ಲಿ ರೂ.75 ರಂತೆ ಮುಂದಿನ 3 ವರ್ಷಗಳಲ್ಲಿ ಒಟ್ಟು 7

ಪುಟ 12ಕ್ಕೆ



'ಲವ್ ಜಿಹಾದ್'
ಸಂಘ ಪರಿವಾರದ ಹೊಸ ತಂತ್ರ?

ಸಂಘ ಪರಿವಾರಕ್ಕೆ ಕರ್ನಾಟಕದಲ್ಲಿ ಗುಜರಾತ್ ಮಾದರಿಯ ಪ್ರಯೋಗ ಶಾಲೆ ದಕ್ಷಿಣ ಕನ್ನಡ. 90ರ ದಶಕದಿಂದ ಮಂಗಳೂರಿನಾದ್ಯಂತ ಕೋಮು ಗಲಭೆ ನಡೆಸಿ ಜನರನ್ನು ಧರ್ಮದ ಆಧಾರದಲ್ಲಿ ಒಡೆದು ರಾಜಕೀಯ ಪ್ರಾಬಲ್ಯ ಮೆರೆದಿರುವುದು ಈಗ ಇತಿಹಾಸ. ಮಂಗಳೂರು, ಸುರತ್ಕಲ್, ಕಲ್ಲಡ್ಕ, ಉಳ್ಳಾಲ, ಫರಂಗಿಪೇಟೆ ಮುಂತಾದ ಕಡೆ ಸೌಹಾರ್ದಕ್ಕೆ ಕಿಚ್ಚು ಹಚ್ಚಿದ ಚೆಡ್ಡಿ ಪಡೆ, ಅಲ್ಪಸಂಖ್ಯಾತರ ವಿರುದ್ಧ ಸಮರವನ್ನೇ ಸಾರಿದ್ದಾರೆ.

ಕೇವಲ ವ್ಯಾಪಾರಿಗಳು ಮತ್ತು ಶ್ರೀಮಂತರ ಹಿತಾಸಕ್ತಿಯನ್ನು ರಕ್ಷಿಸುವ ಸಂಘ ಪರಿವಾರದ ನಾಯಕರು ಆರ್ಥಿಕ ಕಾರಣಕ್ಕ ಕೋಮು ದಂಗೆಗಳನ್ನು ನಡೆಸಿದರು. ಇದಕ್ಕೆ ಅವರು ಬಳಸಿದ್ದು ದಲಿತರು ಹಾಗೂ ಇತರ ಕೆಳ ಜಾತಿಯ ಮುಗ್ಧ ಜನರನ್ನು.

ಇಂದು ಈ ಮತಾಂಧತೆ ಎಂಬ ಪಿಡುಗು ಕರಾವಳಿಯನ್ನು ಭೂತದಂತೆ ಕಾಡುತ್ತಿದೆ.

ಏನು ಈ ಲವ್ ಜಿಹಾದ್

ಕಳೆದೆರಡು ವರ್ಷಗಳಿಂದ ಅಲ್ಲಲ್ಲಿ ಗಲಭೆ . ಸೃಷ್ಟಿಸಲು ಎಲ್ಲಿಲ್ಲದ ಪ್ರಯತ್ನ ನಡೆಯಿತು. ಬಿ.ಸಿ.ರೋಡ್, ಬಜಪೆ, ಸುರತ್ಕಲ್ ಮುಂತಾದೆಡೆ ಅಲ್ಪಸಂಖ್ಯಾತರ ಮೇಲೆ ಹಲ್ಲೆ ನಡೆಯಿತು. ಗಣೇಶ ಚತುರ್ಥಿ ಹಾಗೂ ರಮ್ಜಾನ್ ಸಂದರ್ಭದಲ್ಲಿ ಮಂಗಳೂರಿನಲ್ಲಿ ಸರಣಿ ಚೂರಿ ಇರಿತ ಪ್ರಕರಣಗಳು ನಡೆಯಿತು. ಮಂಗಳೂರಿನ ಮಸೀದಿಗಳಲ್ಲಿ ಹಂದಿ ಮಾಂಸ ಹಾಗೂ ಶರವು ದೇವಸ್ಥಾನದಲ್ಲಿ ದನ ತಲೆ ಮಾಂಸ ಹಾಕಿ ಜನರನ್ನು ಕೆರಳಿಸುವ ಪ್ರಯತ್ನ ನಡೆಯಿತು. ಇದಾವುದಕ್ಕೂ ಜನ ಸೊಪ್ಪು ಹಾಕದೆ ಶಾಂತಿ-ಸೌಹಾರ್ದ ಕಾಪಾಡಿಕೊಂಡರು. ಇದರಿಂದ ಕಂಗೆಟ್ಟ ಸಂಘದ ಮಂದಿ ಹೊಸ ಮಂತ್ರ ಪಠಿಸುತ್ತಿದ್ದಾರೆ. ಅದುವೇ ಲವ್ ಜಿಹಾದ್. ಸಂಘದ ನಾಯಕರ ಪ್ರಕಾರ, ಮುಸ್ಲಿಮರು ಹಿಂದೂ ಹುಡುಗಿಯರನ್ನು ಪ್ರೇಮಿಸಿ ಮತಾಂತರ ಮಾಡುತ್ತಿದ್ದಾರೆ. ಮತಾಂತರಕ್ಕೆ ಒಪ್ಪದಿದ್ದರೆ ಸಾಮೂಹಿಕ ಅತ್ಯಾಚಾರ ನಡೆಸಿ ಹಿಂಸಿಸಲಾಗುತ್ತಿದೆ ಎಂಬುದು.

ಘಟನೆ ನಡೆದಿಲ್ಲ- ಐಜಿಪಿ

ಆದರೆ ಇದುವರೆಗೂ ಸಂಘ ಪರಿವಾರದ ಸಂಘಟನೆಗಳು ಹೇಳುವ ಹಾಗೆ ಇಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಸ್ವತಃ ಪಶ್ಚಿಮ ವಲಯದ ಐಜಿಪಿ ಗೋಪಾಲ್ ಬಿ. ಹೊಸೂರು ಸ್ಪಷ್ಟಪಡಿಸಿದ್ದಾರೆ. "ನಮಗೆ ಈ ಪದ ಹೊಸದು. ಈ ಬಗ್ಗೆ ಯಾವುದೇ ಪ್ರಕರಣ ಇದುವರೆಗೆ ದಾಖಲಾಗಿಲ್ಲ. ನಾಪತ್ತೆಯಾಗಿರುವ ಹುಡುಗಿಯರನ್ನು ಪತ್ತೆ ಹಚ್ಚಿ ಆಕೆಯ ಹೇಳಿಕೆ ಪಡೆದಾಗ ಸತ್ಯ ಏನು ಎಂದು ಹೇಳಬಹುದು. ನಾಪತ್ತೆಯಾದ ಹುಡುಗಿಯರ ಬಗ್ಗೆ ತನಿಖೆ ನಡೆಯುತ್ತಿದೆ" ಎಂದು ಹೇಳಿದ್ದಾರೆ.

ಕರಾವಳಿಯಲ್ಲಿ ಪ್ರಚಾರ ಪಡೆದಿರುವ ಈ ಲವ್ ಜಿಹಾದ್ ಕೇರಳದಲ್ಲಿ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ, ಅಲ್ಲಿ ಇಂತಹ ಘಟನೆ ನಡೆದಿದೆ ಎಂಬುದನ್ನು ಪೊಲೀಸ್ ಇಲಾಖೆ ಖಚಿತಪಡಿಸಿಲ್ಲ. ಕಾಸರಗೋಡಿನಲ್ಲಿ ನಾಪತ್ತೆಯಾಗಿರುವ ಹುಡುಗಿಯರು ತಮ್ಮ ಸ್ವ ಇಚ್ಛೆಯಿಂದ ತೆರಳಿರುವುದಾಗಿ ಹೈಕೋರ್ಟ್‌ಗೆ ಹೇಳಿಕೆ ನೀಡಿದ್ದಾರೆ.

ಮಾಧ್ಯಮದಲ್ಲಿ ಚೆಡ್ಡಿಗಳು...

ಇಂತಹ ವದಂತಿಗಳನ್ನು ಸೃಷ್ಟಿಸುವ ಮೂಲಕ ಸಮಾಜದಲ್ಲಿ ಮತ್ತೆ ಒಡಕು ಮೂಡಿಸಲು ಮಂಗಳೂರಿನ ಕೆಲ ಚೆಡ್ಡಿ ಪತ್ರಕರ್ತರೂ ಪ್ರಯ[...] ನಡೆಸುತ್ತಿದ್ದಾರೆ. ನಗರದ ವಿಜಯ ಕರ್ನಾಟಕದ 'ಹಿರಿಯ' ಫೋಟೋಗ್ರಾಫರ್ ಎಂದು ಹೇಳಿಕೊಳ್ಳುವ ವ್ಯಕ್ತಿಯೊಬ್ಬ ಸ್ವತಃ ನೈತಿಕ ಪೊಲೀಸಿಂಗ್ ನಡೆಸಿ ಸಂಘ ಪರಿವಾರದ ಮನಗೆಲ್ಲಲು ಮುಂದಾಗಿದ್ದಾನೆ. ಹಿಂದೂ ಸಂಘಟನೆಗಳಿಗೆ ಈತನೇ ಮಾಹಿತಿ ನೀಡಿ ಅನೈತಿಕ ದಾಳಿಗೆ ಸಹಕರಿಸುತ್ತಿದ್ದಾನೆ ಎಂಬ ವರದಿಗಳೂ ಇವೆ. ಕಾಮಾಲೆ ಕಣ್ಣಿನವನಿಗೆ ಲೋಕವೆಲ್ಲ ಹಳದಿ ಎಂಬಂತೆ ಮಂಗಳೂರಿನ ಮತಾಂಧರು ವರ್ತಿಸುತ್ತಿದ್ದಾರೆ.

ಆದರೆ, ಶಾಂತಿ, ನೆಮ್ಮದಿ ಬಯಸುವ ಜನ[...] ಇದಕ್ಕೆಲ್ಲ ಸೊಪ್ಪು ಹಾಕುವುದಿಲ್ಲ. ಮಠಾಧಿಪತಿಗಳು, ಸಂಘ ಪರಿವಾರದ ಸಂಘಟನೆಗಳ ನೇತೃತ್ವದಲ್ಲಿ ನಡೆಯುವ ರಾಜಕೀಯ ಲಾಭದ ಈ ಹೋರಾಟಗಳಿಗೆ ಬ[...] ಬೀಳುವುದಿಲ್ಲ.

ಸಂಜೀವಶೆಟ್ಟಿ ನಿಧನ



ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹಿರಿಯ ಸದಸ್ಯರೂ, ದಕ್ಷಿಣ ಕನ್ನಡ ಜಿಲ್ಲೆ ಜಪ್ಪಿನ ಮೊಗರು ಪ್ರದೇಶದ ಎಡ ಚಳುವಳಿಯ ಹಿರಿಯರಾದ ಸಂಜೀವ ಶೆಟ್ಟಿ(70 ವರ್ಷ) ಯವರು ಅಸೌಖ್ಯದ ಕಾರಣದಿಂದಾಗಿ 28.09.2009ರಂದು ನಿಧನರಾಗಿದ್ದಾರೆ.

ಸಂಜೀವ ಶೆಟ್ಟಿಯವರು ತಮ್ಮ ಎಳೆಯ ಪ್ರಾಯದಲ್ಲೇ ಕಮ್ಯೂನಿಸ್ಟ್ ಚಳುವಳಿಯತ್ತ ಆಕರ್ಷಿತಗೊಂಡು, ಜಪ್ಪಿನಮೊಗರು ಪ್ರದೇಶದಲ್ಲಿ ಎಡ ಚಳುವಳಿಯ ಬೆಳವಣಿಗೆಗೆ ಅವಿಶ್ರಾಂತವಾಗಿ ದುಡಿದಿದ್ದಾರೆ. ಸ್ವತಃ ಹಂಚು ಕಾರ್ಮಿಕರಾದ ಸಂಜೀವಶೆಟ್ಟಿಯವರು, ಹಂಚು ಕಾರ್ಮಿಕರ ಅನೇಕ ಹೋರಾಟಗಳಿಗೆ ನೇತೃತ್ವವನ್ನು ನೀಡುವ ಮೂಲಕ ಹಂಚು ಕಾರ್ಮಿಕರ ಸಂಘಟನೆಯ ಮುಖಂಡರಾಗಿ ಕಾರ್ಯನಿರ್ವಹಿಸಿದ್ದಾರೆ. ಜಪ್ಪಿನ ಮೊಗರು ಪ್ರದೇಶದಲ್ಲಿ ಯುವ ಜನರ ಸಂಘಟನೆಗೆ ಹೆಚ್ಚು ಗಮನ ನೀಡಿದ ಸಂಜೀವಶೆಟ್ಟಿಯವರು ಜಪ್ಪಿನ ಮೊಗರು ಗ್ರಾಮ ಯುವಕ ಮಂಡಲದ ಸ್ಥಾಪನೆಗೆ ಕಾರಣಕರ್ತ ರಾಗಿದ್ದಾರೆ. ಸಂಜೀವ ಶೆಟ್ಟಿಯವರ ನಿಧಕ್ಕೆ ಸಿಪಿಐ(ಎಂ) ಮಂಗಳೂರು ನಗರ ಸಮಿತಿ, ಡಿವೈಎಫ್ಐ, ಎಸ್‌ಎಫ್ಐ, ಜೆ.ಎಂ.ಎಸ್., ಕಟ್ಟಡ ಕಾರ್ಮಿಕರ ಸಂಘಟನೆಗಳು ತೀವ್ರ ಸಂತಾಪ ವ್ಯಕ್ತಪಡಿಸಿದೆಸಿದೆ.

ಮಂಗಳೂರಿನಲ್ಲಿ ದಲಿತ ಹಕ್ಕುಗಳ ಜಿಲ್ಲಾಮಟ್ಟದ ಕಾರ್ಯಾಗಾರ

'ಭೂ ಮಾಲಕತ್ವ ಜಾತಿ ಅಸ್ಪೃಶ್ಯತೆಯ ಮೂಲ ನೆಲೆ'

150 ವರ್ಷಗಳ ಹಿಂದೆ ಮೇಲುಜಾತಿಯಲ್ಲಿ ಹುಟ್ಟಿದ ಕುದ್ಮಾಲ್ ರಂಗರಾಯರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ದಲಿತ ಸಮುದಾಯದ ಮೇಲೆ ನಡೆಯುತ್ತಿದ್ದ ಅಮಾನವೀಯ ದೌರ್ಜನ್ಯಗಳಿಂದ ಮನನೊಂದು ತಮ್ಮ ಜೀವನವನ್ನೇ ದಲಿತರ ಉನ್ನತಿಗಾಗಿ ಮೀಸಲಿರಿಸಿ, ತನ್ನದಲ್ಲದೆ ಇತರರಿಂದಲೂ ದಾನವಾಗಿ ಪಡೆದ ಹಣ ಹಾಗೂ ಭೂಮಿಯನ್ನು ಬಳಸಿ, ದಲಿತರಿಗೆ ಶಿಕ್ಷಣ ಹಾಗೂ ಜೀವನ ನಿರ್ವಹಣೆಯ [...]ವಸ್ಥೆ ಮಾಡಿದರು. ಗಾಂಧೀಪೂರ್ವದಲ್ಲೇ ದ[...] ತೋದ್ಧಾರಕನೆಂದು ಪ್ರಖ್ಯಾತರಾದ ಇವರ ನೆ[...]ನಲ್ಲಿ ದಲಿತ ಹಕ್ಕುಗಳ ದಕ್ಷಿಣಕನ್ನಡ ಜಿಲ್ಲಾಮಟ್ಟದ ಕಾರ್ಯಾಗಾರವನ್ನು ಮಂಗಳೂರಿನ ಎ.ಕೆ.ಜಿ.ಭವನದಲ್ಲಿ ಸಿ.ಪಿಐ(ಎಂ) ಏರ್ಪಡಿಸಿತ್ತು.

ಅಕ್ಟೋಬರ್ 4 ಮತ್ತು 5 ರಂದು ನಡೆದ ಈ ಕಾರ್ಯಾಗಾರವನ್ನು ಜಿಲ್ಲೆಯ ಹಿರಿಯ ಸಿ.ಪಿ.ಐ(ಎಂ) ಪಕ್ಷದ ನಾಯಕರಾದ ಕೆ.ಆರ್.ಶ್ರೀಯಾನ್ ಅವರು ಉದ್ಘಾಟಿಸಿದರು. "ಜಾತಿ ಪದ್ಧತಿ ಅಸ್ಪೃಶ್ಯತೆಯ ಉಗಮ ಮತ್ತು ಕರ್ನಾಟಕದಲ್ಲಿ ದಲಿತ ಚಳುವಳಿ[...] ಸ್ವರೂಪ"ದ ಬಗ್ಗೆ ರಾಜ್ಯದ ಹಿರಿಯ ಮುಖ[...] ಜಿ.ಎನ್.ನಾಗರಾಜ್ ಅವರೂ, "ದಕ್ಷಿಣ ಕನ್ನ[...] ಜಿಲ್ಲೆಯ ದಲಿತ ಜಾತಿಗಳ ಆರ್ಥಿಕ ಸಾಮಾಜ[...] ಸ್ಥಿತಿಗತಿ ಮತ್ತು ಅವರ ಆಚಾರ ವಿಚಾರಗಳು" ಕುರಿ[...] ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕೃಷ್ಣಪ್ಪ ಕೊಂಚಾ[...] ಅವರೂ, "ಭಾರತದಲ್ಲಿ ಪರಿಶಿಷ್ಟ ಜಾತಿ ವರ್ಗ[...] ಸ್ಥಿತಿಗತಿ" ಬಗ್ಗೆ ರಾಜ್ಯದ ಇನ್ನೊಬ್ಬ ಹಿರಿ[...] ಮುಖಂಡರಾದ ಮಾರುತಿ ಮಾನ್ಪಡೆಯವ[...] ತರಗತಿಗಳನ್ನು ನಡೆಸಿಕೊಟ್ಟರು. ಶಿಬಿರಾರ್ಥಿಗ[...] ವಾರ್ಷಿಕ ಕ್ರಿಯಾಯೋಜನೆಯೊಂದ[...] ಸಿದ್ಧಪಡಿಸುವಲ್ಲಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದ[...] ಮಂಡಳಿ ಸದಸ್ಯರಾದ ವಸಂತ ಆಚಾರಿಯವ[...] ಮಾರ್ಗದರ್ಶನ ನೀಡಿದರು: ಭಾಗವಹಿಸಿ[...] ಸುಮಾರು 100 ಮಂದಿ ಶಿಬಿರಾರ್ಥಿಗಳ[...] ಹೆಚ್ಚಿನವರು ದಲಿತ ವರ್ಗದಿಂದ ಬ[...] ಕಾರ್ಮಿಕರಾಗಿದ್ದರು.

ಕಾರ್ಯಾಗಾರದಲ್ಲಿ ಮಾತನಾಡುತ್ತಿರುವ ಕಾಂ. ಶ್ರೀಯಾನ್



ಮಾವೋವಾದಿಗಳ ಆಚರಣೆ ವಾಸ್ತವವಾಗಿ ತೃಣಮೂಲ ಕಾಂಗ್ರೆಸಿನಂತಹ ಪ್ರತಿಗಾಮಿ ಶಕ್ತಿಗಳಿಗೇ ಪ್ರಯೋಜನ ಕೊಡುತ್ತದೆ. ಸಾಮ್ರಾಜ್ಯಶಾಹಿಯ ವಿರುದ್ಧವಾಗಲೀ, ಕೋಮುವಾದದ ವಿರುದ್ಧವಾಗಲೀ ಯಾವುದೇ ವಿರೋಧ ತೋರದ ಅವರು ವರ್ಗ ಶೋಷಣೆಯ ಕೋಟೆ ಇನ್ನೂ ಗಟ್ಟಿಯಾಗಿ ಉಳಿಯುವಂತೆ ಮಾಡುತ್ತಿದ್ದಾರೆ.

ನಕ್ಸಲೀಯ ಚಟುವಟಿಕೆಗಳು ಯಾರ ಹಿತಕ್ಕಾಗಿ?

ಒರಿಸ್ಸಾದ ಮಯೂರಭಂಜ್ ಜಿಲ್ಲೆಯಲ್ಲಿ ಒಂದು ಫುಟ್‌ಬಾಲ್ ಪಂದ್ಯದ ಬಹುಮಾನ ವಿತರಣೆ ಸಮಾರಂಭದಲ್ಲಿ ಮೂವರಿಗೆ ಗುಂಡಿಕ್ಕಿ ಹತ್ಯೆ; ಝಾರ್ಖಂಡದ ಗಿರಿಧ್ ಜಿಲ್ಲೆಯ ಇಸ್ರಿ ಎಂಬಲ್ಲಿ ಅಜ್ಮೇರ್ ಶರೀಫ್‌ಗೆ ಯಾತ್ರೆಗೆ ಹೊರಟವರ ಬಸ್ಸಿನ ಮೇಲೆ ಗುಂಡು ಹಾರಾಟದಲ್ಲಿ ಹನ್ನೆರಡು ಯಾತ್ರಿಕರ ಸ್ಥಿತಿ ಗಂಭೀರ; ಬಿಹಾರ ಮತ್ತು ಝಾರ್ಖಂಡದ ವಿವಿಧ ಭಾಗಗಳಲ್ಲಿ ರೈಲ್ವೇ ಹಳಿಗಳ ಧ್ವಂಸ; ಒರಿಸ್ಸಾದ ಸಿಮಿಲಿಪಾಲ್ ಹುಲಿ ಅಭಯಾರಣ್ಯದಲ್ಲಿ ಪ್ರವಾಸಿಗರ ಲೂಟಿ, ಅರಣ್ಯ ಕಚೇರಿಗೆ ನುಗ್ಗಿ ರೈಫಲುಗಳು, ...ರ್‌ಲೆಸ್ ಸಂಪರ್ಕ ಸಾಧನಗಳ ಲೂಟಿ; ...ಸರಾಯ್ ಜಿಲ್ಲೆಯ ಶಾಲೆಗಳು ಮತ್ತು ಛತ್ರಾದ ...ನವದೀಹ ಮಾಧ್ಯಮಿಕ ಶಾಲೆಗೆ ಡೈನಮೈಟ್; ...ರಸ್ತೆಗಳು, ಸೇತುವೆಗಳನ್ನು ಹಾಳುಗೆಡವಿ ಹೆದ್ದಾರಿಗಳಲ್ಲಿ ...ಸಂಚಾರ ಅಸ್ತವ್ಯಸ್ತ; ಸಂಪರ್ಕ ಗೋಪುರಗಳನ್ನು ...ಹಾಳುಗೆಡವಲು ಮತ್ತೆ-ಮತ್ತೆ ಸ್ಫೋಟಕಗಳ ಬಳಕೆ.

ಇದು ಕಳೆದ ವಾರದ ಮೊದಲ ಮೂರು ದಿನಗಳ ...ಸುದ್ದಿಗಳು- ಮಹಿಳೆಯರನ್ನು, ಮಕ್ಕಳನ್ನೂ ಬಿಡದ ...ಮಾವೋವಾದಿ ಹಿಂಸಾಚಾರದ ದಾಖಲೆಗಳು. ಅತ್ತ ...ಪಶ್ಚಿಮ ಬಂಗಾಳದ ಮೇದಿನಿಪುರ ಜಿಲ್ಲೆಯಲ್ಲಿ ಅವರ ...ಕೊಲೆಗಡುಕತನ ಅವ್ಯಾಹತವಾಗಿ ಸಾಗಿದೆ. ...ಝಾರ್ಖಂಡ್ ಪಾರ್ಟಿಯ ಒಬ್ಬ ಸದಸ್ಯ ಅದರ ...ಇತ್ತೀಚಿನ ಬಲಿ. ಇತ್ತೀಚಿನ ವಾರಗಳಲ್ಲಿ ಇದುವರೆಗೆ ...130 ಸಿಪಿಐ(ಎಂ) ಸದಸ್ಯರು, ಕಾರ್ಯಕರ್ತರು ಅವರ ...ಹಲ್ಲೆಗಳಲ್ಲಿ ಪ್ರಾಣ ಕಳಕೊಂಡಿದ್ದಾರೆ. ಸಿಪಿಐ(ಎಂ) ... ದಾಳಿಗಳ ಪ್ರಮುಖ ಗುರಿಯಾಗಿರಲು ...ಣಗಳೂ ಸ್ಪಷ್ಟ. ಏಕೆಂದರೆ ಮುಗ್ಧ ಜನಗಳ ...ಪ್ರಾಣ-ಆಸ್ತಿಗಳ ರಕ್ಷಣೆಯ ಸಮರದಲ್ಲಿ ಅದು ಈಗಲೂ ...ಂಚೂಣಿಯಲ್ಲಿದೆ. ಇದಲ್ಲದೆ 'ಸೈದ್ಧಾಂತಿಕ' ...ಕಾರಣಗಳೂ ಇವೆ. ಅದನ್ನು ಮುಂದೆ ನೋಡೋಣ.

ಛತ್ರಧರ ಮಹತೋ ಹೇಳಿರುವುದೇನು?

ಮಾವೋವಾದಿಗಳ ಪ್ರಭಾವ ಹರಡುತ್ತಿದೆ, ...ಏಕೆಂದರೆ ಅವರು ಬುಡಕಟ್ಟು ಜನಗಳು ಮುಂತಾದ ...ಅತ್ಯಂತ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳಿಗಾಗಿ ...ದುಡಿಯುತ್ತಿದ್ದಾರೆ ಎಂಬ ಆವೇಶಭರಿತ ರೊಮ್ಯಾಂಟಿಕ್ ವರ್ಣನೆಗಳೇನೇ ಇರಲಿ, ನಿಜಸಂಗತಿಯೆಂದರೆ, ಒಂದು ಪ್ರದೇಶದ ಮೇಲೆ ಹತೋಟಿ ಪಡೆದರೆ ಅದರಿಂದ ಹಣಕಾಸು ಪ್ರಯೋಜನವೂ ಇದೆ, ಅಧಿಕಾರ ಶಕ್ತಿಯೂ ಸಿಗುತ್ತದೆ. ಅವರ ಹಿಂಸಾತ್ಮಕ ಚಟುವಟಿಕೆಗಳ ಚಾಲಕ ಶಕ್ತಿ ಇದೇ. ಇತ್ತೀಚೆಗೆ ಪಶ್ಚಿಮ ಬಂಗಾಳದ ಲಾಲಗಡದಲ್ಲಿ ಬಂಧಿಸಲ್ಪಟ್ಟ ಮಾವೋವಾದಿ ಮುಖಂಡ ಛತ್ರಧರ ಮಹತೋ ಹೊರಗೆಡಹಿರುವ ಮಾಹಿತಿಗಳು ಇದನ್ನು ದೃಢಪಡಿಸಿವೆ. 'ಪೊಲೀಸ್ ಅತ್ಯಾಚಾರ-ವಿರೋಧಿ ಜನತಾ ಸಮಿತಿ' ಎಂಬುದು ಇದುವರೆಗೆ ಪ್ರಚಾರ ಮಾಡಿರುವಂತೆ ಸ್ಥಳೀಯ ಬುಡಕಟ್ಟು ಜನಗಳು ಸ್ವಯಂಸ್ಫೂರ್ತಿಯಿಂದ ರಚಿಸಿಕೊಂಡ ಸಂಘಟನೆಯಲ್ಲ, ಒಂದು ಪ್ರದೇಶದಲ್ಲಿ ಪೋಲೀಸರು ಮತ್ತು ಆಡಳಿತ ಪ್ರವೇಶಿಸದಂತೆ ಮಾಡಲು ಕೋಟೆಯಾಗಿ ಮಾವೋವಾದಿಗಳು ಸೃಷ್ಟಿಸಿದ ಒಂದು ಮುಖವಾಡವಷ್ಟೇ ಎಂಬುದನ್ನು ಮಹತೋ ಬಹಿರಂಗಗೊಳಿಸಿದ್ದಾನೆ. ಮಾವೋವಾದಿಗಳು ಇಂತವನ್ನು 'ವಿಮೋಚಿತ ವಲಯ' ಎನ್ನುತ್ತಾರೆ. ಆಗಷ್ಟೇ ಸಲ್ಬೋನಿ ಎಂಬ ಊರಿನ ಬಳಿ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರನ್ನು ಹತ್ಯೆ ಮಾಡಲೆಂದೇ ಸ್ಫೋಟ ನಡೆಸಿದ ಹಿನ್ನೆಲೆಯಲ್ಲಿ ಪೋಲೀಸರು ಇವರನ್ನು ಹುಡುಕುತ್ತಿದ್ದರು. ಅದರಿಂದ ತಪ್ಪಿಸಿಕೊಂಡು ಆಶ್ರಯ ಪಡೆಯಲು ಇದನ್ನು ಸೃಷ್ಟಿಸಲಾಯಿತು ಎಂಬುದೀಗ ಸ್ಪಷ್ಟವಾಗಿದೆ. ಇದರ ಮೊದಲು ನಂದಿಗ್ರಾಮದಲ್ಲಿ ಮಾಡಿದಂತೆ ಈ ಸ್ಥಳಕ್ಕೆ ಬರುವ ಎಲ್ಲಾ ರಸ್ತೆಗಳನ್ನು, ಸಂಪರ್ಕಗಳನ್ನು ಹಾಳುಗೆಡವಲಾಯಿತು. ಇದನ್ನು ಪ್ರತಿರೋಧಿಸಿದವರನ್ನೆಲ್ಲಾ, ಮುಖ್ಯವಾಗಿ ಸಿಪಿಐ(ಎಂ) ಕಾರ್ಯಕರ್ತರನ್ನು ಮುಗಿಸಿ ಬಿಡುವ ಪ್ರಯತ್ನ ನಡೆಯಿತು.

ಈ ಕೃತ್ಯಗಳಲ್ಲಿ ಅವರಿಗೆ ತೃಣಮೂಲ ಕಾಂಗ್ರೆಸಿನ ಸಂಪೂರ್ಣ ಬೆಂಬಲ ಮತ್ತು ರಕ್ಷಣೆ ಸಿಕ್ಕಿತು ಎಂದೂ ಮಹತೋ ಹೇಳಿದ್ದಾನೆ. ಇದರಿಂದಾಗಿ ಈ 'ಸಮಿತಿ' ಸುತ್ತಲಿನ ಹಳ್ಳಿಗಳಿಗೆ ತಲುಪಲು ನೆರವು ದೊರೆಯಿತು ಎಂದೂ ಬಹಿರಂಗ ಪಡಿಸಿದ್ದಾನೆ. ಸ್ಥಳೀಯ ತೃಣಮೂಲ ಮುಖಂಡರು ಇವರಿಗೆ ಆಶ್ರಯವನ್ನೂ ಕೊಟ್ಟರು, ಅವರ ಚಟುವಟಿಕೆಗಳನ್ನು ವಿಸ್ತರಿಸಲು ನೆರವೂ ಒದಗಿಸಿದರು. ತೃಣಮೂಲ ಕಾಂಗ್ರೆಸ್ ಕೇವಲ ತನ್ನ ಚುನಾವಣಾ ಲಾಭಕ್ಕಾಗಿ ಇವರಿಗೆ ಪೋಷಣೆ ಮತ್ತು ರಾಜಕೀಯ ರಕ್ಷಣೆಯನ್ನೂ ಒದಗಿಸಿದೆ ಎಂಬುದು ಸ್ಪಷ್ಟ. ತೃಣಮೂಲ ಕಾಂಗ್ರೆಸ್ ಇವರಿಗಾಗಿ ಒಟ್ಟುಗೂಡಿಸಿದ "ಬುದ್ಧಿಜೀವಿಗಳು" ಈ ಮಾವೋವಾದಿಗಳಿಗೆ ಅಪಾರ ಹಣವನ್ನೂ ಒಧಗಿಸಿದರು ಎಂದೂ ಮಹತೋ ವಿಚಾರಣೆಯಲ್ಲಿ ಬಹಿರಂಗಗೊಂಡಿದೆ. ಮಾವೋವಾದಿ-ತೃಣಮೂಲ ಕೂಟ ಎಷ್ಟೊಂದು ಬೆರೆತು ಹೋಗಿವೆಯೆಂದರೆ ಒಬ್ಬ ಮಾವೋವಾದಿ ಮುಖಂಡ ಮಮತಾ ಬ್ಯಾನರ್ಜಿಯವರನ್ನು ಪಶ್ಚಿಮ ಬಂಗಾಳದ ಮುಂದಿನ ಮುಖ್ಯ ಮಂತ್ರಿಯಾಗಿ ನೋಡಲು ತಾನು ಅಪೇಕ್ಷಿಸುವುದಾಗಿ 'ಆನಂದ ಬಝಾರ್' ಪತ್ರಿಕೆಯ ಸಂದರ್ಶನದಲ್ಲಿ (ಅಕ್ಟೋಬರ್ 4) ಬಹಿರಂಗವಾಗಿಯೇ ಸಾರಿದ್ದಾನೆ!

ಯುಪಿಎ, ಕಾಂಗ್ರೆಸ್ ಉತ್ತರ ಕೊಡಲಿ

ಹೀಗಿರುವಾಗ, ಕೇಂದ್ರ ಸಂಪುಟದಲ್ಲಿರುವ ತೃಣಮೂಲ ಕಾಂಗ್ರೆಸಿನ ಮಂತ್ರಿಗಳು ಮಾವೋವಾದಿ ಚಟುವಟಿಕೆಗಳ ವಿರುದ್ಧ ಪಶ್ಚಿಮ ಬಂಗಾಳದ ಭದ್ರತಾ ಪಡೆಗಳೊಂದಿಗೆ ಜಂಟಿಯಾಗಿ ಕಾರ್ಯಾಚರಣೆಗಳನ್ನು ನಡೆಸುತ್ತಿರುವ ಕೇಂದ್ರೀಯ ಭದ್ರತಾ ಪಡೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಡ ಹಾಕುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನು? ತೃಣಮೂಲ ಕಾಂಗ್ರೆಸು ಒಂದೆಡೆ ಈ ಪಾಶವೀ ಕೃತ್ಯಗಳನ್ನು ಸಮರ್ಥಿಸಿಕೊಂಡರೆ, ಇನ್ನೊಂದೆಡೆ ಮಾವೋವಾದಿ ಹಿಂಸಾಚಾರ ಭಾರತದ ಆಂತರಿಕ ಭದ್ರತೆಗೆ ಅತಿ ದೊಡ್ಡ ಬೆದರಿಕೆ ಎಂಬ ಪ್ರಧಾನ ಮಂತ್ರಿಗಳು ಮತ್ತು ಗ್ರಹಮಂತ್ರಿಗಳ ಅಂದಾಜನ್ನು ಅವರ ಈ ಮಂತ್ರಿಗಳು ನೇರವಾಗಿ ನಿರಾಕರಿಸುತ್ತಿದ್ದಾರೆ. ಗಢ್ಚಿರೊಲಿಯಲ್ಲಿ ಮಾವೋವಾದಿ ಹಿಂಸಾಚಾರದಲ್ಲಿ ಪ್ರಾಣ ಕಳಕೊಂಡವರ ಸಂಖ್ಯೆ ಮತ್ತು ಕಾಬೂಲಿನಲ್ಲಿ ಭಾರತೀಯ ರಾಯಭಾರಿ ಕಚೇರಿಯ ಮೇಲೆ ತಾಲಿಬಾನ್ ಭಯೋತ್ಪಾದಕ ದಾಳಿಯಲ್ಲಿ ಪ್ರಾಣ ಕಳಕೊಂಡವರ ಸಂಖ್ಯೆಯಷ್ಟೇ 17 ಎಂಬ ಅಂಶದ ಹಿನ್ನೆಲೆಯಲ್ಲಿ ಅವರ ಈ ಅಂದಾಜು ಸೂಕ್ತವೆಂದೇ ಕಾಣುತ್ತದೆ. ಆದರೂ ಈ ತೃಣಮೂಲ ಕಾಂಗ್ರೆಸಿನ ಮಂತ್ರಿಗಳು ಇನ್ನೂ ಕೇಂದ್ರ ಸಂಪುಟದಲ್ಲಿದ್ದಾರೆ. ಇದು ಹೇಗೆ ಸಾಧ್ಯ ಎಂದು ಯುಪಿಎ ಮತ್ತು ಕಾಂಗ್ರೆಸ್ ದೇಶಕ್ಕೆ ಉತ್ತರ ಕೊಡಬೇಕಾಗಿದೆ.

ಮಾವೋವಾದಿಗಳು ದಲಿತ-ಶೋಷಿತ ವಿಭಾಗಗಳ ಜನಗಳ ದನಿಗಳನ್ನು ಪ್ರತಿನಿಧಿಸುತ್ತಾರೆ ಎಂಬುದು ಕೇವಲ ಬೊಗಳೆ ಎಂಬುದು ಇನ್ನೊಮ್ಮೆ ಸಾಬೀತಾಗಿದೆ. ಮಹಾರಾಷ್ಟ್ರದ ಗಢ್ಚಿರೋಲಿಯಲ್ಲಿ ಚುನಾವಣಾ ಬಹಿಷ್ಕಾರಕ್ಕೆ ಅವರು ಕರೆ ಕೊಟ್ಟಿದ್ದರು. ಆದರೆ ಅಲ್ಲಿ ಭಾರತದ ಪ್ರಧಾನ ವಾಣಿಜ್ಯ ನಗರಿ ಮುಂಬೈಗಿಂತ ಹೆಚ್ಚು ಮತದಾನವಾಗಿದೆ. ಹೀಗೆ ಅವರು ಯಾವುದೇ ಪ್ರದೇಶದಲ್ಲಿ ಅವರು ಆಧಿಪತ್ಯ ನಡೆಸುತ್ತಿದ್ದರೆ ಅದು ಶೋಷಿತರ ಮತ್ತು ಅಂಚಿಗೆ ತಳ್ಳಲ್ಪಟ್ಟವರ ಸಹಾನುಭೂತಿ, ಬೆಂಬಲ ಅವರಿಗಿದೆ ಎಂಬುದನ್ನು ತೋರಿಸುವುದಿಲ್ಲ, ಬದಲಿಗೆ ಅವರ ಭಯೋತ್ಪಾದನೆಯನ್ನು ತೋರಿಸುತ್ತದಷ್ಟೇ.

ವರ್ಗದಾಳಿಯಲ್ಲ, ಸಮಯಸಾಧಕತನ

ಶೋಷಿತರ ಮತ್ತು ಅಂಚಿಗೆ ತಳ್ಳಲ್ಪಟ್ಟವರ ಪರವಾಗಿ ಹೋರಾಟ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಪ್ರಧಾನ ಅಜೆಂಡಾ. ಈ ಜನವಿಭಾಗಗಳ ಸಂಕಟಗಳು ನಿರ್ಮೂಲಗೊಳ್ಳಬೇಕಾದರೆ ಜನಸಮೂಹಗಳನ್ನು ರಾಜಕೀಯ ಕಾರ್ಯಾಚರಣೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಒಂದುಗೂಡಿಸಬೇಕಾಗುತ್ತದೆ. ಈ ಮೂಲಕ ಅಂತಿಮವಾಗಿ ಪ್ರಸಕ್ತ ಭಾರತೀಯ ಆಳುವ ವರ್ಗಗಳನ್ನು ಕೆಳಗಿಳಿಸಬೇಕಾಗುತ್ತದೆ, ಅಂದರೆ ಈ ಸಂಕಟಗಳಿಗೆ ಕಾರಣವಾದ, ಮನುಷ್ಯನಿಂದ ಮನುಷ್ಯನ ಶೋಷಣೆಯ ಮೇಲೆ ನಿಂತಿರುವ ಅವರ ಧೋರಣೆಗಳನ್ನು ಬದಲಿಸಬೇಕಾಗಿದೆ. ಇಂತಹ ಒಂದು ಬಲಿಷ್ಟ ಸಾಮೂಹಿಕ ಉತ್ಕ್ರಾಂತಿಯತ್ತ ಸಾಗುವ ಪ್ರತಿ ಹಂತದಲ್ಲಿ ವಿಶಾಲ ಜನಸಮೂಹಗಳ ಬದುಕನ್ನು ರಕ್ಷಿಸಲು ಆಳುವ ವರ್ಗಗಳ ಮೇಲೆ ಜನಗಳ ಒತ್ತಡಗಳು, ಪ್ರತಿಭಟನೆಗಳನ್ನು ಸಂಘಟಿಸ ಬೇಕಾಗುತ್ತದೆ. ಇದರರ್ಥ ಜನಗಳ ಮೇಲೆ ಹಿಂದೆಂದೂ ಕಾಣದ ರೀತಿಯಲ್ಲಿ ಸಂಕಟಗಳನ್ನು ಹೇರುತ್ತಿರುವ ಸಾಮ್ರಾಜ್ಯಶಾಹೀ ಜಾಗತೀಕರಣದ ಭಾಗವಾಗಿ ಬರುತ್ತಿರುವ ನವ-ಉದಾರವಾದಿ ನೀತಿಗಳನ್ನೆಲ್ಲ ವಿರೋಧಿಸಬೇಕು. ಒಂದು ದಶಕಕ್ಕೂ ಹೆಚ್ಚು ಸಮಯದಿಂದ ಆಳುವ ವರ್ಗಗಳು ಮತ್ತು ಸಾಮ್ರಾಜ್ಯಶಾಹಿಯ ಇಂತಹ ಧೋರಣೆಗಳ ವಿರುದ್ಧ ನಡೆಯುತ್ತಿರುವ ಈ ಸಮರದಲ್ಲಿ ಎಂದಾದರೂ ಈ ಮಾವೋವಾದಿಗಳು ಕಾಣಿಸಿಕೊಂಡಿದ್ದಾರೆಯೇ? ಹೋಗಲಿ, ಅವರ ದನಿ ಎಂದಾದರೂ ಕೇಳಬಂದಿದೆಯೆ?

ಅಲ್ಲದೆ ಶೋಷಣೆಯ ವಿರುದ್ಧ ಹೋರಾಟದಲ್ಲಿ ಯಶಸ್ಸು ಗಳಿಸಬೇಕಾದರೆ ಇಂತಹ ಹೋರಾಟಗಳಲ್ಲಿ ವರ್ಗ ಐಕ್ಯತೆ ಬಲಗೊಳ್ಳಬೇಕು. ಕೋಮುವಾದ ಇಂತಹ ಐಕ್ಯತೆ ಬರಬಾರದೆಂದೇ ಜನರ ಧಾರ್ಮಿಕ ಭಾವನೆಗಳನ್ನು ಬಡಿದೆಬ್ಬಿಸುತ್ತದೆ. ಆದ್ದರಿಂದ ಭಾರತೀಯ ಜನತೆಯ ಕ್ರಾಂತಿಕಾರಿ ಮುನ್ನಡೆ ಸಾಧ್ಯವಾಗಬೇಕಾದರೆ ಈ ಕೋಮುವಾದಿ ಧಾಳಿಗಳನ್ನು ದುರ್ಬಲಗೊಳಿಸಿ ಸೋಲಿಸಬೇಕಾಗುತ್ತದೆ. ಈ ಸಮರದಲ್ಲಿಯೂ ಈ ಮಾವೋವಾದಿಗಳು ಎಲ್ಲಿದ್ದಾರೆ? ಅವರು

ಪುಟ 12 ಕ್ಕೆ



ರೈಲು ಹಳಿ ಸ್ಫೋಟಿಸಿರುವ ನಕ್ಸಲೀಯರು - ಶಾಲೆಗಳನ್ನು ಧ್ವಂಸಗೊಳಿಸಿದ್ದಾರೆ

ಇದು ನಕ್ಸಲೀಯರ ಬಯಕೆ!

ಈಗ ಸಾಮ್ರಾಜ್ಯಶಾಹಿ ಪ್ರೇರಿತ ನವ-ಉದಾರವಾದಿ ನೀತಿಗಳನ್ನು ಅನುಸರಿಸುತ್ತಿರುವ ಮನಮೋಹನಸಿಂಗ್ ಸಂಪುಟದಲ್ಲಿ 'ಹಿರಿಯ' ಮಂತ್ರಿಯಾಗಿರುವ, ಹಿಂದೆ ಗುಜರಾತದಲ್ಲಿ ಕೋಮುವಾದೀ ನರಮೇಧದ ಸಂದರ್ಭದಲ್ಲಿ ವಾಜಪೇಯಿ ಸಂಪುಟದಲ್ಲಿದ್ದುಕೊಂಡು ತುಟಿ ಪಿಟಕ್ಕೆನ್ನದ ವ್ಯಕ್ತಿ ಪಶ್ಚಿಮ ಬಂಗಾಳದ ಮುಂದಿನ ಮುಖ್ಯಮಂತ್ರಿಯಾಗಬೇಕೆಂಬುದು ಈ ಮಾವೋವಾದಿಗಳ ಬಯಕೆ!

ಜನತೆ ತಮ್ಮದೆಂಬುದರ ಸರ್ವಸ್ವವನ್ನೂ ಕಳೆದು ಪರಿತಪಿಸುತ್ತಿದ್ದರೆ ಕೊಪ್ಪಳ ಜಿಲ್ಲೆಗೆ ಯಾರು ಉಸ್ತುವಾರಿ ಮಂತ್ರಿಯಾಗಬೇಕೆಂದು ಬಿಜೆಪಿಯ ಮಂತ್ರಿ, ಶಾಸಕರಲ್ಲಿ ತಿಕ್ಕಾಟ ನಡೆಯುತ್ತಿರುವುದು ನಿಜಕ್ಕೂ ದುರಂತಕಾರಿಯಾಗಿದೆ.

ನೆರೆ ಹಾವಳಿಗೆ ನಲುಗಿದ ಬರದ ನಾಡು

ಅಧಿಕಾರಸ್ಥರ ಭ್ರಷ್ಟಾಚಾರ

ಹೆಚ್.ಗಂಗಾಧರಯ್ಯ

ಹೈದರಾಬಾದ್ ಕರ್ನಾಟಕದ ಬರದ ನಾಡಲ್ಲಿ ಕೊಪ್ಪಳ ಜಿಲ್ಲೆಯೂ ಒಂದು. ಅತಿಹೆಚ್ಚು ಮಳೆಯನ್ನೂ ಕಾಣದ, ಅತಿ ಹೆಚ್ಚು ಚಳಿಯನ್ನೂ ಕಾಣದ ಬಿಸಿಲ ಜಿಲ್ಲೆಯು ಕೊಪ್ಪಳಕ್ಕೆ ಅತಿವೃಷ್ಟಿಯಾಗಿದ್ದು ಜನತೆ ತತ್ತರಿಸಿಹೋಗಿದ್ದಾರೆ. ಹಿಂದೆಂದೂ ಕಂಡರಿಯದ ಮಳೆ ಜವರಾಯನಂತೆ ಬಂದು ಜಿಲ್ಲೆಯನ್ನು ನಡುಗಿಸಿಬಿಟ್ಟಿದ್ದಾನೆ. ಸೆಪ್ಟೆಂಬರ್ ಕೊನೆಯವಾರದಲ್ಲಿ ಸಾಮಾನ್ಯವಾಗಿ ವಾಡಿಕೆಯಂತೆ 18 ರಿಂದ 20 ಮಿ.ಮೀ ಮಳೆಯಾಗುತ್ತಿತ್ತು. ಆದರೆ ಕೇವಲ ಮೂರು ದಿವಸದಲ್ಲಿ 140 ಮಿ.ಮೀ ಮಳೆಯಾಗಿ ಜಿಲ್ಲೆಯು ಚಿತ್ರಣವನ್ನೇ ಬದಲು ಮಾಡಿದೆ. ಹೆಚ್ಚು ಮಳೆಗೆ ತಡೆದುಕೊಳ್ಳಲಾಗದ ಮಣ್ಣಿನ ಮನೆಗಳು ಹೆಚ್ಚಾಗಿದ್ದು ಸರಕಾರದ ಅಂಕಿಸಂಖ್ಯೆಗಳ ಪ್ರಕಾರ 15 ಸಾವಿರ ಪಕ್ಕಾ ಮನೆಗಳು ಕುಸಿದುಬಿದ್ದಿವೆ. 40 ಸಾವಿರ ಮನೆಗಳು ಭಾಗಶಃ ಕುಸಿದಿವೆ. ಆದರೆ ಇದಕ್ಕಿಂತಲೂ ಹೆಚ್ಚಾಗಿ ಮನೆಗಳು ನಾಶವಾಗಿವೆ. ಜಿಲ್ಲಾ ಆಡಳಿತವು ಸಮೀಕ್ಷೆ ಮಾಡುವಲ್ಲಿ ತಾರತಮ್ಯವೆಸಗಿದೆ. ಮತ್ತು ವಿಫಲವಾಗಿದೆ. ಈ ಮನೆಗಳ ಹಾನಿ ನಷ್ಟ ಅಂದಾಜು 220 ಲಕ್ಷ ರೂ. ಎಂದು ಹೇಳಲಾಗುತ್ತಿದೆ. 3978 ಹೆಕ್ಟೇರ್ ಪ್ರದೇಶದ ಬೆಳೆನಾಶವಾಗಿದೆ. ಇದರ ಹಾನಿ 170 ಲಕ್ಷ ಎಂದು ಅಂದಾಜಿಸಲಾಗಿದೆ. 85 ಲಕ್ಷದಷ್ಟು ರಸ್ತೆ, ಕೆರೆಗಳು ಹಾಳಾಗಿವೆ. ಸುಮಾರು 500 ದನಕರುಗಳು ಸಾವನ್ನಪ್ಪಿವೆ. ಸುಮಾರು 25ರಿಂದ 30 ಜನರು ಮಳೆ ಮತ್ತು ಪ್ರವಾಹಕ್ಕೆ ಸಿಲುಕಿ, ಮನೆ ಬಿದ್ದು ಪ್ರಾಣ ಕಳೆದುಕೊಂಡಿದ್ದಾರೆ. ಇಷ್ಟೆಲ್ಲಾ ಘಟನೆಗಳು ಕಣ್ಮುಂದೆ ನಡೆಯುತ್ತಿದ್ದರೂ ಜಿಲ್ಲಾಡಳಿತ ಸರಿಯಾಗಿ ಸ್ಪಂದಿಸುತ್ತಿಲ್ಲ. ಗಂಜೀ ಕೇಂದ್ರವನ್ನು ಆರಂಭಿಸಿಲ್ಲ. ಕೆಲವೊಂದು ಕಡೆಗೆ ಸಂಘ ಸಂಸ್ಥೆಗಳ ಒತ್ತಡದಿಂದ ಮತ್ತು ಜನರ ಒತ್ತಡಕ್ಕೆ ಸಿಲುಕಿ ಗಂಜೀಕೇಂದ್ರ ಆರಂಭಿಸಿ ಈಗ ಎಲ್ಲವೂ ಮುಚ್ಚಲಾಗಿದೆ. ನದಿ ಪಾತ್ರದ ಗ್ರಾಮಗಳು ಸಂಪೂರ್ಣ ಜಲಾವೃತವಾಗಿವೆ. ಹಿರೇಹಳ್ಳದ ಹಿನ್ನೀರಿನಿಂದ ಕೆಲವು ಗ್ರಾಮಗಳು ಮುಳುಗಡೆಯಾಗಿವೆ.

ಕೆಲವೊಂದು ಗ್ರಾಮದ ಮನೆಗಳಲ್ಲಿ ಇನ್ನೂತನಕ ಕೆಸರು ನಿಂತಿದೆ. ಅಡುಗೆ ಮಾಡಲು, ಮಲಗಿಕೊಳ್ಳಲು ಸ್ಥಳವಿಲ್ಲದಂತಾಗಿದೆ.

ಹಿರೇಹಳ್ಳದ ಹಿನ್ನೀರಿನಿಂದ ಶಿರೂರು, ಮುತ್ತಾಳ, ವೀರಾಪುರ ಚಂಡೂರ, ಆಡವಿಹಳ್ಳಿ, ಗಂಗಾವತಿ ತಾಲ್ಲೂಕಿನ ನಂದಿಹಳ್ಳಿ ಕಕ್ಕರಗೊಳ, ಶಾಲಿಗನೂರ, ಕುಂಟೋಜಿ, ಕರಡೋಣಿ ಈ ಗ್ರಾಮಗಳನ್ನು ಸ್ಥಳಾಂತರಿಸಲು ಸರಕಾರ ತೀರ್ಮಾನಿಸಿದ್ದು 80 ಕೋಟಿ ರೂ. ಖರ್ಚು ತಗಲುತ್ತದೆಂದು ತಿಳಿಸಿದ್ದಾರೆ. ಆದರೆ ಈ ತೀರ್ಮಾನಗಳು ಜಾರಿಯಾಗುತ್ತವೆಯೋ ಇಲ್ಲವೋ ಎಂದು ಜನತೆ ಆತಂಕದಲ್ಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ಯಾರು?

ಈಗ ಪ್ರಸ್ತುತ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಗೋವಿಂದ ಕಾರಜೋಳ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಅವರ ತವರು ಜಿಲ್ಲೆ ವಿಜಾಪೂರದಲ್ಲಿ ನೆರೆ ಹಾವಳಿ ಹೆಚ್ಚಾಗಿದ್ದು ಅಲ್ಲಿಯ ಉಸ್ತುವಾರಿ ಸಚಿವರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂಬ ಕಾರಣವೊಡ್ಡಿ ಬಿಜಾಪುರದಲ್ಲಿಯೇ ಮುಕ್ಕಾಂ ಹೂಡಿದ್ದಾರೆ. ಈಗ ಕೊಪ್ಪಳ ಜಿಲ್ಲೆಯ ಉಸ್ತುವಾರಿಯನ್ನು ತಾತ್ಕಾಲಿಕವಾಗಿ ಪಡೆಯಲು ಕಟ್ಟಾಸುಬ್ರಹ್ಮಣ್ಯ ನಾಯ್ಡು ಮತ್ತು ಹರತಾಳ ಹಾಲಪ್ಪನವರು ಪೈಪೋಟಿ ನಡೆಸಿದ್ದಾರೆ. ಇದರ ಮರ್ಮ ಯಾರಿಗೂ ತಿಳಿಯುತ್ತಿಲ್ಲ. ಕನಕಗಿರಿ ಶಾಸಕರು ಶಿವರಾಜ ತಂಗಡಗಿ ಯವರು ಉಸ್ತುವಾರಿ ಸಚಿವರಾಗಲು ತೀವ್ರ ಪೈಪೋಟಿ ನಡೆಸಿದ್ದಾರೆ ಎನ್ನಲಾಗುತ್ತಿದೆ. ಈ ಸಚಿವರುಗಳ ಪೈಪೋಟಿ ಗಮನಿಸಿದರೆ ಇಲ್ಲಿಯ ಲಾಭಾಂಶ ಹೆಚ್ಚಿರ ಬಹುದೆಂದು ಊಹಿಸಲಾಗಿದೆ. ನಿರಕ್ಷರ ಜನತೆಯ ಲಾಭ ಪಡೆದುಕೊಂಡು ಜಿಲ್ಲೆಯನ್ನು ಲೂಟಿ ಮಾಡಲು ನಾ ಮುಂದು, ತಾ ಮುಂದು ಎಂಬ ಪೈಪೋಟಿ ತೀವ್ರಗತಿಯಲ್ಲಿದೆ. ಇವರಿಗೆ ತಮ್ಮ ಹಣದ (ಕಮಿಷನ್ ಪರ್ಸೆಂಟೇಜ್) ಲಾಭಾಂಶದ ಬಗ್ಗೆ ಬಹಳ ಚಿಂತೆಯಿದೆ. ಆದರೆ ಮತ ಕೊಟ್ಟು ಅಧಿಕಾರ ನಡೆಸಲು ಅವಕಾಶ ಮಾಡಿದ ಜನತೆಯ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದಂತಾಗಿದೆ. ಜನಸೇವೆಯೇ ಜನಾರ್ಧನ ಸೇವೆಯೆಂದು ಪ್ರತಿಯೊಂದು ಸಂದರ್ಭದಲ್ಲಿ ಹೇಳುತ್ತಿರುವ ಇವರ ಬಗ್ಗೆ ಜನತೆ ತೀವ್ರ ಆಕ್ರೋಶಗೊಂಡಿದ್ದಾರೆ. ನಿರಾಶ್ರಿತರ ಗೋಳನ್ನು ಕೇಳುವವರೇ ಇಲ್ಲದಂತಾಗಿದೆ. ಇವರಿಗೆ ಜಿಲ್ಲೆಯ ಜನತೆ ಹಿಡಿ ಶಾಪ ಹಾಕುತ್ತಿದ್ದಾರೆ. ಈ ಹೂವಿನ (ಬಿ.ಜೆ.ಪಿ) ಸರಕಾರವನ್ನು ಕಿತ್ತು ಹಾಕಬೇಕೆಂದು ಜನರು ಮಾತನಾಡಿಕೊಳ್ಳುವದು ದಿನನಿತ್ಯದ ಕೆಲಸವಾಗಿದೆ. ಇವರಿಗೆ ತಕ್ಕಪಾಠ ಕಲಿಸುವುದಾಗಿ ನಿರ್ಣಯಿಸಿದ್ದಾರೆ.



ಹುನಗುಂದ ಸಂತ್ರಸ್ತರು

ಪರಿಹಾರದಲ್ಲಿ ಭ್ರಷ್ಟಾಚಾರ

ಸಚಿವರ, ಶಾಸಕರ ಬೆಂಗಲಿಗರೆಂದು ಕೆಲವೊಂದು ಮರಿ ಪುಡಾರಿಗಳು ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ನಿರೀಕ್ಷಕರ, ತಹಶೀಲ್ದಾರರ ಮೇಲೆ ಒತ್ತಡ ತಂದು ತಮ್ಮ ಮನೆಗಳು ನೆರೆಹಾವಳಿಗೆ ಸಂಪೂರ್ಣ ನಾಶವಾಗಿರುತ್ತವೆಂದು ಒಂದೇ ಕುಟುಂಬದಲ್ಲಿ 4ರಿಂದ 6 ಜನರ ಹೆಸರಿನಲ್ಲಿ ಪರಿಹಾರದ ಹಣವನ್ನು ಪಡೆದುಕೊಳ್ಳುತ್ತಿದ್ದಾರೆ. ಕೆಲವೊಂದು ಅಧಿಕಾರಿಗಳಿಗೆ ಜಿಲ್ಲಾ/ತಾಲ್ಲೂಕು ಗ್ರಾಮ ಪಂಚಾಯ್ತಿಯು ಕೆಲವೊಂದು ಸದಸ್ಯರು ಕಂದಾಯ ಅಧಿಕಾರಿಗಳ ಮೇಲೆ ಹಲ್ಲೆಗೆ ಮುಂದಾದ ಘಟನೆಗಳು ನಡೆಯುತ್ತಿವೆ. ಇವರ ಕಿರುಕುಳಕ್ಕೆ ಹೆದರಿ ಕೆಲವೊಂದು ಕಂದಾಯ ಅಧಿಕಾರಿಗಳು ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಜನತೆಯಿಂದ ತಿರಸ್ಕೃತಗೊಳ್ಳುತ್ತಿದ್ದಾರೆ. ಇದೇ ಸಂದರ್ಭವೆಂದು ಕೆಲವೊಂದು ಅಧಿಕಾರಿಗಳು ತಮಗೆ ಬೇಕಾದವರ ಹೆಸರುಗಳಲ್ಲಿ ಬೇನಾಮಿ ಹೆಸರಿನಲ್ಲಿ (ಯಾವುದೇ ದಾಖಲೆಗಳು ಇಲ್ಲದಿದ್ದರೂ) ಪರಿಹಾರದ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಜನತೆ ತೀವ್ರ ಆತಂಕದಲ್ಲಿದ್ದು ಆಕ್ರೋಶಭರಿತರಾಗಿದ್ದಾರೆ.



ರಾಯಚೂರು ಜನರ ಬದುಕು


ಸಂಪೂರ್ಣ ಬಿದ್ದ ಪಕ್ಕಾ ಮನೆಗಳಿಗೆ, ಬಟ್ಟೆ, ಅಡುಗೆ ಸಾಮಾನು, ಹೊದಿಕೆ ಮತ್ತು ಮನೆ ನಿರ್ಮಿಸಿಕೊಳ್ಳಲು 7000 ರೂ. (ಏಳು ಸಾವಿರ ಮಾತ್ರ) ಚೆಕ್ ನೀಡಲಾಗುತ್ತಿದೆ. ಭಾಗಶ: ಬಿದ್ದ ಮನೆಗಳಿಗೆ ಮೂರು ಸಾವಿರದಿಂದ 4,500 ರೂ (ನಾಲ್ಕು ಸಾವಿರದ ಐದುನೂರು ಮಾತ್ರ) ಚೆಕ್ ನೀಡಲಾಗುತ್ತಿದೆ. ಈ ಚೆಕ್‌ಗಳು ನಗರದ ವಾಣಿಜ್ಯ ಬ್ಯಾಂಕ್‌ಗಳಲ್ಲಿ 'ಅಕೌಂಟ್ ಪೇಯಿ' ಇರುವದರಿಂದ ಇಂತಹ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯುವುದಕ್ಕೆ ಜ ಪರದಾಡುತ್ತಿದ್ದಾರೆ. ಸರಕಾರ ಮತ್ತು ಬ್ಯಾಂಕ್ ನಡುವೆ ಒಂದು ರೀತಿಯ ಸಂಘರ್ಷ ಉಂಟಾ ಬ್ಯಾಂಕ್‌ನವರು ಇಷ್ಟೊಂದು (ಸಾವಿರಗ ಖಾತೆಗಳನ್ನು ತೆರೆಯಲು ನಮ್ಮಿಂದ ಸಾಧ್ಯ ಸರಕಾರವು ಬೇರರ್, ಚೆಕ್‌ನ್ನು ನೀಡಲಿ ಎ ಹೇಳುತ್ತಾರೆ. ಆದರೆ ಸರಕಾರದವರು ಬೇರರ್ ನೀಡಿದರೆ ಪರಿಹಾರದಲ್ಲಿ ಭ್ರಷ್ಟಾಚ ಹೆಚ್ಚಾಗುತ್ತದೆಂದು ಸರಕಾರದ ಆದೇಶವಿದೆ. ನ ಏನು ಮಾಡಲು ಸಾಧ್ಯವಿಲ್ಲವೆ ಹೇಳುತ್ತಿದ್ದಾರೆ. "ಅಂತೂಇಂತೂ ಕ ಮಕ್ಕಳಿಗೆ ರಾಜ್ಯವಿಲ್ಲ" ವೆನ್ನುವಂತೆ ಜ ಪರಿಹಾರದ ಹಣ ಕನ್ನಡಿಯೊಳ ಗಂಟಾಗಿದೆ. ಸರಕಾರ ಮತ್ತು ಬ್ಯಾಂಕ ಮಧ್ಯೆ ತಿಕ್ಕಾಟದಲ್ಲಿ ಜನರಿಗೆ ತಲುಪುತ್ತಿಲ್ಲ. "ಗಂಡ ಹೆಂಡಿರ ಜಗಳ ಕೂಸು ಬಡವಾಯಿತು" ಎನ್ನುವ ಜನರ ಕಷ್ಟಕ್ಕೆ ಪರಿಹಾರ ಸಿಗುತ್ತಿಲ್ಲ.

ಈಗ ತಾತ್ಕಾಲಿಕವಾಗಿ ಸಂತ್ರ 20 ಕೆ.ಜಿ ಅಕ್ಕಿ, 1 ಕೆ.ಜಿ. ಬೇ ಲೀಟರ್ ಅಡುಗೆ ಎಣ್ಣೆ ಕೊಡುತ್ತೇನೆ ಪ್ರತಿಯೊಂದು ಗ್ರಾಮದಲ್ಲಿ ಸರಕಾರ ಹೇಳುತ್ತಿ ರಿಂದ 3 ವಾರ ಕಳೆದರೂ ಈ ರೇಷನ್ ಇನ್ನೂ ಯಾವುದೇ ಗ್ರಾಮವನ್ನು ತಲುಪಿಲ್ಲ. ತಲು ಗ್ರಾಮಗಳಲ್ಲಿ ವಿತರಿಸಿಲ್ಲ. ಹೀಗೆ ಸಂತ್ರ ಉಪವಾಸ ಬೀಳುವ ಪರಿಸ್ಥಿತಿ ನಿರ್ಮಾಣವಾ ಸರಕಾರ ಮತ್ತು ರಾಜಕೀಯ ಪಕ್ಷಗಳು ಇವರ ಗಮನ ಕೊಡಬೇಕಾಗಿದೆ.

ಪುಟ



ಗಂಗಾವತಿ ಮನೆ ಕುಸಿತ



ಬಳ್ಳಾರಿ

ಮಳೆಯ ರೌದ್ರ ನರ್ತನಕ್ಕೆ ತತ್ತರಿಸಿದ ಬಿಸಿಲ ನಾಡು

ಪರಿಹಾರ ನೀಡಿಕೆಯಲ್ಲಿ ತಾತ್ಸಾರ, ತಾರತಮ್ಯ


ಬರದ ಬರೆಯ ಗಾಯ ಇನ್ನು ಹಸಿ ಹಸಿಯಿರುವಾಗಲೇ ಉತ್ತರ ಕರ್ನಾಟಕದಲ್ಲಿ ಸುರಿದ ಮಳೆಯ ರೌದ್ರ ನರ್ತನದಲ್ಲಿ ಬಳ್ಳಾರಿ ಜಿಲ್ಲೆಯ ಜನರ ಬದುಕು ಸಂಪೂರ್ಣವಾಗಿ ಕೊಚ್ಚಿ ಹೋಗಿದೆ. ಬಿಸಿಲ ನಾಡಿನ ಜನ ನಲಿದು ಹೋಗಿದ್ದಾರೆ. ಮೂರು ದಿನಗಳ ಕಾಲ ಹಗಲಿರುಳೆನ್ನದೆ ಸತತವಾಗಿ ಧೋ ಎಂದು ಸುರಿದ ಕುಂಭದ್ರೋಣ ಮಳೆಯಿಂದ ಜಿಲ್ಲೆಯಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳಾದ ತುಂಗಭದ್ರ, ವೇದಾವತಿ(ಹಗರಿ) ಮತ್ತು ನಾರಿಹಳ್ಳಗಳು ಹುಚ್ಚೆದ್ದು ...ದು ಜನರ ಬದುಕನ್ನು ಆಪೋಶನ ತೆಗೆದು ಕೊಂಡಿವೆ. ನೂರಾರು ಹಳ್ಳಗಳು ಭೋರ್ಗರೆಯುತ್ತಾ ಹರಿದು ಊರೂರುಗಳಿಗೆ ನುಗ್ಗಿ ಜನ ತತ್ತರಿಸುವಂತೆ ಮಾಡಿವೆ. ಡಣಾಪುರ ಕರೆ, ದರೋಜಿ ಕೆರೆಗಳು ಒಡೆದು ಹತ್ತಾರು ಸಾವಿರ ಎಕರೆ ಬೆಳೆಯನ್ನು ನಾಶ ಮಾಡಿವೆ. ಹತ್ತು ಸಾವಿರಕ್ಕಿಂತ ಹೆಚ್ಚು ದನ - ಕುರಿಗಳು ಸತ್ತು ನದಿ ಹಳ್ಳಗಳಲ್ಲಿ ಸಾಲುಸಾಲಾಗಿ ತೇಲಿಕೊಂಡು ಹೋಗಿವೆ. ಜನರು ನಾಲ್ಕೈದು ದಿನಗಳ ಕಾಲ ಜೀವ ಕೈಯಲ್ಲಿ ಹಿಡಿದುಕೊಂಡು ಮಳೆಯಲ್ಲಿ ನೆನೆಯುತ್ತಾ



...ನ್ನ ನೀರಿಗಾಗಿ ಗೋಳಾಡುವ ದೃಶ್ಯ ಸಾಮಾನ್ಯವಾಗಿದೆ. ಈ ಧಾರುಣ ಪರಿಸ್ಥಿತಿಯನ್ನು ನೋಡಿದರೆ ಎಂತಹ ...ಲ್ಲು ಹೃದಯರ ಕಣ್ಣಲ್ಲೂ ನೀರು ಹರಿಯುತ್ತದೆ. ಹತ್ತಾರು ಜನ ನದಿ ಹಳ್ಳಗಳಲ್ಲಿ ಕೊಚ್ಚಿಹೋಗಿದ್ದಾರೆ. ...ಂದೆಂದು ಕಂಡರಿಯದ ಪ್ರಳಯಕಾರಿ ಮಳೆಗೆ ಜನ ದಂಗಾಗಿ ಹೋಗಿದ್ದಾರೆ.

ಕೊಚ್ಚಿ ಹೋದ ಬದುಕು ಹುಚ್ಚೆದ್ದು ಹರಿದ ಹೊಳೆ

... ಹಳ್ಳಗಳಲ್ಲಿ ಜನರ ಬದುಕೆಲ್ಲ ಕೊಚ್ಚಿಹೋಗಿದೆ. ಒಂದು ಲಕ್ಷಕ್ಕಿಂತ ಹೆಚ್ಚು ಕುಟುಂಬಗಳು ಮನೆ ಮಠಗಳನ್ನು ಕಳೆದು ಕೊಂಡಿವೆ, ಹತ್ತಾರು ಲಕ್ಷ ಜನ ಬೀದಿ



ಕೃಪೆ: ಪ್ರಜಾವಾಣಿ

> ಪ್ರವಾಹದ ಅಬ್ಬರ ಜನರ ಬದುಕನ್ನು ಛಿದ್ರ ಮಾಡಿದ್ದರೆ ಗಾಯದ ಮೇಲೆ ಉಪ್ಪು ಸುರಿದಂತೆ ಪರಿಹಾರ ನೀಡಿಕೆಯಲ್ಲಿ ತಾತ್ಸಾರ, ಪಕ್ಷಪಾತ ಮೆರೆಯುತ್ತಿದೆ.

ಬಸು

ಪಾಲಾಗಿದ್ದಾರೆ. ಮನೆಗಳಲ್ಲಿದ್ದ ಕಾಳು - ಕಡಿ, ಬಟ್ಟೆ, ಬೀಜ ಗೊಬ್ಬರ, ಹಣ ಎಲ್ಲವನ್ನು ಕಳೆದು ಕೊಂಡು ಉಟ್ಟ ಬಟ್ಟೆಯಲ್ಲಯೇ ಬೀದಿಗೆ ತಳ್ಳಲ್ಪಟ್ಟಿದ್ದಾರೆ.

ಸಿರುಗುಪ್ಪ ತಾಲೂಕಿನ ತುಂಗಭದ್ರ ನದಿ ದಂಡೆಯಲ್ಲಿರುವ ಭಾಗೇವಾಡಿ, ಕುಡುದರಹಾಳ್, ಶ್ರೀಧರಗಡ್ಡೆ, ಹಚ್ಚೊಳ್ಳಿ, ಮಾಟೂರು ಮತ್ತು ಚಳ್ಳಿಕೊಡ್ಲೂರು ಗ್ರಾಮಗಳನ್ನು ನೋಡಿದರೆ ಯಾವುದಾದರೂ ಯುದ್ಧ ನಡೆದು ಯಾರೋ ಬಾಂಬು ಹಾಕಿದ್ದಾರೇನೋ ಎಂಬಂತೆ ಭಾಸವಾಗುತ್ತದೆ. ಈ ಗ್ರಾಮಗಳ ಮನೆಗಳೆಲ್ಲಾ ಸಂಪೂರ್ಣವಾಗಿ ನಾಶವಾಗಿದ್ದು ಭತ್ತದ ಬೆಳೆಯಲ್ಲಾ ಹಾಳಾಗಿದೆ. ಮಳೆಯ ಕ್ರೌರ್ಯಕ್ಕೆ ಜನರ ಬದುಕು ನಾಶವಾಗಿದೆ. ತಾಲೂಕಿನ ಗಡಿ ಭಾಗದಲ್ಲಿರುವ ಗರ್ಜಿಹಳ್ಳ ಆಲೂರು ತಾಲೂಕಿನಲ್ಲಿ ಮೂರು ಕೆರೆಗಳು ಒಡೆದ ಪರಿಣಾಮವಾಗಿ ಕೊತ್ತಲಚಿಂತ, ಬೈರಗಾಮದಿನ್ನಿ ಅಗಸನೂರು ಮುತಾಂದ ಗ್ರಾಮಗಳಿಗೆ ನುಗ್ಗಿದ ನೀರು ಮನೆ- ಮಠ ಬೆಳೆಯಲ್ಲವನ್ನು ನುಂಗಿ ನೀರು ಕುಡಿದಿದೆ.

ಮುದೇನೂರು ಗ್ರಾಮ ಪಕ್ಕದಲ್ಲಿ ಹರಿಯುತ್ತಿರುವ ಹಗರಿ ನದಿ ಮತ್ತು ಬೆಕ್ಕಿನಹಳ್ಳಗಳು ಏಕಾಏಕಿ ನುಗ್ಗಿ ಬಂದು ನಾಲ್ಕೈದು ದಿನ ಊರೆಲ್ಲಾ ಮುಳುಗಡೆಯಾಗಿತ್ತು. ಈ ಗ್ರಾಮದ ಜನರೆಲ್ಲ ಮೂರು ದಿನಗಳ ಕಾಲ ಮಳೆಯಲ್ಲಿಯೇ ನೆನೆಯುತ್ತಾ ಅನ್ನ ನೀರಿಲ್ಲದೇ ಧಾರುಣ ಪರಿಸ್ಥಿತಿಯಲ್ಲಿ ಕಾಲಕಳೆದಿದ್ದಾರೆ. ಹಗರಿ ನದಿ ದಂಡೆಯಲ್ಲಿರುವ ತಾಲೂರು,



ಊಳೂರು, ಮಾಟಸೂಗೂರು ಮತ್ತು ಹೆಚ್.ಹೊಸಳ್ಳಿ ಗ್ರಾಮಗಳ ಜನರು ಸಹ ಇಂತಹ ಪರಿಸ್ಥಿತಿಯಲ್ಲಿಯೇ ಮೂರು ದಿನ ಕಳೆದಿದ್ದಾರೆ. ಕೊತ್ತಲಚಿಂತ ಗ್ರಾಮದಲ್ಲಿ ಶಾಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಐದು ಜನ ಶಿಕ್ಷಕರನ್ನು ರಕ್ಷಿಸಲು ಹೋಗಿದ್ದ ಬೋಟ್ ಮುಗಚಿದ ಕಾರಣ ಅದರಲ್ಲಿದ್ದ ಹತ್ತು ಜನ ರಕ್ಷಣಾ ತಂಡದವರನ್ನು ಹೆಲಿಕ್ಯಾಪ್ಟರ್ ಮೂಲಕ ರಕ್ಷಿಸಲಾಯಿತು. ಇಂತಹ ಹತ್ತಾರು ಘಟನಾವಳಿಗಳು ಜಿಲ್ಲೆಯಾದ್ಯಾಂತ ನಡೆದು ಹೋಗಿವೆ.

ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಮನೆಗಳು ನಾಶವಾಗಿದ್ದಲ್ಲದೆ. ಮೂವತ್ತ ರಿಂದ ಐವತ್ತು ಸಾವಿರ ಎಕರೆಯ ಮೇಲ್ಮಣ್ಣೆಲ್ಲಾ ಕೊಚ್ಚಿ ಹೋಗಿ ಭೂಮಿ ಬರಡಾಗಿದೆ. ಇದನ್ನೆ ನಂಬಿ ಬದುಕುತ್ತಿದ್ದ ರೈತರ ಬದುಕು ಅತಂತ್ರವಾಗಿದೆ. ಐವತ್ತು ಸಾವಿರ ಎಕರೆ ಹತ್ತಿ ಮೆಣಸಿನಕಾಯಿ ಬೆಳೆ ಹಾಳಾಗಿದೆ. ಮೂವತ್ತೈದರಿಂದ ನಲವತ್ತು ಸಾವಿರ ಎಕರೆ ಭತ್ತದ ಬೆಳೆಯೆಲ್ಲಾ ನಾಶವಾಗಿ ಹೋಗಿದೆ. ರಸ್ತೆಗಳೆಲ್ಲಾ ಹಾಳಾಗಿದ್ದು ಬಸ್ ಸಂಚಾರ ಅಸ್ತವ್ಯಸ್ತವಾಗಿದೆ.

ಕಂಪ್ಲಿ - ಕುರುಗೋಡು, ಕಂಪ್ಲಿ - ಕುಡತಿನಿ, ಬಳ್ಳಾರಿ - ರೂಪನಗುಡಿ, ಬಳ್ಳಾರಿ - ಸಿರುಗುಪ್ಪ, ಕುರುಗೋಡು - ಕುಡತಿನಿ ಮತ್ತು ಸಿರುಗುಪ್ಪ - ಅದೋನಿ ರಸ್ತೆಗಳಲ್ಲಿ ಸಂಚಾರವೇ ಇಲ್ಲದಂತಾಗಿದೆ. ಬಳ್ಳಾರಿ ತಾಲೂಕಿನ ಬಾಳಾಪುರ ಮತ್ತು ಹೊಸಪೇಟೆ ತಾಲೂಕಿನ ಕಂಪ್ಲಿ ಸೇತುವೆಗಳು ಕುಸಿದು ಹೋಗಿದ್ದು ಸಂಪರ್ಕ ಇಲ್ಲದಂತಾಗಿದೆ. ಹೊಳೆದಂಡೆ ಯಲ್ಲಿದ್ದ ಸಾವಿರಾರು ಪಂಪ್ ಸೆಟ್ಟಗಳು ನೀರಿನಲ್ಲಿ ಕೊಚ್ಚಿ ಹೋಗಿವೆ. ನೂರಾರು ಟಿ.ಸಿ.ಗಳು ಸುಟ್ಟು ಹೋಗಿದ್ದು ಸಾವಿರಾರು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಇರಿಂದಾಗಿ ನೂರಾರು ಗ್ರಾಮಗಳು ಕತ್ತಲಲ್ಲಿ ಮುಳುಗಿವೆ. ಬಳ್ಳಾರಿ ತಾಲೂಕಿನ ತಿರುಮಲ ಕ್ಯಾಂಪ್‌ನ ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಆತಂಕಕಾರಿಯಾಗಿದೆ. ಹಾಳು ಗುಡಿಗಳಲ್ಲಿ ಅಥವಾ ಊರಾಚೆ ಹಾಕಿದ ಬಿಡಾರಗಳಲ್ಲಿ ಹತ್ತಾರು ಸಾವಿರ ಜನ ಭಿಕ್ಷುಕರಂತೆ ಅನ್ನಕ್ಕಾಗಿ ಕೈಚಾಚುವ ಘೋರ ದೃಶ್ಯಗಳು ಕಣ್ಣಲ್ಲಿ ನೀರು ತರಿಸುತ್ತವೆ

ಜನರ ಬದುಕಿನೊಡನೆ ಚೆಲ್ಲಾಟ

ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ, ಅಭಿವೃದ್ಧಿಯ ಮಂತ್ರ ಜಪಿಸುತ್ತಿರುವ ಬಿ.ಜೆ.ಪಿ. ಸರ್ಕಾರ ಇಲಿಗೆ ಪ್ರಾಣ ಸಂಕಟ ಬೆಕ್ಕಿಗೆ ಚೆಲ್ಲಾಟವೆಂಬಂತೆ ನಡೆದು ಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಸಂತ್ರಸ್ತರು ಪ್ರಾಣಭೀತಿಯಿಂದ ಬೇಡಿಕೊಳ್ಳುತ್ತಿರುವಾಗ ಯಡಿಯೂರಪ್ಪನವರ ಸರ್ಕಾರದ ಸಚಿವರೆಲ್ಲರು ಸುತ್ತೂರು ಮಠದಲ್ಲಿ ಯೋಗ ಮಾಡುತ್ತಾ ನರಹಂತಕ ಮೋದಿಯ ಪ್ರವಚನ ಕೇಳುವುದರಲ್ಲಿ ಮಗ್ನವಾಗಿದ್ದು ನಂತರ ಸನ್ಮಾನ, ಬಿರುದುಬಾವಲಿಗಳನ್ನು ಸ್ವೀಕರಿಸುವುದರಲ್ಲಿ ತೊಡಗಿದ್ದು ಒಂದೆಡೆಯಾದರೆ, ನಾನೇನು ಯಡಿಯೂರಪ್ಪನವರಿಗಿಂತ ಕಡಿಮೆ ಇಲ್ಲ ಎಂಬಂತೆ ಸಿರುಗುಪ್ಪ ಶಾಸಕ ಎಂ.ಎಸ್.ಸೋಮಲಿಂಗಪ್ಪ ನಡೆದುಕೊಂಡಿದ್ದಾರೆ. ಸಿರುಗುಪ್ಪ ತಾಲೂಕಿನ ಮಣ್ಣೂರು ಸೂಗೂರಿನ ಜನರು ಪ್ರವಾಹ ಬಂದು ನೀರಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ ರಕ್ಷಿಸುವ ವ್ಯವಸ್ಥೆ



ಪರಿಹಾರಕ್ಕಾಗಿ ಸಾಲುಗಟ್ಟಿ ನಿಂತ ಜನತೆ

ಮಾಡಿರಿ ಎಂದು ದೂರವಾಣಿ ಮೂಲಕ ಶಾಸಕ ಸೋಮಲಿಂಗಪ್ಪನವರಲ್ಲಿ ಮೊರೆ ಇಟ್ಟರು, ಜನರ **ಅಳಲಿಗೆ ಶಾಸಕರ ಉತ್ತರ ಏನು ಗೊತ್ತೆ ?** "ನದಿಯಲ್ಲಿ ಮುಳುಗಿ ಸತ್ತು ಹೋಗಿರಿ". ಶಾಸಕರ ಈ ಮಾತಿನಿಂದ ಕೆರಳಿದ ಮಣ್ಣೂರ ಸೂಗೂರಿನ ಜನರು ಮರುದಿನ ಎರಡು ಟ್ರ್ಯಾಕ್ಟರ್‌ಗಳಲ್ಲಿ ಬಂದು ತೆಕ್ಕಲಕೋಟೆಯಲ್ಲಿರುವ ಶಾಸಕರ ಮನೆ ಮುತ್ತಿಗೆ ಹಾಕಿದರು. ಪೊಲೀಸರು ಮಧ್ಯ ಪ್ರವೇಶ ಮಾಡಿ ಪರಸ್ಥಿತಿಯನ್ನು ನಿಭಾಯಿಸ ಬೇಕಾಯಿತು. ಇದೇ

ಪುಟ 15 ಕ್ಕೆ

ಆಹಾರದ ಹಕ್ಕಿಗಾಗಿ ಆಂದೋಲನ

ಅಕ್ಕಿ, ರಾಗಿ, ಜೋಳ,ಬೇಳೆಕಾಳು ಇತ್ಯಾದಿ ಆಹಾರ ಧಾನ್ಯಗಳ ಬೆಲೆಗಳು ಏರಿದಾಗ ಕೊಳ್ಳುವ ಜನಗಳಿಗೆ ತೊಂದರೆಯಾದರೂ ಬೆಳೆ ಬೆಳೆದ ರೈತರಿಗೆ ಹೆಚ್ಚು ಬೆಲೆ ಸಿಗುತ್ತದೆ ಎಂದು ಹಲವರು ಭಾವಿಸುವುದಿದೆ. ವಾಸ್ತವವಾಗಿ ಹಾಗಾಗುವುದು ಬಹಳ ಕಡಿಮೆ. ಯಾಕೆ....? ಓದಿ.

ಆಹಾರಧಾನ್ಯಗಳ ಬೆಲೆ ಏರಿದರೆ ರೈತರಿಗೆ ಲಾಭವಾಗುತ್ತದೆಯೇ?

ವಸಂತ

ಮೊದಲ ನೋಟಕ್ಕೆ ಹೌದು ಎನಿಸುತ್ತದೆ. ಆದರೆ ನಿಜ ಪರಿಸ್ಥಿತಿ ಅದಕ್ಕಿಂತ ಬಹಳ ಭಿನ್ನ ಮತ್ತು ಸಂಕೀರ್ಣ. ಏರಿರುವುದು ಅಂಗಡಿಗಳಲ್ಲಿ ಮಾರುವ ಆಹಾರ ವಸ್ತುಗಳ ಬೆಲೆ. ಅಂದರೆ ಅಂಗಡಿಗಳಲ್ಲಿ ಆಹಾರ ವಸ್ತುಗಳನ್ನು ಕೊಂಡುಕೊಳ್ಳುವ ಎಲ್ಲರನ್ನು ಅದು ತಟ್ಟುತ್ತದೆ. ಕೃಷಿಯಲ್ಲಿ ತೊಡಗಿರುವ ಪ್ರತಿಯೊಂದು ವಿಭಾಗವನ್ನು ಅದು ತಟ್ಟುವ ರೀತಿ ಮತ್ತು ಪ್ರಮಾಣ ಬೇರೆ ಬೇರೆ. ಪ್ರತಿ ವಿಭಾಗ ಆಹಾರ ವಸ್ತುಗಳನ್ನು ಕೊಂಡುಕೊಳ್ಳುವ ಪ್ರಮಾಣದ ಮೇಲೆ ಅದು ಅವಲಂಬಿಸಿರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ವಿಭಾಗ ಕೃಷಿ ಕೂಲಿಕಾರರು (ಸುಮಾರು ಶೇ.35) ಮತ್ತು ಸಣ್ಣ ರೈತರದು (ಸುಮಾರು ಶೇ.25). ಸಣ್ಣ ರೈತ ತನ್ನ ಭೂಮಿಯಲ್ಲಿ ತನ್ನ ಮತ್ತು ಕುಟುಂಬದವರ ದುಡಿಮೆ ಮಾಡುವಷ್ಟು ಮಾತ್ರ ಭೂಮಿ ಇರುವವ. ಬೆಳೆ ಚೆನ್ನಾಗಿ ಇಲ್ಲದಿದ್ದಾಗ ಅಥವಾ ಅಗತ್ಯ ಬಿದ್ದಾಗ ಬೇರೆಯವರ ಭೂಮಿಯಲ್ಲಿ ಕೂಲಿಗೆ ಹೋಗುವುದು ಅಪರೂಪವಲ್ಲ. ಸಣ್ಣ ರೈತ ಸಹ ಹಿಂದೆ ಆಹಾರ ಅಂಗಡಿಯಲ್ಲಿ ಖರೀದಿಸುತ್ತಿರಲಿಲ್ಲ. ತನ್ನ ಕುಟುಂಬಕ್ಕೆ ಬೇಕಾದಷ್ಟು ಆಹಾರ ಬೆಳೆಗಳನ್ನು ಬೆಳೆದು, ಉಳಿದ ಭೂಮಿಯಲ್ಲಿ ಆಹಾರ ಅಥವಾ ಬೇಳೆ ಬೆಲೆ ಬೆಳೆದು ಮಾರಾಟ ಮಾಡಿ ತನ್ನ ಉಳಿದ ಖರ್ಚು ನೀಗಿಸುತ್ತಿದ್ದ. ಆದರೆ ಈಗ ಸಣ್ಣ ರೈತ ಸಹ ಆಹಾರದ ದೊಡ್ಡ ಭಾಗ ಖರೀದಿ ಮಾಡುವವನಾಗಿದ್ದಾನೆ. ಇದಕ್ಕೆ ಕಾರಣ ಹಲವು. ಅವುಗಳಲ್ಲಿ ಕೆಲವು ಇಂತಿವೆ:

ಹಲವು ರೈತರು ಆಹಾರ ಬೆಳೆ ಪೂರ್ಣವಾಗಿ ಬಿಟ್ಟು ಇತರ ವಾಣಿಜ್ಯ ಬೆಳೆ (ಉದಾ: ಕಬ್ಬು, ಹತ್ತಿ) ಬೆಳೆಯ ಹತ್ತಿದ್ದಾರೆ. ಇಲ್ಲವೆ ಆಹಾರ ಬೆಳೆಯ ಪ್ರಮಾಣ ಕಡಿಮೆ ಮಾಡಿದ್ದಾರೆ. ಅವರು ಬೆಳೆದ ಆಹಾರ ಕುಟುಂಬಕ್ಕೆ ಸಾಲದು.

ವಾಣಿಜ್ಯ ಬೆಳೆಗಳಲ್ಲಿ ವೆಚ್ಚದ, ಬೆಲೆಯ ಏರುಪೇರು, ಬೆಳೆ ವೈಫಲ್ಯ, ಸಾಲದ ಸಮಸ್ಯೆ - ಇತ್ಯಾದಿ ಅಪಾಯಗಳಿಂದ ಸಣ್ಣ ರೈತನಿಗೆ ಆಹಾರ ಬೆಳೆಗಿಂತ ಭಾರೀ ಹೆಚ್ಚು ಆದಾಯ ಸಿಗುವುದು ಅಪರೂಪ.

ಆಹಾರ ಬೆಳೆ ಬೆಳೆಯುವವರು ಸಹ ಅಧಿಕ ಫಸಲು ಕೊಡುವ ಹೈಬ್ರಿಡ್ ತಳಿಗೆ ಮೊರೆ ಹೋಗಿದ್ದಾರೆ. ಹೈಬ್ರಿಡ್ ತಳಿ ಹೈ-ರಿಸ್ಕ್ ಸಹ. ಅದು ದುಬಾರಿ ರಾಸಾಯನಿಕ ಗೊಬ್ಬರ, ದುಬಾರಿ ಕೀಟ ನಾಶಕ, ಹೆಚ್ಚು ನೀರು, ಹೆಚ್ಚು ಹಣ ಹೂಡಿಕೆ ಬೇಡುತ್ತದೆ. ಇದರಲ್ಲಿ ಯಾವುದರಲ್ಲಿ ವ್ಯತ್ಯಾಸವಾದರೂ ಬೆಳೆ ವಿಫಲವಾಗುತ್ತದೆ. ಹಿಂದೆ ಬಳಸುತ್ತಿದ್ದ ನಾಟಿ ತಳಿಗೆ ದುಬಾರಿ ರಾಸಾಯನಿಕ ಗೊಬ್ಬರ, ಕೀಟ ನಾಶಕಗಳ, ಹೆಚ್ಚಿನ ನೀರು ಅಗತ್ಯ ಇರಲಿಲ್ಲ. ಬೆಳೆ ವಿಫಲವಾಗುವ ಸಂಭವ ಸಹ ಕಡಿಮೆ ಇತ್ತು.

ಮಣ್ಣಿನ ಫಲವತ್ತತೆ ಕಡಿಮೆಯಾಗಿರುವುದು, ನೀರಿನ ಅಭಾವ ಮತ್ತು ಕೀಟಗಳ ಕಾಟದಿಂದ ಬೆಳೆಯ ಪ್ರಮಾಣ ಸಹ ಕಡಿಮೆಯಾಗುತ್ತಿದೆ.

ಈಗ ರೈತ ನೀರು, ವಿದ್ಯುತ್, ಗೊಬ್ಬರ, ಕೀಟ ನಾಶಕ - ಹೀಗೆ ಎಲ್ಲದಕ್ಕೂ ಹಣ ಕೊಡಬೇಕು. ಈ ಎಲ್ಲಾ ಬೆಲೆಗಳು ಏರುತ್ತಲೇ ಇವೆ. ಈ ಬೆಲೆಗಳು ಎಷ್ಟು ಹೆಚ್ಚಾದೀತು ಎಂದು ರೈತ ಊಹಿಸಲೂ ಸಾಧ್ಯವಿಲ್ಲ. ಅದರ ಮೇಲೆ ಅವನಿಗೆ ಯಾವ ನಿಯಂತ್ರಣವೂ ಇಲ್ಲ. ಯಾವಾಗಲೂ ಹಣದ ಅಭಾವ ಇರುವ ರೈತ ಇದನ್ನು ಸಾಲ ಮಾಡಿಯೇ ಕೊಳ್ಳಬೇಕು. ಕೃಷಿಗೆ ಬ್ಯಾಂಕ್ ಸಾಲ ಸಿಗುವುದೂ ಕಷ್ಟವಾಗುತ್ತಿದೆ. ದುಬಾರಿ ಬಡ್ಡಿದರದಿಂದ ಪ್ರಾಣ ಹಿಂಡುವ ಸಾಹುಕಾರ ಅಥವಾ ಮಾರವಾಡಿ ಸಾಲವೇ ಗತಿ.



ಆಹಾರದ ಮಾರುವ ಬೆಲೆ ಅಷ್ಟಾಗಿ ಏರಿಲ್ಲ. ಸರ್ಕಾರದ ಬೆಂಬಲ ಬೆಲೆಯಾಗಲಿ, ವರ್ತಕರು ಕೊಳ್ಳುವ ಮಾರುಕಟ್ಟೆ ಬೆಲೆಯಾಗಲಿ ಅಂಗಡಿ ಬೆಲೆಯ ಪ್ರಮಾಣದಲ್ಲಿ ಏರಿಲ್ಲ. ಸುಗ್ಗಿಯ ಕಾಲದಲ್ಲಿ ಒಂದೇ ಬಾರಿಗೆ ಬೆಳೆ ಕೈಗೆ ಬರುವುದರಿಂದ ಬೆಳೆ ಬೆಳೆದವರಿಗೆ ಒಳ್ಳೆ ಬೆಲೆ ಸಿಗುವುದು ಕಷ್ಟ. ಮಾತ್ರವಲ್ಲ ಆತನ ಸಾಲದ ಭಾರದಿಂದ ಸರ್ಕಾರದ ಬೆಂಬಲ ಬೆಲೆಯಲ್ಲಿ ಮಾರುವವರೆಗೆ ಕಾಯುವ ಅವಕಾಶ ಆತನಿಗೆ ಇರುವುದಿಲ್ಲ. ಬೆಳೆಯನ್ನು ವರ್ತಕರ ದುಷ್ಟಕೂಟ ನಿರ್ಧರಿಸುವ ಕಡಿಮೆ ಬೆಲೆಯಲ್ಲಿ ಮಾರ ಬೇಕಾಗುತ್ತದೆ.

ಹಸಿವಿನ ಅಂಚಲ್ಲಿ

ಕೃಷಿ ಕೂಲಿಕಾರರಿಗೆ ಹಿಂದೆ ಕೂಲಿಯನ್ನು ಆಹಾರ ಧಾನ್ಯ (ಅಕ್ಕಿ ಅಥವಾ ಗೋಧಿ) ರೂಪದಲ್ಲಿ ಕೊಡಲಾಗುತ್ತಿತ್ತು. ಆಗ ಕನಿಷ್ಠ ಕೆಲಸವಿದ್ದಾಗಾದರೂ ಹಸಿವು ಆತನನ್ನು ಮತ್ತು ಆತನ ಕುಟುಂಬವನ್ನು ಬಾಧಿಸುತ್ತಿರಲಿಲ್ಲ. ಈಗ ಕೂಲಿಯನ್ನು ಹಣದ ರೂಪದಲ್ಲಿ ಕೊಡಲಾಗುತ್ತದೆ. ಆಹಾರ ವಸ್ತುಗಳ ಬೆಲೆ ಏರುತ್ತಿರುವುದು ಕೃಷಿ ಕೂಲಿಕಾರರನ್ನು ನೇರವಾಗಿ ತಟ್ಟುತ್ತದೆ. ನಿಗದಿತ ಕೂಲಿಯ ಭದ್ರತೆ ಇಲ್ಲದಿರುವುದು, ಕೆಲಸದ ಭದ್ರತೆ-ಗ್ಯಾರಂಟಿ ಇಲ್ಲದಿರುವುದು, ಕೂಲಿ ಬೆಲೆ ಏರಿಕೆಯೊಂದಿಗೆ ಏರದಿರುವುದು - ಆತನನ್ನು ಸದಾ ಹಸಿವಿನ ಅಂಚಿನಲ್ಲಿ ಇಡುತ್ತದೆ.

ಆದಿವಾಸಿಗಳೂ (ಸುಮಾರು ಶೇ.5) ಹಿಂದೆ ತಮಗೆ ಬೇಕಾದ ಆಹಾರವನ್ನು ಕಾಡಿನಿಂದ ಸಂಗ್ರಹ ಮಾಡುತ್ತಿದ್ದರು ಇಲ್ಲವೆ ಸಣ್ಣ ಪ್ರಮಾಣದ ಕೃಷಿಯಲ್ಲಿ ತೊಡಗಿ ತಾವೇ ಉತ್ಪಾದಿಸುತ್ತಿದ್ದರು. ಈಗ ಅವರಿಗೆ ಕಾಡಿನಲ್ಲಿ ಆಹಾರ ಸಂಗ್ರಹ ಮಾಡಲು ಹಲವಾರು ನಿರ್ಬಂಧಗಳು. ಕೃಷಿ ಮಾಡಲು ಭೂಮಿ ಇಲ್ಲ. ಅವರ ಭೂಮಿಯನ್ನು ಸರ್ಕಾರ ಅಥವಾ ಕಂಟ್ರಾಕ್ಟರುಗಳು ಕಿತ್ತು ಕೊಂಡಿದ್ದಾರೆ, ಬೇರೆ ಬೇರೆ ಹೆಸರಲ್ಲಿ. ಸುರಕ್ಷಿತ ಅರಣ್ಯ, ಬೆಳವಣಿಗೆ ಪ್ರಾಜೆಕ್ಟ್ (ಗಣಿ, ಅಣೆಕಟ್ಟು, ಕೈಗಾರಿಕೆ) ಗಳು ಇತ್ಯಾದಿ. ಅವರು ಪ್ರಾಜೆಕ್ಟ್ ಗಳಲ್ಲಿ ಅಥವಾ ನಗರ ಪ್ರದೇಶದಲ್ಲಿ (ಕಟ್ಟಡ ಇತ್ಯಾದಿ) ಅಥವಾ ಕೃಷಿಯಲ್ಲಿ ಸಿಕ್ಕಿದಾಗ, ಸಿಕ್ಕಲ್ಲಿ, ಸಿಕ್ಕಷ್ಟು ಕೂಲಿ ಮಾಡಬೇಕು. ಆದಿವಾಸಿಗಳೂ ಈಗ ಆಹಾರ ಪೂರ್ಣವಾಗಿ ಕೊಳ್ಳುವ ಸ್ಥಿತಿಗೆ ಬಂದಿದ್ದಾರೆ. ಅವರು ಈಗಾಗಲೇ ಹಸಿವಿನ ಅಂಚಿನಲ್ಲಿ ಇರುವವರು. ಆಹಾರದ ಬೆಲೆ ಏರಿಕೆ ಅವರನ್ನು ಹಸಿವು-ಸಾವಿನೆಡೆಗೆ ತಳ್ಳುತ್ತದೆ. ಭಾರತದ ಕುಖ್ಯಾತ ಹಸಿವಿನ ಸಾವುಗಳ ಬಲಿ ಪಶುಗಳು ಹೆಚ್ಚಾಗಿ ಆದಿವಾಸಿಗಳೇ. ಹಸಿವಿನ ಸಾವಿಗೆ ಕುಖ್ಯಾತ ಪ್ರದೇಶಗಳು ಹೆಚ್ಚಾಗಿ ಆದಿವಾಸಿ ಪ್ರದೇಶಗಳೇ.

ಮಧ್ಯಮ ಮತ್ತು ಶ್ರೀಮಂತ ರೈತರಿಗೆ ಮೇಲೆ ಹೇಳಿದ ಕೃಷಿಯ ಹಲವು ಸಮಸ್ಯೆ ಮತ್ತು ಅಪಾಯಗಳು ಸಾಮಾನ್ಯವಾದರೂ, ಅವರ ಒಟ್ಟಾರೆ ಆದಾಯದ ಪ್ರಮಾಣದಿಂದ ಹಸಿವಿನ ಸಮಸ್ಯೆ ಎದುರಿಸುವುದು ಕಡಿಮೆ. ಆಹಾರ ಬೆಳೆಗಳ ಮಾರುವ ಮಾರುಕಟ್ಟೆಯ ಬೆಲೆ ಏರಿದಾಗ ಅದರ ಪ್ರಯೋಜನ ಸಿಗುವುದು ಇವರಿಗೆ. ಅಲ್ಲದೆ ಬೆಂಬಲ ಬೆಲೆ ಮುಂತಾದ ಸರ್ಕಾರದ ಹಲವು ಕೃಷಿಗೆ ಬೆಂಬಲದ ಹಲವು ಯೋಜನೆಗಳ ಪ್ರಯೋಜನ ಇವರಿಗೆ ಸ್ವಲ್ಪವಾದರೂ ದಕ್ಕುತ್ತದೆ. ಹಲವು (ಬರ, ಭಾರೀ ಬೆಳೆ ವೈಫಲ್ಯ, ಮಾರುಕಟ್ಟೆ ಬೆಲೆ ಕುಸಿತ ಮುಂತಾದ) ವಿಶೇಷ ಬಿಕ್ಕಟ್ಟುಗಳ ಸಂದರ್ಭಗಳಲ್ಲಿ ಮಾತ್ರ, ಮಧ್ಯಮ ರೈತರ ಸ್ಥಿತಿ ಸಹ ಸಣ್ಣ ರೈತರ ದುಸ್ಥಿತಿಗೆ ಹತ್ತಿರ ಬರುತ್ತದೆ.

ನಗರಗಳಲ್ಲಿ

ಇನ್ನು ನಗರ ಪ್ರದೇಶದ ಬಡವರು (ಸುಮಾರು ಶೇ.10) ಹೆಚ್ಚಾಗಿ ಅಸಂಘಟಿತ ಉದ್ದಿಮೆಗಳ ಕಾರ್ಮಿಕರು ಅಥವಾ ನಿರುದ್ಯೋಗಿಗಳು. ಅವರಂತೂ ಆಹಾರ ಅಂಗಡಿಯಲ್ಲಿ ಕೊಳ್ಳುವವರೇ. ಅವರಿಗೆ ಉದ್ಯೋಗ, ಕೂಲಿಯ ಭದ್ರತೆ ಇಲ್ಲ. ಆಹಾರ ಬೆಲೆ ಏರಿದಂತೆ ಅವರ ಕೂಲಿ ಏರುವುದಿಲ್ಲ. ಆದ್ದರಿಂದ ಅವರ ಸ್ಥಿತಿ ಆದಿವಾಸಿಗಳು, ಕೃಷಿ ಕೂಲಿಕಾರರಿಗಿಂತ ಬೇರೆ ಇಲ್ಲ. ಅವರು ಸದಾ ಹಸಿವಿನ ಅಂ[...] ಬದುಕುವವರೇ. ಆಹಾರ ವಸ್ತುಗಳ ಬೆಲೆ [...] ಅವರನ್ನು ಹಸಿವಿನ ಅಂಚಿನ ಆಚೆಗೆ ತಳ್ಳುತ್ತ[...]

ಹೀಗೆ ಭಾರತದ ಗ್ರಾಮೀಣ ಮತ್ತು [...] ಪ್ರದೇಶದ ಬಡವರ ಎಲ್ಲಾ ವಿಭಾಗಗಳೂ ([...] ಸುಮಾರು ಶೇ.75) ಆಹಾರ ಖ[...] ಮಾಡುವವರೇ. ಸದಾ ಹಸಿವಿನ ಬೆದರಿಕೆ[...] ಬದುಕುವವರು. ಕನಿಷ್ಟ ಕ್ಯಾಲೋರಿಯ ಆ[...] ಕೊಳ್ಳಲಾಗದೆ ಪೌಷ್ಟಿಕಾಂಶಗಳ ಅಭಾವ[...] ಕಾಯಿಲೆ- ಕಸಾಲೆಗಳಿಂದ ನರಳುವವ[...] ಇದರಿಂದಲೇ ಅವರ ಮಕ್ಕಳು ಅಕಾಲಿಕ[...] ಮರಣಕ್ಕೆ ತುತ್ತಾಗುತ್ತಾರೆ. ಇಲ್ಲ ಹೇ[...] ಹಸಿವಿನೊಂದಿಗೆ ಬದುಕು ನೂಕುತ್ತಾರೆ. ಆಹ[...] ಬೆಲೆ ಏರಿಕೆ ಅವರ ಬಾಳನ್ನು ಇನ್[...] ದುರ್ಭರಗೊಳಿಸಿದೆ. ಅವರ ಸಂಖ್ಯೆಯನ್ನು ಹೆಚ್[...]

ಆಹಾರದ ಉತ್ಪಾದನೆ ಮಾಡುವ ಹೆಚ್ಚಿನ [...] ದೇಶಗಳಲ್ಲಿ ಸರಿ ಸುಮಾರು ಇಂತಹುದೇ ಪ[...] ಇದೆ. ರೈತರ ದೊಡ್ಡ ವಿಭಾಗ ಮತ್ತು ಬಡ[...] ಆಹಾರ ಖರೀದಿ ಮಾಡುವುದರಿಂದ ಬೆಲೆ [...] ಅವರನ್ನು ತೀವ್ರವಾಗಿ ತಟ್ಟಿದೆ. ಆಹಾರ ಆ[...] ಮಾಡುವ ದೇಶಗಳಲ್ಲಿ ಎಲ್ಲರೂ ಆಹಾರ ಖ[...] ಮಾಡಬೇಕಾದ್ದರಿಂದ ಬಿಕ್ಕಟ್ಟಿನ ಪರಿಣಾಮ ಅ[...] ತೀವ್ರವಾಗಿದೆ. ಇಂತಹ ದೇಶಗಳಲ್ಲೇ ಹೆಚ್ಚಾಗಿ ಆ[...] ದಂಗೆಗಳು ನಡೆದಿರುವುದು.

ಕವಿತೆ

ಹಳ್ಳಕೊಳ್ಳ ಹೆ[...] ಹರಿದಾಡಿ.....

ಬಣ್ಣದ ಗುಬ್ಯಾರು ಮಳಿರಾಜ ಅವರು
ಮಣ್ಣಾಗಿ ಹೋದರು ಮಳಿರಾಜಾ
ಬಣ್ಣದ ಗುಬ್ಯಾರು ಮಣ್ಣಾಗಿ ಹೋದರು
ಅನ್ನದ ದಿನ ಬಂದು ಮಳಿರಾಜಾ

ಒಕ್ಕಲ ಗೇರ್ಯಾಗ ಮಳಿರಾಜಾ ಅವರು
ಮಕ್ಕಳ ಮಾರ್ಯಾರ ಮಳಿರಾಜಾ
ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು
ಭತ್ತಂತ ತಿರಗ್ಯಾರು ಮಳಿರಾಜಾ

ಸೊಲಗಿ ಹಿಟ್ಟಿನಾಗ ಮಳಿರಾಜಾ ಅವರು
ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ
ಹಸ್ತು ಬಂದಕ್ಯಾರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜಾ

ಗಿದ್ದನ ಅಕ್ಕ್ಯಾಗ ಮಳಿರಾಜಾ ಅವರು
ಅಮವನ್ನು ಕೂಡಿಸ್ಯಾರ ಮಳಿರಾಜಾ
ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ
ಕಣ್ಣನ್ನೆ ಮುಚ್ಯಾವ ಮಳಿರಾಜಾ


ಗಂಡುಳ್ಳ ಬಾಲ್ಯಾರು ಮಳಿರಾಜಾ ಅವ[...]
ಭಿಕ್ಷಾಕ ಹೊಂಟಾರ ಮಳಿರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಯಾಕ ಹೋದರು
ಅನ್ನದ ದಿನ ಬಂದು ಮಳಿರಾಜಾ

ಸ್ವಾತೀಯ ಮಳಿ ಬಂದು ಮಳಿರಾಜಾ [...]
ದೇಶಾಕ ಆಗ್ಯಾದ ಮಳಿರಾಜಾ
ಹಳ್ಳಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳಿರಾಜಾ

(ಜನಪದ [...]

ಆಹಾರದ ಹಕ್ಕಿಗಾಗಿ ಆಂದೋಲನ

ಪ್ರವಾಹ-ಬೆಳೆ ನಾಶ : ಪರಿಣಾಮವೇನು ?



ದೇಶದಲ್ಲಿ ಮೊದಲೇ ಬರದ ಛಾಯೇ ಕಂಡು ಬಂದಿತ್ತು. ರಾಜ್ಯದಲ್ಲೂ ಸಹ ಇದೀಗ ಪ್ರವಾಹ ಹಾನಿ!! ಸಂಗ್ರಹಿಸಿಟ್ಟಿದ್ದ ಆಹಾರವೂ ನೀರುಪಾಲು. ಇದರ ಪರಿಣಾಮ ಏನಾಗಬಹುದು? ಎಚ್ಚರ ಅಗತ್ಯ.

ಆರ್. ರಾಮಕೃಷ್ಣ

...ರ್ನಾಟಕ ಮತ್ತು ನೆರೆಯ ಆಂಧ್ರಪ್ರದೇಶಗಳಲ್ಲಿ ...ತ್ತೀಚಿನ ಹಲವು ದಶಕಗಳಲ್ಲೇ ಕಂಡು ಕೇಳರಿಯದ ...ಹಾಮಳೆ - ಭೀಕರ ಪ್ರವಾಹ ಜನರ ಬದುಕನ್ನು ...ೂರಾಬಟ್ಟೆ ಮಾಡಿದೆ.

ಈ ಪ್ರವಾಹಕ್ಕೂ ಮುಂಚೆಯೇ ಅಗತ್ಯವಸ್ತುಗಳ ...ಲೆ ಏರಿಕೆ, ಆಹಾರ ಧಾನ್ಯಗಳ ಅಭಾವ, ಆಹಾರದ ...ಕ್ಕಟ್ಟು ರಾಜ್ಯವನ್ನು, ದೇಶವನ್ನು ಕಾಡುತ್ತಿತ್ತು. ರಾಜ್ಯದ ...ಮಾರು 83 ತಾಲ್ಲೂಕುಗಳಲ್ಲಿ ಮುಂಗಾರು ...ಫಲವಾಗಿ ಬೆಳೆ ನಾಶವಾಗಿತ್ತು. ಆದರೆ ಆ ನಂತರ ...ಂಗಾರು ಮಳೆ ಉತ್ತಮ ಆಶಾವಾದ



...ೂಡಿಸಿದಂತೆ ಕಂಡು ಬಂತು. ಆದರ ಬೆನ್ನಿಗೆ ಸುರಿದ ...ಹಾಮಳೆ ಕೈಗೆ ಬರಬೇಕಿದ್ದ ಮುಂಗಾರು ಬೆಳೆ, ...ತ್ತನೆಯಾಗಿ ಚಿಗುರೊಡೆದಿದ್ದ ಹಿಂಗಾರು ಬೆಳೆ ...ಲ್ಲವನ್ನು ಕೊಚ್ಚಿಕೊಂಡು ಹೋಗಿದೆ.

ಕೃಷಿ ಇಲಾಖೆಯ ಅಂದಾಜಿನಂತೆ ಕರ್ನಾಟಕ ...ದಲ್ಲಿ ಸುಮಾರು 11.34 ಲಕ್ಷ ಹೆಕ್ಟೇರ್ ...ದೇಶದಲ್ಲಿ ಬೆಳೆಗೆ ಹಾನಿ ಸಂಭವಿಸಿದೆ. 8.37 ಲಕ್ಷ ...ಕ್ಟೇರ್‌ನಲ್ಲಿ ಬೆಳೆದು ನಿಂತಿದ್ದ ಕೃಷಿ ಭೂಮಿಯಲ್ಲಿನ ಬೆಳೆ ನೀರು ಪಾಲಾಗಿದೆ. ಇದಲ್ಲದೆ 2.97 ಲಕ್ಷ ಹೆಕ್ಟೇರ್ ಹಿಂಗಾರಿನಲ್ಲಿ ಬಿತ್ತನೆಯಾಗಿದ್ದ ಭೂಮಿಯಲ್ಲಿನ ಬೆಳೆ ಕೊಚ್ಚಿಕೊಂಡು ಹೋಗಿದೆ.

ಬಿಜಾಪುರ ಜಿಲ್ಲೆಯೊಂದರಲ್ಲೇ 3.72 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿ ಸಂಭವಿಸಿದೆ. ಬೆಳಗಾಂನಲ್ಲಿ 1.81 ಲಕ್ಷ ಹೆಕ್ಟೇರ್, ಉತ್ತರ ಕನ್ನಡ ಜಿಲ್ಲೆಯಲ್ಲಿ 1.019 ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದೆ. ಬಾಗಲಕೋಟೆ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಧಾರವಾಡ, ಹಾವೇರಿ, ಗದಗ್, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಆಗಿರುವ ಹಾನಿಯು ಕಡಿಮೆಯದೇನಲ್ಲ.

ಒಟ್ಟಾರೆ ರಾಜ್ಯದಲ್ಲಿ ಸುಮಾರು 2,500 ಕೋಟಿ ರೂಪಾಯಿಗಳ ಮೌಲ್ಯದ ಬೆಳೆ ಹಾನಿ ಸಂಭವಿಸಿದೆ ಎಂದು ಸ್ಥೂಲ ಅಂದಾಜುಗಳಿವೆ. ಇವೆಲ್ಲಾ ಸರ್ಕಾರಿ ಅಂಕಿ ಸಂಖ್ಯೆಗ... ವಾಸ್ತವ ಹಾನಿ ಇನ್ನೂ ಜಾಸ್ತಿ ಇರುವ ಸಂಭವವೇ ಜಾಸ್ತಿ.


ಹಾನಿಗೆ ತುತ್ತಾದದ್ದರಲ್ಲಿ ಹತ್ತಿ, ದ್ರಾಕ್ಷಿ, ದಾಳಿಂಬೆ, ಸೇವಂತಿಗೆ, ಸೂರ್ಯಕಾಂತಿ ಇತ್ಯಾದಿ ವಾಣಿಜ್ಯ ಬೆಳೆಗಳು ಇವೆ. ಆದರೆ ಇದರಲ್ಲಿ ಪ್ರದಾನ ಭಾಗ ಆಹಾರ ಧಾನ್ಯಗಳದ್ದೂ ಪಾಲು ಇದೆ. ಮೊದಲೇ ಆಹಾರ ಅಭಾವ, ಬೆಲೆ ಏರಿಕೆಯಿಂದ ಕಂಗೆಟ್ಟ ಪರಿಸ್ಥಿತಿಯಲ್ಲಿ ಆದ ಈ ಅನಾಹುತ ಯಾವ ರೀತಿಯ ಪರಿಣಾಮ ಬೀರಬಹುದು.

ಉತ್ಪಾದನೆ ಕುಸಿತ

ಪ್ರವಾಹದ ನೇರ ಪರಿಣಾಮ ಆಹಾರ ಧಾನ್ಯಗಳ ಉತ್ಪಾದನೆಯ ಕುಸಿತದಲ್ಲಿ ಕಾಣಿಸಿಕೊಳ್ಳಲಿದೆ. ಮುಂಗಾರು, ಹಿಂಗಾರು ಬೆಳೆ ನಾಶವಾಗಿದ್ದು ಮಾತ್ರವಲ್ಲ, ಇಲ್ಲಿ ಮತ್ತೊಂದು ಗಂಭೀರ ಸಮಸ್ಯೆ ಎದ್ದುಬಂದಿದೆ. ರಾಜ್ಯದಲ್ಲಿ ಪ್ರವಾಹಕ್ಕೆ ಸಿಲುಕಿ ಕುಸಿದ ಸುಮಾರು 2.25 ಲಕ್ಷಗಳಲ್ಲಿ ಹಾಗೂ ಕುಸಿಯದೇ ಉಳಿದ ಲಕ್ಷಾಂತರ ಮನೆಗಳಲ್ಲಿ ಸಹ ಜನರು ಸಂಗ್ರಹಿಸಿಟ್ಟಿದ್ದ ಆಹಾರ ಧಾನ್ಯ ನೀರುಪಾಲಾಗಿದೆ, ಮಣ್ಣು ಪಾಲಾಗಿದೆ. ಇದು ಪರಿಸ್ಥಿತಿಯನ್ನು ಮತ್ತಷ್ಟು ಭೀಕರಗೊಳಿಸಲಿದೆ.

ಪ್ರವಾಹದ ನೀರಿನಲ್ಲಿ ನೆಂದುಹೋದ ಆಹಾರ ಧಾನ್ಯಗಳನ್ನು, ಕೊಳೆತು, ಮುಗ್ಗುಹಿಡಿದ ವಾಸನೆ ಬರುತ್ತಿರುವ, ಮೊಳಕೆಯೊಡೆದ, ತಿನ್ನಲಾಗದಂತಹ ಹಾಳಾದ ಆಹಾರ ಧಾನ್ಯವನ್ನು ಜನರು ಬೀದಿಗೆ ಚೆಲ್ಲುವ ದೃಶ್ಯವನ್ನು ನೋಡಿದರೆ ಕರಳು ಹಿಂಡಿದಂತಾಗುತ್ತದೆ. ಹೊಲಗದ್ದೆಗಳಲ್ಲಿ ಬುಡಮೇಲಾಗಿ ಬಿದ್ದತೆನೆ, ನೆಲ ಕಚ್ಚುವಂತೆ ತಲೆಕೆಳಗಾದ ಬೆಳೆಯನ್ನು ನೋಡಿದಾಗಲೂ ಅದೇ ಅನುಭವ.

ಕರ್ನಾಟಕ - ಆಂಧ್ರ ಮಾತ್ರವಲ್ಲ ದೇಶದ ಆಹಾರ ಉತ್ಪಾದನೆಯ ಪರಿಸ್ಥಿತಿಯು ಸಮಸ್ಯೆದಾಯಕವೇ ಆಗಿದೆ. ಇಂತಹ ಸನ್ನಿವೇಶದಲ್ಲಿ ಕೇಂದ್ರ - ರಾಜ್ಯ ಸರ್ಕಾರಗಳು ಸ್ವಲ್ಪ ವಿವೇಕ ಹಾಗೂ ಜನ ಕಾಳಜಿಯನ್ನು ತೋರಿ ಎಚ್ಚರ ವಹಿಸದೇ ಹೋದಲ್ಲಿ ಆಹಾರ ಧಾನ್ಯಗಳ ಬೆಲೆ ಏರಿಕೆ ಹಾಗೂ ಕಾಳಸಂತೆಕೋರರು, ಅಕ್ರಮ ದಾಸ್ತಾನುದಾರರ ದುಷ್ಟ ಆಟಗಳಿಗೆ ಕಡಿವಾಣವೇ ಇಲ್ಲವಾಗಿ ಹೋಗುತ್ತದೆ.



ಹಾನಿಯಾದ ಜೋಳ - ಗಂಗಾವತಿಯಲ್ಲಿ

ಭೀಕರ ಬರ ಪರಿಸ್ಥಿತಿಯಲ್ಲಿ ದೇಶದ ಗೋದಾಮುಗಳಲ್ಲಿದ್ದ ಲಕ್ಷ ಲಕ್ಷ ಟನ್ ಆಹಾರವನ್ನು ಜನರ ಕೈಗೆ ಸಿಗುವಂತೆ ಮಾಡದೆ, ಭಾರತದ ಬಡವರಿಗೆ ಸಬ್ಸಿಡಿ ದರದಲ್ಲಿ ನೀಡುವುದಕ್ಕಿಂತ ಅಗ್ಗವಾಗಿ ಅಮೆರಿಕಾದ ಹಂದಿಗಳಿಗೆ ರಫ್ತು ಮಾಡಿದ ಎನ್‌ಡಿಎ ಸರ್ಕಾರದ ಘನ ಕಾರ್ಯವನ್ನು ದೇಶದ ಪ್ರಜ್ಞಾವಂತರು ಇನ್ನೂ ಮರೆತಿಲ್ಲ. ಅಂತಹ ಅನಾಹುತ ಮರು ಕಳಿಸದಂತೆ ರಾಜ್ಯದ, ದೇಶದ ಜನ ಜಾಗ್ರತೆ, ಎಚ್ಚರ ವಹಿಸಬೇಕಿದೆ.

ಮತ್ತೆ ಮುಂದೆ ಉತ್ತಮ ಬೆಳೆ, ಇಳುವರಿಯ ಮೂಲಕ ಆಹಾರ ಧಾನ್ಯಗಳ ಅಭಾವವನ್ನು ನೀಗುವಂತಹ ಸ್ಥಿತಿ ಬರುವ ವರೆಗೆ ಆಹಾರ ಬಿಕ್ಕಟ್ಟು ಜನಸಾಮಾನ್ಯರನ್ನು ಬಿಟ್ಟೂ ಬಿಡದೆ ಕಾಡುವ ಒಂದು ಬೃಹತ್ ಪೀಡೆಯಾಗುವ ಸಂಭವಗಳಿವೆ. ಜನ ಚಳುವಳಿಗಳು ಸರ್ಕಾರಗಳು ಈ ಕುರಿತು ಸೂಕ್ತ ಕ್ರಮವಹಿಸುವಂತೆ ಒತ್ತಡ ಹೇರಬೇಕಾದ ಅಗತ್ಯ, ಅನಿವಾರ್ಯತೆ ಇದೆ. ದೇಶದಾದ್ಯಂತ ಎಡಪಕ್ಷಗಳು ಕರೆ ನೀಡಿರುವ ಆಹಾರ ಚಳುವಳಿಯ ಇಂತಹ ಒಂದು ಅವಕಾಶವನ್ನು ಒದಗಿಸಿಕೊಟ್ಟಿದೆ.

ಲಕ್ಷಾಂತರ ಟನ್ ಆಹಾರ ಹಾಳು ಮಾಡುತ್ತಿರುವ ಯುಪಿಎ ಸರ್ಕಾರ

ಬರ - ಪ್ರವಾಹಗಳು ದೇಶದಲ್ಲಿ ತೀವ್ರ ಆಹಾರದ ಅಭಾವದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಜನರ ಜೀವ ಹಿಂಡುತ್ತವೆ. ಬರ ಮತ್ತು ಪ್ರವಾಹ ಈ ಎರಡನ್ನೂ ಸಂಪೂರ್ಣವಾಗಿ ನಿವಾರಿಸುವುದು ಸರ್ಕಾರಗಳ ಕೈಲಿ ಇಲ್ಲ. ಆದರೆ ಸರ್ಕಾರಗಳು ಸಂಗ್ರಹಿಸಿದ ಆಹಾರದಲ್ಲಿ ಲಕ್ಷಗಟ್ಟಲೇ ಟನ್‌ಗಳಷ್ಟು ಆಹಾರ ಹುಳು ಹುಪ್ಪಟೆ ಹಿಡಿದು, ಇಲಿ, ಹೆಗ್ಗಣಗಳು ಮುಕ್ಕಿ ಹಾಳಾಗುತ್ತವೆ ಎಂದರೆ ಏನು ಎನ್ನುವುದು.

ಅಖಿಲ ಭಾರತ ಕಿಸಾನ್ ಸಭಾದಂತಹ ಸಂಘಟನೆಗಳು ಸರ್ಕಾರವು ಆಹಾರ ಸಂಗ್ರಹಣೆಯ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕು, ಉತ್ತಮ ಗೋಡೋನುಗಳು, ಅಗತ್ಯ ಪದಾರ್ಥಗಳಿಗೆ ಶೈತ್ಯಾಗಾರ ಇತ್ಯಾದಿ ಸೌಕರ್ಯ ಒದಗಿಸಬೇಕೆಂದು ಕೇಳುತ್ತಲೇ ಬರುತ್ತಿವೆ. ಕೇಂದ್ರ ಸರ್ಕಾರ ಈ ಬಗೆಗೆ ಅಗತ್ಯ ಗಮನ ಕೊಡಲು ಸಿದ್ಧವಿಲ್ಲ. ಸೂಕ್ತ ಗೋಡೋನುಗಳ ವ್ಯವಸ್ಥೆ ಇಲ್ಲದೆ ಬಯಲಿನಲ್ಲಿ ತೆರೆದ ಪ್ರದೇಶಗಳಲ್ಲಿ ಎಲ್ಲೆಲ್ಲಿಯೋ ಆಹಾರವನ್ನು ಸಂಗ್ರಹಿಸಿಡಲಾಗುತ್ತದೆ. ಮಳೆಯಿಂದ ರಕ್ಷಣೆಗೆಂದು ತಾಡಪಾಲು ಇತ್ಯಾದಿಗಳನ್ನು ಹೊದಿಸಲಾಗುತ್ತದೆ.

2009 ರ ಏಪ್ರಿಲ್ - ಮೇ ಈ ಎರಡೇ ತಿಂಗಳಲ್ಲಿ ದೇಶದ ಗೋಡೋನುಗಳಲ್ಲಿ ಸಮರ್ಪಕವಾದ ಸೌಲಭ್ಯವಿಲ್ಲದೆ 2.2 ಲಕ್ಷ ಟನ್ ಗೋಧಿ ಮತ್ತು ಅಕ್ಕಿ ವ್ಯರ್ಥವಾಗಿದೆಯೆಂದು ಸ್ವತಃ ಕೇಂದ್ರ ಕೃಷಿ ಮಂತ್ರಿಯೇ ಒಪ್ಪಿಕೊಂಡಿದ್ದಾರೆ. ಎಂಥಾ ಕ್ರಿಮಿನಲ್ ಕೃತ್ಯ ಇದು. ಕಿಸಾನ್ ಸಭಾ ಇದನ್ನು ತೀವ್ರವಾಗಿ ಖಂಡಿಸಿದೆ. ಆಹಾರ ಸಂಗ್ರಹಣೆ ಹಾಗೂ ಸಂರಕ್ಷಣೆ ಸೂಕ್ತ ಸೌಕರ್ಯ ಒದಗಿಸಲು ಆಗಹಿಸಿದೆ.

ಆಹಾರದ ಭದ್ರತೆ
...ನೆರೆ ಹಾವಳಿ ಪರಿಹಾರ ಕುರಿತ
ಎಡಪಕ್ಷಗಳ ಆಂದೋಲನ

ರಾಜ್ಯ ಸಮಾವೇಶ

ಬೆಂಗಳೂರು, ಟೌನ್‌ಹಾಲ್
ಅಕ್ಟೋಬರ್ 26, 2009
ಬೆಳಿಗ್ಗೆ 11 ಗಂಟೆಗೆ

...ದ್ಘಾಟನೆ: ಕಾಂ. ಸೀತಾರಾಂ ಯೆಚೂರಿ
...ಂ.ಪಿ., ಸಿಪಿಐ(ಎಂ) ಪಿಬಿ ಸದಸ್ಯರು
...ಕಾಂ. ದಿವಾಕರನ್, ಆಹಾರ ಸಚಿವರು, ಕೇರಳ
...ರ್ಕಾರ, ಸಿಪಿಐ ನಾಯಕರು
...ಕಾಂ. ನರೇನ್ ದೇವ್, ಕೃಷಿ, ನಾಗರೀಕ ಪೂರೈಕೆ
...ಚಿವರು, ಪ.ಬಂಗಾಳ ಸರ್ಕಾರ, ಫಾರ್ವರ್ಡ್
...ಬ್ಲಾಕ್ - ಇವರು ಭಾಗವಹಿಸಲಿದ್ದಾರೆ.

ಬನ್ನಿ ಭಾಗವಹಿಸಿ

...(ಎಂ) - ಸಿಪಿಐ - ಫಾರ್ವರ್ಡ್ ಬ್ಲಾಕ್

ಆಟೋ ಬಣ್ಣ ಬದಲಾವಣೆ...

ಪುಟ 5 ರಿಂದ

ರಿಂದ 8 ಕೋಟಿ ರೂಪಾಯಿಗಳನ್ನು ಹಸಿರು ಆಟೋ ಬಳಸಿ ಪರಿಸರ ಉಳಿಸಿ ಅಭಿಯಾನ ಕೈಗೊಳ್ಳಲಿದೆಯಂತೆ. ಆ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಿದೆಯಂತೆ. ಹೇಗಿದೆ ನೋಡಿ ಚಾಲಕರಿಂದಲೇ ಹಣ ವಸೂಲಿ ಮಾಡಿ, ಮುಂದಿನ ದಿನಗಳಲ್ಲಿ ಜನತೆ ಕಪ್ಪು ಆಟೋ ಬಳಸದಂತೆ ಮಾಡುವ ಪರಿ. ಇದಕ್ಕಿಂತ ಕುಟಿಲ ನೀತಿ ಎಲ್ಲಾದರೂ ಇದ್ದೀತಾ? ಇಷ್ಟಕ್ಕೂ ಮಿಗಿಲಾಗಿ ಹಿಂದೆ ಪೆಟ್ರೋಲ್ ಆಟೋಗಳಿದ್ದಾಗ ಆಟೋಗಳ ಮೇಲೆ ವಿಧಿಸಲಾಗಿದ್ದ ಗ್ರೀನ್ ಟ್ಯಾಕ್ಸ್ ರೂ.200 ಬಹುತೇಕ ಪೆಟ್ರೋಲ್ ಆಟೋಗಳೇ ಇಲ್ಲದ ಬೆಂಗಳೂರಿನಲ್ಲಿ ಇಂದೂ ಸಹ ಮುಂದುವರಿದಿದೆ.

ಇದರೊಟ್ಟಿಗೆ ಮುಂದೆ ಬರಲಿದೆಯಂತೆ ದುಬಾರಿ ಶುಲ್ಕದ ಜಿ.ಪಿ.ಆರ್.ಎಸ್ ನಂಬರ್ ಪ್ಲೇಟ್. ಅದರಿಂದಾಗಿ ಮತ್ತೆಷ್ಟು ಹೊರೆ ಹೊರಬೇಕೋ ಈ ಸರ್ಕಾರದಿಂದ ಎಂಬುದನ್ನು ಕಾದು ನೋಡಬೇಕಿದೆ.

ಪರಿಸರದ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ.......

ಬೆಂಗಳೂರಿನ ಪರಿಸರದ ಬಗ್ಗೆ ನಿಜವಾಗಿಯೂ ಕಾಳಜಿಯಿದ್ದರೆ, ಚಾಲಕರಿಂದ ವಸೂಲಿ ಮಾಡುವ ಗ್ರೀನ್ ಟ್ಯಾಕ್ಸ್ ಅನ್ನು ಪರಿಸರ ಅಭಿವೃದ್ಧಿಗೆ ಮೀಸಲಿಡಿ. ಉತ್ತಮ ಗುಣಮಟ್ಟದ 2 ಟಿ ಆಯಿಲ್ ಅನ್ನು ಸಬ್ಸಿಡಿ ದರದಲ್ಲಿ ಚಾಲಕರಿಗೆ ನೀಡಿ, ಅದರ ಬಳಕೆ ಬಗ್ಗೆ ಚಾಲಕರಿಗೆ ತರಬೇತಿ ನೀಡಿ, ಕಲಬೆರಕೆ ಆಯಿಲ್ ಮಾರುವ ದಂಧೆ ತಡೆಯಲು, ಆಯಿಲ್ ಮಾಫಿಯಾ ಮೇಲೆ ದಾಳಿ ಮಾಡಿ, ಅದರ ಲಾಭಿಯ ಜಂಘಾಬಲ ಮುರಿಯಿರಿ ಎಂಬ ನೇರ ಸವಾಲು ಚಾಲಕರದು.

ಆಟೋಗಳಿಗೆ ಬಿ.ಎಂ.ಟಿ.ಸಿ. ಪರ್ಯಾಯವಾದೀತೆ?

ಸಾಮೂಹಿಕ ಸಾರಿಗೆ ಯಾವುದೇ ನಗರಕ್ಕೆ ತುಂಬ ಉತ್ತಮ. ಆದರೆ ಬೆಂಗಳೂರಿನಲ್ಲಿನ 1 ಲಕ್ಷ ಆಟೋಗಳು, ಸರಾಸರಿ ದಿನಕ್ಕೆ 20 ಟ್ರಿಪ್ ಮಾಡಿದರೆ, ಸರಾಸರಿ ಇಬ್ಬರನ್ನು ಟ್ರಾನ್ಸ್‌ಪೋರ್ಟ್ ಮಾಡಿದರೆ, ದಿನಕ್ಕೆ ಸರಾಸರಿ 40 ಲಕ್ಷ ಜನರಿಗೆ ಸೇವೆ ಒದಗಿಸುತ್ತಿದೆ ಆಟೋ ವಲಯ. ವಾಸ್ತವದಲ್ಲಿ ಬಿ.ಎಂ.ಟಿ.ಸಿ ದಿನಕ್ಕೆ ಕೇವಲ 45 ಲಕ್ಷ ಜನರನ್ನು ಟ್ರಾನ್ಸ್‌ಪೋರ್ಟ್ ಮಾಡುವ ಸಾಮರ್ಥ್ಯವನ್ನು ಮಾತ್ರ ಸದ್ಯ ಹೊಂದಿವೆ. ಅಂತಹದರಲ್ಲಿ 200 ಅಥವಾ 300 ಬಸ್‌ಗಳ ಹೆಚ್ಚುವರಿ ಸೇವೆ, ಆಟೋಗಳ ಸೇವೆಗೆ ಪರ್ಯಾಯವೇ? ಸದ್ಯಕ್ಕಂತು ಅದು ಅಸಾಧ್ಯ! ಅಷ್ಟಾದರೂ ಸಾಮಾನ್ಯ ಜ್ಞಾನ ಸರ್ಕಾರಕ್ಕೆ ಬಂದರೆ ಒಳಿತು.

ಸರ್ಕಾರಗಳು ಚಾಲಕರಿಗೆ ನೀಡಿದ್ದಾದರೂ ಏನು?

ಪ್ರತಿ ಆಟೋಗಳು ಸರಾಸರಿ ವರ್ಷಕ್ಕೆ ಸರ್ಕಾರಕ್ಕೆ ನೇರ ರೂ.1416 ತೆರಿಗೆಯನ್ನು ಆದಾಯವಾಗಿ ಒದಗಿಸುತ್ತವೆ. ಇದು ಎಲ್.ಪಿ.ಜಿ. ಮೇಲೆ. ಆಟೋ ಮೇಲೆ, ಬಿಡಿ ಭಾಗಗಳ ಮೇಲಿನ ತೆರಿಗೆಗಳಿಂದ ಬರುವ ಆದಾಯ ಹೊರತುಪಡಿಸಿ. ಅಂದರೆ ವಾರ್ಷಿಕ ಹತ್ತಾರು ಕೋಟಿ ರೂಪಾಯಿ ಆದಾಯ ಸರ್ಕಾರಕ್ಕೆ ನೇರ ತೆರಿಗೆಯಿಂದ, ಸಾರಿಗೆ ಇಲಾಖೆ ಮೂಲಕ ಆಟೋಗಳಿಂದ ಲಭಿಸುತ್ತಿದೆ. ಆದರೆ ಆಟೋ ಚಾಲಕರ ಕಲ್ಯಾಣಕ್ಕೆ ಸರ್ಕಾರ ಏನು ಮಾಡಿದೆ? ಏನೂ ಇಲ್ಲ. ಆದ್ದರಿಂದಲೇ ಕಲ್ಯಾಣ ಮಂಡಳಿ ರಚಿಸಿ, ವಸತಿ ನಿವೇಶನ ನೀಡಿ, ರೇಷನ್ ಕಾರ್ಡ್ ನೀಡಿ ಎಂಬ ಬೇಡಿಕೆಯು ಚಾಲಕರ ಬೇಡಿಕೆಯಾಗಿವೆ. ಆದರೆ ಇದರ ಕುರಿತು ಚಕಾರವೆತ್ತದ ಸರ್ಕಾರ ಚಾಲಕರನ್ನು 2 ಸ್ಟ್ರೋಕ್, 4 ಸ್ಟ್ರೋಕ್ ಆಟೋಗಳ, ಕಪ್ಪು ಮತ್ತು ಹಸಿರು ಬಣ್ಣದ ಆಟೋಗಳ ಆಧಾರದ ಮೇಲೆ ವಿಭಜಿಸಲು ಮುಂದಾಗಿದೆ. ಬಣ್ಣ ಬದಲಾಯಿಸದ ಆಟೋಗಳು ಬೆಂಗಳೂರು ಬಿಟ್ಟು ಹೊರ ನಗರಗಳಿಗೆ ಹೋಗಲಿ ಎಂಬ ತಾಕೀತು ಮಾಡುತ್ತಿದೆ. ಚಾಲಕರ ಮೇಲೆ ಹೊರಲಾರದ ಹೊರೆ ಹೊರಿಸಲು ಬಣ್ಣ ಬದಲಾವಣೆ ದುಬಾರಿ ಮೀಟರ್, ಸ್ಮಾರ್ಟ್ ಕಾರ್ಡ್ ಹೆಸರಲ್ಲಿ ದೋಚಲು ಕಂಪನಿಗಳಿಗೆ ಲಾಭ ಮಾಡಿಸಲು, ಗುಬ್ಬಚ್ಚಿ ಬಡಿದು ಹದ್ದಿಗೆ ಹಾಕಲು ಸರ್ಕಾರ ಮುಂದಾಗಿದೆ.

ಸಿಂಪ್ಯೂಟರ್ ಕೇಸ್ ಹಗಲು ದರೋಡೆ

ಆಟೋ ಓಡಿಸುವಾಗ ಹಿಂದೆಂದೂ ಯಾವುದೋ ಚಾಲಕ ಸಿಗ್ನಲ್ ಜಂಪ್ ಮಾಡಿ, ಮತ್ತಿತರೆ ತಪ್ಪು ಮಾಡಿ ಹೋಗಿದ್ದಕ್ಕೆ ಇಂದು ಆಟೋ ಓಡಿಸುವ ಚಾಲಕ ದಂಡ ತೆರಬೇಕು. ಹೇಗಿದೆ ನೋಡಿ ಈ ನ್ಯಾಯ. ಅದನ್ನೇ ಸಿಂಪ್ಯೂಟರ್ ಕೇಸ್ ಅನ್ನೋದು. ಪೊಲೀಸರ ಬಳಿ ಇರುವ ಉಪಕರಣದಲ್ಲಿ ಆಟೋ ನಂಬರ್ ಒತ್ತಿದರೆ ಸಾಕು, ಹಿಂದಿನ 10 ವರ್ಷದ ಪ್ರಕರಣಗಳು, ದಂಡಗಳ ರಸೀದಿ ಬರುತ್ತದೆ. ಆದರೆ ಅದನ್ನು ಇಂದಿನ ಚಾಲಕ ಭರಿಸಬೇಕು. ಹೇಗಿದೆ ಸುಲಿಗೆ?

ಯಾರ ಋಣ ತೀರಿಸಲು ಸರ್ಕಾರದ ಈ ಪಣ

ಬೆಂಗಳೂರಿನ ರಸ್ತೆಗಳು, ಸಾರಿಗೆ ದಟ್ಟಣೆ ಕಾರಣ ಹಾಗೂ ಇರುವ ಚಾಲಕರಿಗೆ ವ್ಯಾಪಾರ ಇಲ್ಲ ಎಂಬ ಚಾಲಕರ ಅಳಲಿನ ಹೋರಾಟದ ಪರಿಣಾಮವಾಗಿ ಬೆಂಗಳೂರಿನ ಆಟೋಗಳ ಸಂಖ್ಯೆಯನ್ನು 75 ಸಾವಿರಕ್ಕೆ ಸೀಮಿತಗೊಳಿಸಲಾಗಿತ್ತು. ಆದರೆ ಬಿಜೆಪಿ ಸರ್ಕಾರ ಬಂದ ನಂತರ ಅವರ ಬೆಂಗಳೂರಿನ ಪರಿಸರದ ಮೇಲೆ ಕಾಳಜಿಯಿಂದಾಗಿ 80 ಸಾವಿರಕ್ಕೆ ಹೆಚ್ಚಿಸಲಾಯಿತು. ಪರಿಣಾಮವಾಗಿ 5000 ಹೆಚ್ಚುವರಿ ಆಟೋಗಳು ಬೆಂಗಳೂರಿನ ಪರಿಸರ ರಕ್ಷಣೆ ಹಾಗೂ ಸಾರಿಗೆ ದಟ್ಟಣೆ ನಿಯಂತ್ರಣದಲ್ಲಿ ತೊಡಗಿವೆ. ಚಾಲಕರ ಸಂಘಗಳ ವಿರೋಧ[illegible] ನಡುವೆಯೂ ನೂತನ ಪರ್ಮಿಟ್ (ಪರವಾನಗಿ) ನೀಡಲಾಗಿದ 80 ಸಾವಿರ ಮಿತಿಯಿಂದಾಗಿ ಹೊಸ ಆಟೋಗಳ ಮಾರಾಟ ಆಗೊಲ್ಲ. ಅದಕ್ಕೆ ಹೊಸ ಹೊಸ ನೀ ಮಾಡಬೇಕು. ಅದಕ್ಕೆ 2 ಸ್ಟ್ರೋಕ್ ಬೇಡ 4 ಸ್ಟ್ರೋಕ್ ಬೇಕು, ಕಪ್ಪು ಬಣ್ಣ (60 ವರ್ಷಗಳಿಂದ ಇರುವ ಬಣ್ ಬೇಡ ಹಸಿರುಬಣ್ಣ ಬೇಕು, ಪರಿಸರಸ್ನೇಹಿ ಆಟೋ ಬೇಕು ಎಂಬೆಲ್ಲ ವಾದ. ತನ್ನ ಅಂದಿನ 'ಬಜಾಜ ಎಂ 80' ಗಾಡಿಗಳ ಮೊದಲ ಸಾವಿರಾರ ಗಾಡಿಗಳನ್ನು ಆರ್.ಎಸ್.ಎಸ್. ಪ್ರಚಾರಕರಿಗೆ ನೀ ಪುನೀತರಾಗಿ, ಬಿಜೆಪಿ ಕಟ್ಟಲು ಸಹಕರಿಸಿದ್ದ ಬಜಾಜ ಕಂಪನಿಗೆ ಇಂದು ಅವರ ಆಟೋಗಳಿಗೆ ಮಾರುಕಟ್ ಒದಗಿಸಿ, ಋಣ ತೀರಿಸಬೇಡವೇ ರಾಜ್ಯ ಬಿಜೆಪಿಯ ಚೊಚ್ಚಲ ಸರ್ಕಾರ?

ಅಂತೆಯೇ ಜನ ಸಂಘದ ಕಾಲದಿಂದ ಅದ ಬೆನ್ನೆಲುಬಾಗಿ ನಿಂತಿರುವ ಮಾರ್ವಾಡಿ ಸೇಠುಗಳ ಬಡ್ಡಿ ಸಾವುಕಾರರಿಗೆ ಗಿರಾಕಿಗಳನ್ನು ಒದಗಿಸಿ, ಋಣ ತೀರಿಸುವುದು ರಾಜ್ಯದಲ್ಲಿ ಪ್ರಥಮ ಬಾರಿಗೆ ಅಧಿಕಾರ ಬಂದಿರುವ ಬಿಜೆಪಿ ಸರ್ಕಾರದ ಧರ್ಮವಲ್ಲವೇ ಅದನ್ನೇ ಸರ್ಕಾರ ಮಾಡುತ್ತಿರುವುದು! ಅದಕ್ಕೆ ಚಾಲಕ ಮುಷ್ಕರ ಯಶಸ್ವಿಯಾದರೆ, ಸಾರಿಗೆ ಸಚಿವ ಮುಖದಲ್ಲಿ ಸಿಟ್ಟು ಜಳಪಿಸುತ್ತದೆ.

ಬಂಡವಾಳಿಗರ, ಸಾಹುಕಾರರ ಋಣ ತೀರಿಸಲ ಸರ್ಕಾರ ಪಣ ತೊಟ್ಟಿರುವಾಗ, ತಮ್ಮ ರಕ್ಷಣೆಗಾ ಅವರ ದುಡಿಮೆಯ ಗಳಿಕೆಯ ಉಳಿಕೆಗಾಗಿ ಚಾಲಕರ ಹೋರಾಟದ ಸಂಘರ್ಷದಲ್ಲಿ ಮುನ್ನಡೆಯಲಿದ್ದಾ ಅದರ ಮೊದಲ ಝಳಕ್ ಅಕ್ಟೋಬರ್ 12 ಮುಷ್ಕರ, ಅಂದು ತಮಗಾದ ತೊಂದರೆಗೆ ಚಾಲಕರು ಬದಲಿಗೆ ಸರ್ಕಾರದ ಕುಟಿಲ ನೀತಿ ಕಾರ ಎಂಬುದನ್ನು ಜನತೆ ಅರಿಯಬೇಕಿದೆ. ಚಾಲಕ ಹೋರಾಟವನ್ನು ಬೆಂಬಲಿಸಬೇಕಿದೆ. ಬೆಂಗಳೂರ ಉಳಿವಿಗಾಗಿ.

ನಕ್ಸಲೀಯ ಚಟುವಟಿಕೆಗಳು...

ಪುಟ 7 ರಿಂದ

ವಾಜಪೇಯಿ ಸರಕಾರದಲ್ಲಿ ಮಂತ್ರಿಯಾಗಿದ್ದುಕೊಂಡು ಆ ಅವಧಿಯಲ್ಲಿ ಗುಜರಾತಿನಲ್ಲಿ ನಡೆದ ಪ್ರಭುತ್ವ-ಪ್ರಾಯೋಜಿತ ಕೋಮುವಾದಿ ನರಮೇಧದ ವಿರುದ್ಧ ತುಟಿಪಿಟಕ್ಕೆನ್ನದೆ ಪರೋಕ್ಷವಾಗಿ ಅದನ್ನು ಬೆಂಬಲಿಸಿದ ಒಂದು ವ್ಯಕ್ತಿಯನ್ನು ಪಶ್ಚಿಮ ಬಂಗಾಲದ ಮುಂದಿನ ಮುಖ್ಯ ಮಂತ್ರಿ ಎಂದು ಸಾರುತ್ತಿದ್ದಾರೆ! ಅವರೀಗ ನವ-ಉದಾರವಾದಿ ನೀತಿಗಳನ್ನು ಅನುಸರಿಸುತ್ತಿರುವ ಮನಮೋಹನ ಸಿಂಗ್ ಸಂಪುಟದಲ್ಲಿಯೂ 'ಹಿರಿಯ' ಮಂತ್ರಿ!

ಹೀಗಿದೆ ಮಾವೋವಾದಿಗಳ 'ವರ್ಗದಾಳಿ', ಅವರ ಸಮಯಸಾಧಕತನದ ಉದಾಹರಣೆ.

ಪ್ರಧಾನ ಶತ್ರು ಯಾರು?

1967ರಲ್ಲಿ ಸಿಪಿಐ(ಎಂ) ನಿಂದ ಹೊರ ಹೋದ ನಂತರ ಹಲವು ಚೂರುಚೂರಾಗಿ ಹೋದ ನಕ್ಸಲವಾದಿ ಗುಂಪುಗಳು ಭಾಗಶಃ ಮತ್ತೆ ಒಂದಾಗಿದ್ದರ ಫಲಿತಾಂಶವೇ ಇಂದಿನ ಈ ಮಾವೋವಾದಿಗಳು. 1969ರಲ್ಲಿ ಚಾರು ಮಜುಂದಾರ್ ರಚಿಸಿದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ- ಲೆನಿನ್‌ವಾದಿ) ಕಳೆದ ಮೂರು ದಶಕಗಳಲ್ಲಿ ಹಲವಾರು ಬಾರಿ ಒಡೆದು, ಮತ್ತೆ-ಮತ್ತೆ ಒಡೆದು ಹಲವು ಗುಂಪುಗಳು ಹುಟ್ಟಿ ಬಂದವು. ಇವುಗಳಲ್ಲಿ ಬಿಹಾರದ ಮಾವೋವಾದಿ ಕಮ್ಯುನಿಸ್ಟ್ ಸೆಂಟರ್(ಎಂಸಿಸಿ) ಮತ್ತು ಆಂಧ್ರಪ್ರದೇಶದ ಪೀಪಲ್ಸ್ ವಾರ್ ಗ್ರೂಪ್(ಪಿಡಬ್ಲ್ಯುಜಿ) ವಿಲೀನಗೊಂಡು 2004ರಲ್ಲಿ ಸಿಪಿಐ(ಮಾವೋವಾದಿ) ರಚನೆಯಾಯಿತು.

ಮಾವೋವಾದಿಗಳು ಸಿಪಿಐ(ಎಂ)ನಿಂದ ಒಡೆದು ಹೋದದ್ದು ಭಾರತೀಯ ಆಳುವ ವರ್ಗಗಳ ವರ್ಗಸ್ವರೂಪದ ಕುರಿತ ಭಿನ್ನಾಭಿಪ್ರಾಯದಿಂದ. ಅವರ ಪ್ರಕಾರ ಭಾರತೀಯ ಆಳುವ ವರ್ಗಗಳು 'ಕಾಂಪ್ರೆಡೋರ್', ಅಂದರೆ ಸಾಮ್ರಾಜ್ಯಶಾಹಿಯ ದಳ್ಳಾಳಿಗಳು, ಭಾರತೀಯ ಜನಗಳ ನಡುವೆ ಯಾವುದೇ ಅರ್ಥಪೂರ್ಣ ಸಾಮಾಜಿಕ ಅಥವಾ ರಾಜಕೀಯ ನೆಲೆಯಿಲ್ಲದವರು. ಆದ್ದರಿಂದ ಭಾರತೀಯ ಜನತೆಯನ್ನು ಸಶಸ್ತ್ರರಾಗಿ ಮಾಡಿ ಕ್ರಾಂತಿಕಾರಿ ವಿಮೋಚನೆಗೆ ಒಂದು 'ಜನತಾ ಯುದ್ಧ' ಆರಂಭಿಸಿದರೆ ಸಾಕು. ನಕ್ಸಲ್‌ಬಾರಿ ಅಂದಾಜು ಮೂಡಿಬಂದದ್ದು ಹೀಗೆ. ಅದನ್ನು ಪ್ರಭುತ್ವ ಬೇಗನೇ ತುಳಿದು ಹಾಕಿತು.

ಭಾರತದ ಬಂಡವಾಳಶಾಹಿ-ಭೂಮಾಲಕ ಆಳುವ ವರ್ಗಗಳಿಗೆ ಭಾರತೀಯ ಜನತೆಯ ನಡುವೆ ಒಂದು ಬಲಿಷ್ಟ ರಾಜಕೀಯ, ಸಾಮಾಜಿಕ ನೆಲೆಯಿದೆಯೆಂಬ ಸಂಗತಿ ಕಳೆದ ನಾಲ್ಕು ದಶಕಗಳಲ್ಲಿ ಸ್ಪಷ್ಟವಾಗಿ ಅನುಭವಕ್ಕೆ ಬಂದರೂ ನಕ್ಸಲ್/ ಮಾವೋವಾದಿ ಗುಂಪುಗಳು ತಮ್ಮ ಅಂದಾಜಿಗೇ ಅಂಟಿಕೊಂಡಿವೆ. ಇನ್ನೊಂದೆಡೆ ಸಿಪಿಐ(ಎಂ) ಸಂಸದೀಯ ಮತ್ತು ಸಂಸದೀಯೇತರ ವಿಧಾನಗಳೆರಡನ್ನೂ ಬಳಸಿ ಭಾರತೀಯ ಜನತೆಯ ನಡುವೆ ವರ್ಗ ಬಲಾಬಲದಲ್ಲಿ ಬದಲಾವಣೆ ತರಲು ಶ್ರಮಿಸುತ್ತಿರುವುದು ಮಾವೋವಾದಿಗಳಿಗೆ ಸಂಸದೀಯ ಪ್ರಜಾಪ್ರಭುತ್ವದ ಸಮರ್ಥನೆಯಾಗಿ ಕಾಣುತ್ತದೆ. ಆದ್ದರಿಂದಲೇ ಸಿಪಿಐ(ಎಂ) ಅವರಿಗೆ ಪ್ರಧಾನ ಶತ್ರು!

ಪ್ರತಿಗಾಮಿಗಳಿಗೇ ಪ್ರಯೋಜನ

ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆ ಗತಿತಾರ್ಕಿಕ ತತ್ವದ ಸಾರ ಎಂದಿದ್ದರು ಲೆನಿನ್. ಪರಿಸ್ಥಿತಿಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ, ತಪ್ಪು ವಿಶ್ಲೇಷಣೆ ತಪ್ಪು ರಾಜಕೀಯ ದಾರಿ ಹಿಡಿಯುತ್ತದೆ. ಜನಗಳನ್ನು ಅಣಿನೆರೆಸಿ ವರ್ಗ ಬಲಾಬಲವನ್ನು ಬದಲಿಸುವ ಕೆಲಸವನ್ನು ಬಿಟ್ಟು ಬಂದೂಕಿನ ಭಯದಿಂದ ಜನ ತಲೆಬಾಗುವಂತೆ ಮಾಡಲು ಸಾಧ್ಯವಿಲ್ಲ. ಈ ಪ್ರಕ್ರಿಯೆಯಲ್ಲಿ, ವಿಶ್ವದಲ್ಲಿಯೇ ಶಕ್ತಿಶಾಲಿ ಜನತಾ ಆಂದೋಲನಕ್ಕೆ ನೇತೃತ್ವ ನೀಡಿ ಚೀನೀ ಕ್ರಾಂತಿಯನ್ನು ಯಶಸ್ವಿಯಾಗಿ ಈಡೇರಿಸಿದ ಮಾವೋ ತ್ಸೆ ತುಂಗ್ ಹೆಸರನ್ನು ಆತನ ಆಚರಣೆಗೆ ತದ್ವಿರುದ್ಧವಾದ ಕಾರ್ಯಾಚರಣೆಗೆ ಬಳಸಲಾಗುತ್ತಿದೆ. ನೀರಿನಲ್ಲಿರುವ ಮೀನಿನಂತೆ ಕಮ್ಯುನಿಸ್ಟರು ಜನಗಳೊಂದಿಗೆ ಬೆರ ಹೋಗದಿದ್ದರೆ ಯಾವುದೇ ಕ್ರಾಂ ಯಶಸ್ವಿಯಾಗುವುದಿಲ್ಲ ಎಂದು ಮಾವೋ ನಮಗೆ ಕಲಿಸಿದ್ದರು. ಬಂದೂಕಿನ ಭಯ ತೋರಿಸಿ ಇ ಎಂದೂ ಸಾಧ್ಯವಾಗದು.

ಒಟ್ಟು ಫಲಿತಾಂಶವೆಂದರೆ ಮಾವೋವಾದಿ ಆಚರಣೆ ವಾಸ್ತವವಾಗಿ ತೃಣಮೂಲ ಕಾಂಗ್ರೆಸಿನಂತ ಪ್ರತಿಗಾಮಿ ಶಕ್ತಿಗಳಿಗೇ ಪ್ರಯೋಜನ ಕೊಡುತ್ತ ಸಾಮ್ರಾಜ್ಯಶಾಹಿಯ ವಿರುದ್ಧವಾಗಲಿ ಕೋಮುವಾದದ ವಿರುದ್ಧವಾಗಲೀ ಯಾವು ವಿರೋಧ ತೋರದೆ ಅವರು ವರ್ಗ ಶೋಷಣೆ ಕೋಟೆ ಇನ್ನೂ ಗಟ್ಟಿಯಾಗಿ ಉಳಿಯುವ ಮಾಡುತ್ತಿದ್ದಾರೆ. 1967ರಲ್ಲಿ ಅವ ಸಿಪಿಐ(ಎಂ)ನಿಂದ ಪ್ರತ್ಯೇಕವಾದಂದಿನಿಂದಲ ಹಿಂಸಾಚಾರದ ಮತ್ತು ಭಯೋತ್ಪಾದನೆ ರಾಜಕೀಯ ಬಿಟ್ಟು ಪ್ರಜಾಪ್ರಭುತ್ವವಾ ಮುಖ್ಯಧಾರೆಗೆ ಮರಳಿ, ಜನಗಳನ್ನು ಒಂ ಕ್ರಾಂತಿಕಾರಿ ಬದಲಾವಣೆಗೆ ಅಣಿನೆರೆಸುವ ಜತೆಗೂಡಿ ಎಂದು ಆಗ್ರಹಿಸುತ್ತಲೇ ಬರಲಾಗಿ 'ನೂರು ಹೂವುಗಳು ಅರಳಲಿ, ಸಾವಿರ ಚಿಂತನೆ ಸ್ಪರ್ಧಿಸಲಿ' ಎಂದು ಮಾವೋ ತಾನೇ ಹೇಳಿದ್ದು.

'ಹೊಲಸು' ಸಂಬಳ ನಿಲ್ಲಿಸಿ ಎಂದರಾ ಮಂತ್ರಿ

ಭಾರತದ ಕೆಲವು ಖಾಸಗೀ ಕಂಪನಿಗಳ ಮುಖ್ಯ ಅಧಿಕಾರಿ(ಸಿಇಒ)ಗಳ ಸಂಬಳ 50 ಕೋಟಿ ರೂ.ಗೂ ಹೆಚ್ಚು ಎಂಬುದು ನಿಮಗೆ ಗೊತ್ತೇ? ಇದು ದೇಶದ ತಲಾ ಆದಾಯದ 12500 ಪಟ್ಟು. ಸರಕಾರ ಈ ಬಗ್ಗೆ ಕಣ್ಣು ಮುಚ್ಚಿರಲು ಸಾಧ್ಯವಿಲ್ಲ, ಇದು ಅತ್ಯಂತ ಹೊಲಸು ಸಂಗತಿ, ಇದನ್ನು ನಿಲ್ಲಿಸಿ ಎಂದು ಕೇಂದ್ರ ಮಂತ್ರಿ ಸಲ್ಮಾನ್ ಖುರ್ಶಿದ್ ಖಾಸಗೀ ಮಾಲಕರಿಗೆ ಸಲಹೆ ಮಾಡಿದರು. ಕಂಪನಿಯ ಶೇರುದಾರರು ಅವರ ಸಂಬಳವನ್ನು ನಿರ್ಧರಿಸಬೇಕು ಎಂದರು. ತಕ್ಷಣವೇ ಮಾಲಕರ ಸಂಘಟನೆಗಳು ಫಿಕಿ, ಅಸೋಚಾಂ ಅವರ ಮೇಲೆ ಹರಿಹಾಯ್ದರು. ಅತ್ಯುತ್ತಮ ಪ್ರತಿಭೆಗಳನ್ನು ಆಕರ್ಷಿಸಬೇಕಾದರೆ ಇದು ಅಗತ್ಯ, ಮಾರುಕಟ್ಟೆ ಇದನ್ನು ನಿರ್ಧರಿಸುತ್ತದೆ ಎಂದರು, ಮಾರುಕಟ್ಟೆ ಕುಸಿಯಲು 'ನಿರ್ಧರಿಸಿ'ದಾಗ ಸರಕಾರದ ಬಳಿ ಓಡಿ ಹೋಗಿ ತೆರಿಗೆದಾರರ ಹಣದಿಂದ ತಮ್ಮನ್ನು ರಕ್ಷಿಸಿ ಎಂದು ಅಂಗಲಾಚಿದ ಈ ಘಟಾನುಘಟಿಗಳು.

ಪಾಪ, ಸಲ್ಮಾನ್ ಎರಡು ವರ್ಷಗಳ ಹಿಂದೆ ಈ ಸಲಹೆ ನೀಡಿದ್ದ ದೇಶದ ಪ್ರಧಾನ ಮಂತ್ರಿಗಳು ತಮ್ಮ ನೆರವಿಗೆ ಬರಬಹುದು ಎಂದುಕೊಂಡಿದ್ದರು. ಮಹಾರಾಷ್ಟ್ರ ಚುನಾವಣೆಯ ಸಂದರ್ಭದಲ್ಲಿ ಉದ್ಯಮಿಗಳನ್ನು ಭೇಟಿ ಮಾಡಿದ ಪ್ರಧಾನಿಗಳು ಸರ್ಕಾರ ಇದರ... ತಲೆ ಹಾಕುವುದಿಲ್ಲ, ಕಂಪನಿಗಳ ಆಡಳಿತ ಮಂಡಳಿಗಳು(ಖುರ್ಶಿದ್ ಹೇಳಿದಂತೆ ಶೇರುದಾರರೂ ಅಲ್ಲ!) ಇದನ್ನು ನಿರ್ಧರಿಸಲಿ ಎಂದರು!

★

ರಾಹುಲ ಜ್ಞಾನೋದಯ

ಭಾರತದ ಬಗ್ಗೆ ಬಿಜೆಪಿಯವರಿಗೂ ಗೊತ್ತಿಲ್ಲ, ಎಡಪಕ್ಷಗಳವರಿಗೂ ಗೊತ್ತಿಲ್ಲ. ಎರಡು ಭಾರತಗಳಿವೆ. ನಾನು ಇದನ್ನು ತಿಳಿಯಲು ಬಡವರ ಮನೆಗೆ ಹೋದರೆ ಇವರು ನಗುತ್ತಾರೆ. ಬಿಜೆಪಿಯವರು 'ಹೊಳೆಯುತ್ತಿರುವ ಭಾರತ'ದ ಬಗ್ಗೆ ಮಾತ್ರ ಮಾತಾಡಿದರೆ ಎಡಪಕ್ಷಗಳವರು ದೇಶದ ಮುಂದಿರುವ ಅವಕಾಶಗಳನ್ನು ಕಳೆದುಕೊಂಡು ಕೇವಲ ಇಲ್ಲದವರ ಮೇಲೆಯೇ ಗಮನ ಕೇಂದ್ರೀಕರಿಸುತ್ತಾರೆ. ಕಾಂಗ್ರೆಸ್ ಮಾತ್ರವೇ ಇವೆರಡೂ ಭಾರತಗಳನ್ನು ಜೋಡಿಸುವ ಪ್ರಯತ್ನ ಮಾಡುತ್ತಿದೆ- ಇದು ಅಮೇಥಿಯಲ್ಲಿ ಜ್ಞಾನೋದಯ ಗಳಿಸಿದ ಯುವ ನೇತಾರ ರಾಹುಲ್ ಗಾಂಧಿ ಉವಾಚ- ನಿಜ, ಚುನಾವಣಾ ಪ್ರಚಾರ ಸಭೆಗಳಲ್ಲಿ.

★

ಹೀಗೊಂದು ಬಡತನ ನಿರ್ಮೂಲನಾ ಕಾರ್ಯಕ್ರಮ

ಹರ್ಯಾಣಾದಲ್ಲಿ ಈ ಬಾರಿಯ ವಿಧಾನ ಸಭಾ ಚುನಾವಣೆಗಳಲ್ಲಿ ಅರ್ಧಕ್ಕೂ ಹೆಚ್ಚು ಕೋಟ್ಯಾಧೀಶ ಅಭ್ಯರ್ಥಿಗಳು, ಇವರಲ್ಲಿ 80 ಶೇಕಡಾ ರಾಹುಲ್ ಗಾಂಧಿಯವರ 'ಆಮ್ ಆದ್ಮಿ' ಪಕ್ಷದವರು ಎಂದು ಕಳೆದ ವಾರ ಗಮನಿಸಿದ್ದೆವು. ಈ ವಾರ ಪ್ರಕಟವಾಗಿರುವ ಇನ್ನಷ್ಟು ಮಾಹಿತಿಗಳನ್ನು ರಾಹುಲ್ ಉವಾಚದ ಹಿನ್ನೆಲೆಯಲ್ಲಿ ಗಮನಿಸಬೇಕು.

ಇದೇ ಹರ್ಯಾಣಾದಲ್ಲಿ 2004ರಲ್ಲಿ ಗೆದ್ದಿದ್ದು ಈ ಬಾರಿ ಮತ್ತೆ ಸ್ಪರ್ಧಿಸುತ್ತಿರುವ 42 ಶಾಸಕರ ಆಸ್ತಿಗಳು ಕಳೆದ ಐದು ವರ್ಷಗಳಲ್ಲಿ ತಲಾ 4.8 ಕೋಟಿ ರೂ.ಗಳಷ್ಟು ಹೆಚ್ಚಿದೆ. ಅಂದರೆ 388 ಶೇಕಡಾ ನೆಗೆತ, ಕಳೆದ ಐದು ವರ್ಷಗಳಲ್ಲಿ ಸತತವಾಗಿ ಗಂಟೆಗೆ 1100ರೂ.ನ ದರದಲ್ಲಿ ಇವರ ಆಸ್ತಿ ಬೆಳೆಯುತ್ತಾ ಬಂದಿದೆ ಎಂದ ಹಾಗಾಯಿತು ಎಂದು ಪ್ರಸಿದ್ಧ ಪತ್ರಕರ್ತ ಪಿ.ಸಾಯಿನಾಥ್ ಲೆಕ್ಕ ಹಾಕಿದ್ದಾರೆ. ಪ್ರತಿಯೊಬ್ಬ ಭಾರತೀಯ ಒಂದು ಅವಧಿಗಾದರೂ ಎಂಎಲ್‌ಎ ಆಗಿ ಸೇವೆ ಸಲ್ಲಿಸಲೇ ಬೇಕು ಎಂದು ಒಂದು ಸಂವಿಧಾನ ತಿದ್ದುಪಡಿ ತಂದರೆ ಬೇರೆ ಯಾವ ಬಡತನ ನಿರ್ಮೂಲನಾ ಕಾರ್ಯಕ್ರಮವೂ ಬೇಕಾಗುವುದಿಲ್ಲ ಎಂದೂ ಅವರು ಚುಚ್ಚಿದ್ದಾರೆ.

ಈ 42 ಶಾಸಕರಲ್ಲಿ ಟಾಪ್ 4 ಸ್ಥಾನಗಳಲ್ಲಿರುವವರು ಅದೇ ರಾಹುಲ್ ಪಕ್ಷದವರು. ಇವರ ಆಸ್ತಿ ಬೆಳವಣಿಗೆ ದರ ಸರಾಸರಿ 800ಶೇಕಡಾ. ಇದರಲ್ಲಿ ಮೊದಲಸ್ಥಾನ ಪಡೆದಿರುವ ಕಾಂಗ್ರೆಸಿಗನ ಆಸ್ತಿ ಬೆಳವಣಿಗೆ ದರ 5000 ಶೇಕಡಾ. ಎರಡು ಭಾರತಗಳನ್ನು ಜೋಡಿಸುವುದೆಂದರೆ ಇದೇ ಇರಬೇಕು!

★

ಯುಪಿಎ II ದರ್ಬಾರ್‌ನಲ್ಲಿ



ಪ್ರಧಾನ ಮಂತ್ರಿಗಳೂ, ಅವರ ರೈಲು ಮಂತ್ರಿಗಳೂ

ನಕ್ಸಲ್ ಹಿಂಸಾಚಾರ ದೇಶದ ಅತಿ ದೊಡ್ಡ ಆಂತರಿಕ ಸಮಸ್ಯೆ ಎಂದು ಮೊನ್ನೆಯಷ್ಟೇ ಪ್ರಧಾನ ಮಂತ್ರಿಗಳು ಮುಂಬೈಯಲ್ಲಿ ಸಾರಿದರು. ಅತ್ತ ಕೊಲ್ಕೊತಾದಲ್ಲಿ ಅವರ ರೈಲು ಮಂತ್ರಿ ಮಮತಾ ಬ್ಯಾನರ್ಜಿ ಪಶ್ಚಿಮ ಬಂಗಾಳದ ಲಾಲಗಡದಲ್ಲಿ ಹಿಂಸಾಚಾರ ನಡೆಸುತ್ತಿರುವ ನಕ್ಸಲರ ವಿರುದ್ಧ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ಜಂಟಿ ಕಾರ್ಯಾಚರಣೆ ನಿಲ್ಲಿಸಿ ಎಂದು ಕೂಗಾಡಿದ್ದಾರೆ. ಇನ್ನೊಂದೆಡೆ ಆ ರಾಜ್ಯದಲ್ಲಿ ಕಾನೂನು-ವ್ಯವಸ್ಥೆ ಸಂಪೂರ್ಣ ಕೆಟ್ಟಿದೆಯಾದ್ದರಿಂದ ಮುಖ್ಯ ಮಂತ್ರಿ ಬುದ್ಧದೇವ ಭಟ್ಟಾಚಾರ್ಯ ರಾಜೀನಾಮೆ ಕೊಡಬೇಕು ಎಂದೂ ಕೂಗಾಡಿದ್ದಾರೆ. ಇದು ಒಂದು 'ಬಾಲಗ್ರಹ ಪೀಡೆ' ಎಂದು ಮುಖ್ಯ ಮಂತ್ರಿಗಳು ಟೀಕಿಸಿದ್ದಾರೆ.

ಈ ನಡುವೆ ಪಶ್ಚಿಮ ಬಂಗಾಳದಲ್ಲಿ ನವಂಬರಿನಲ್ಲಿ ನಡೆಯಲಿರುವ ವಿಧಾನ ಸಭಾ ಉಪಚುನಾವಣೆಗಳಲ್ಲಿ ಸ್ಪರ್ಧಿಸಬೇಕಾದ ಸ್ಥಾನಗಳ ಬಗ್ಗೆ ಈ ಎರಡು ಕಾಂಗ್ರೆಸುಗಳ ನಡುವೆ ಜಟಾಪಟಿಯೂ ಮುಂದುವರೆದಿದೆ.

ಜನರ ಮೇಲೆ ಎರಗುತ್ತಿರುವ ಬಿಜೆಪಿ ಸರ್ಕಾರ



ಬಿಜೆಪಿ ದರ್ಬಾರ್‌ನಲ್ಲಿ

ವಿದ್ಯುತ್ ದರ ಏರಿಕೆ - 'ಈ'ರಪ್ಪ ಅಪೇಕ್ಷೆ

ನೆರೆ ಮತ್ತು ಪ್ರವಾಹಗಳಂತಹ ಘೋರ ವಿಪತ್ತುಗಳನ್ನು ಎದುರಿಸಿ ಅಳಿದುಳಿದ ಜನರ ಮೇಲೆ ಈಗ ರಾಜ್ಯ ಬಿಜೆಪಿ ಸರ್ಕಾರ ಎರಗಲು ಸಿದ್ಧವಾಗಿದೆ. ಕರ್ನಾಟಕ ರಾಜ್ಯ ಸರ್ಕಾರದ ಇಂಧನ ಸಚಿವ ಕೆ.ಎಸ್.ಈಶ್ವರಪ್ಪ ವಿದ್ಯುತ್‌ನ ಪ್ರತಿ ಯುನಿಟ್‌ಗೆ ... ಪೈಸೆ ದರ ಹೆಚ್ಚಳ ಮಾಡುವುದು ಅನಿವಾರ್ಯ ಎಂದಿದ್ದಾರೆ.

ಈಗಾಗಲೇ ವಿದ್ಯುತ್ ದರ ಏರಿಸಬೇಕಿತ್ತು. ಏರಿಸಲು ಸಾಧ್ಯವಾಗಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ. ಅವರು ಹೇಳಿರುವುದನ್ನು ...

"ವಿದ್ಯುತ್ ದರ ಹೆಚ್ಚಿಸಬೇಕೆಂಬುದು ನಮ್ಮ ಅಪೇಕ್ಷೆಯಾದರೂ ನಿರ್ಧಾರ ನಮ್ಮ ಕೈಯಲಿಲ್ಲ. ಹಾಗಾಗಿ ಕೆ.ಇ.ಆರ್.ಸಿ.ಗೆ ಮನವಿ ಮಾಡಲಾಗಿದೆ. ಆದರೆ ಆ ಕಡೆಯಿಂದ ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಅದರಿಂದಾಗಿಯೇ ವಿದ್ಯುತ್ ದರದಲ್ಲಿ ಹೆಚ್ಚಳ ಮಾಡಿಲ್ಲ."

ವಿದ್ಯುತ್ ದರ ಏರಿಕೆಯಿಂದ ಜನಕ್ಕೆ ಆಗಬಹುದಾದ ತೊಂದರೆಗಳ ಬಗ್ಗೆ ಚಕಾರವನ್ನೂ ಎತ್ತದೇ ಶುಲ್ಕ ಏರಿಕೆಯನ್ನು ಅಪೇಕ್ಷಿಸುವ ಇಂತಹ ಸರ್ಕಾರದ ಹೃದಯ ಯಾರಿಗಾಗಿ ಮಿಡಿಯುತ್ತಿರಬಹುದು?

★

ರಾಜ್ಯದಲ್ಲಿ ಪೆಟ್ರೋಲ್ ಬೆಲೆ ಏರಿಕೆ ?!

ಪ್ರವಾಹ ಸಂತ್ರಸ್ತರಿಗೆ ಪರಿಹಾರ ನೀಡುವುದು, ಪುನರ್‌ವಸತಿ ಮುಂತಾದ ಕಾರ್ಯಗಳಿಗೆ ದೊಡ್ಡ ಪ್ರಮಾಣದ ಹಣ ಬೇಕಾಗಿದೆ ಎಂಬುದೇನೋ ನಿಜವೇ. ಮುಖ್ಯಮಂತ್ರಿ ಯಡಿಯೂರಪ್ಪನವರು ಇದಕ್ಕೆ ಅಗತ್ಯ ಸಂಪನ್ಮೂಲ ಸಂಗ್ರಹಿಸಲು ಶ್ರೀಮಂತರಿಗೆ 'ಪ್ರವಾಹ ಪರಿಹಾರ ತೆರಿಗೆ' ವಿಧಿಸುವುದಾಗಿ ಘೋಷಿಸಿದರು.

ತೆರಿಗೆ ತೆರಲು ಶಕ್ತವಾದ ಶ್ರೀಮಂತ ವಿಭಾಗಗಳಿಂದ ಈ ಉದ್ದೇಶಕ್ಕೆ ತೆರಿಗೆ ಸಂಗ್ರಹಿಸುವುದು ಸ್ವಾಗತಾರ್ಹವಾದ ವಿಷಯವೇ. ಆದರೆ ಈ ತೆರಿಗೆ ತೆರಬಲ್ಲ ವಿಭಾಗ ಯಾವುದು ಎಂಬುದು ಪ್ರಶ್ನೆ.

ಯಡಿಯೂರಪ್ಪನವರು ರಾಜ್ಯದಲ್ಲಿ ಲೀಟರ್‌ಗೆ ಸುಮಾರು ಮೂರು ರೂಪಾಯಿಯಷ್ಟು ಪೆಟ್ರೋಲ್ - ಡೀಸೆಲ್ ಬೆಲೆಯನ್ನು ಹೆಚ್ಚಿಸಿ ಆ ಮೂಲಕ ಸಂಪನ್ಮೂಲ ಸಂಗ್ರಹಿಸುವ ಆಲೋಚನೆ ಹರಿಯಬಿಟ್ಟಿದ್ದಾರೆ. ಇದೊಂದು ಜನವಿರೋಧಿ ಆಲೋಚನೆ. ಪೆಟ್ರೋಲ್ - ಡೀಸೆಲ್ ಬೆಲೆ ಏರಿದರೆ ಅದರ ಪರಿಣಾಮ ಬಡವರು, ಕೆಳ ಮಧ್ಯಮವರ್ಗ, ಮಧ್ಯಮ ವರ್ಗ ಎಲ್ಲರನ್ನು ತಟ್ಟುತ್ತದೆ. ಸರಕು ಸಾಗಾಣೆ ದರಗಳು ಏರಿದರೆ ಆಹಾರ ಧಾನ್ಯ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ಏರಲಿವೆ. ಜನತೆ ಮತ್ತಷ್ಟು ಸಂಕಷ್ಟಕ್ಕೆ ದೂಡಲ್ಪಡುತ್ತದೆ. ಬಿಜೆಪಿ ಸರ್ಕಾರದ ಕೆಲವು ಮಾತು, ಘೋಷಣೆ ಕೇಳಲು ಚೆನ್ನಾಗಿರುತ್ತವೆ. ಜಾರಿಗೆ ಬಂದರೆ ಬಡಬಗ್ಗರ ಕಿಬ್ಬದಿಯ ಕೀಲು ಮುರಿದಂತಿರುತ್ತದೆ. ಜನತೆ ಎಚ್ಚರ ವಹಿಸಬೇಕಿದೆ.

★

'ಮಂತ್ರಾಲಯ ಮಹಾತ್ಮ'ಗೆ 10 ಕೋಟಿ

ರಾಜ್ಯದ ಪ್ರವಾಹ ಪೀಡಿತ ಜನರ ಗತಿ ಏನಾಗಿದೆ ಎಂದು ಇನ್ನೂ ವಿಚಾರಿಕೊಳ್ಳುವ ಮೊದಲೇ ರಾಜ್ಯ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆಂಧ್ರ ಪ್ರದೇಶದಲ್ಲಿರುವ ಮಂತ್ರಾಲಯಕ್ಕೆ 10 ಕೋಟಿ ರೂಪಾಯಿಗಳ ಪರಿಹಾರ ಘೋಷಿಸಿಬಿಟ್ಟರು.

ಮಂತ್ರಾಲಯದಲ್ಲಿ ನಡುನೀರಿನಲ್ಲಿ ನಿಂತಿದ್ದ ಭಕ್ತರಿಗೆ ಟಾಟಾ ಹೇಳಿ ತಾವು ಮಾತ್ರ ಶೋಭಕ್ಕನ ಜೊತೆ ಹೆಲಿಕಾಪ್ಟರ್ ಏರಿದ ಮಂತ್ರಾಲಯ ಮಹಾತ್ಮರ ಬಗೆಗೆ ಈಗಾಗಲೇ ಎಲ್ಲರಿಗೂ ಗೊತ್ತಾಗಿದೆ. ಮಂತ್ರಾಲಯದ ಈ ಪರಂಪರೆ ಮುಂದುವರೆಯುವ ಹಾಗೆ ಕಾಣುತ್ತಿದೆ. ಈಗ ಮಂತ್ರಾಲಯವನ್ನು ಹೊಸದಾಗಿ ನಿರ್ಮಿಸಲು ತೀರ್ಮಾನಿಸಲಾಗಿದೆಯಂತೆ. ಇದಕ್ಕೆ 50 ಕೋಟಿ ರೂಪಾಯಿ ಅಗತ್ಯವಾಗಿದೆಯಂತೆ. ಭಕ್ತರಿಂದ ಹಣ ಸಂಗ್ರಹಿಸಲು ತೀರ್ಮಾನಿಸ ಲಾಗಿದೆಯಂತೆ. ಇರುವ ಮಂತ್ರಾಲಯವನ್ನೇ ತೊಳೆದು ಸ್ವಚ್ಛ ಮಾಡಿಕೊಂಡು 50 ಕೋಟಿಯನ್ನು ಮನೆಮಾರು ಕಳೆದುಕೊಂಡವರ ಪುನರ್‌ವಸತಿಗೆ ಬಳಸಿದರೆ ಆಗದೇ? ಹೊಸಮಂತ್ರಾಲಯಕ್ಕೆ ಅಂತ ಯಡಿಯೂರಪ್ಪನವರು ಜನರ ತೆರಿಗೆ ಹಣವನ್ನು ಮತ್ತೆ ಮಠದ ಉಡಿಗೆ ಹಾಕದಿದ್ದರೆ ಸರಿ ಅಷ್ಟೇ. ಈಗಾಗಲೇ ಕೊಟ್ಟಿರುವ 10 ಕೋಟಿಯೂ ಇದಕ್ಕೆ ಖರ್ಚಾಗುವುದೇನೋ? ಹುಚ್ಚನ ಮದುವೆಯಲ್ಲಿ ಉಂಡವನೇ ಜಾಣನೇ?

ಯಾರಿಹರು?

ಯಾರಿಹರು ಎಲ್ಲಿಹರು ಕಾಳಜಿಯ ಜನತೆ
ಉಳಿಸಲಿಕೆ ಬೇಕಿತ್ತು ಈ ನಾಡ ಘನತೆ
ಮತ ಧರ್ಮ ಕಾಳಗದಿ ಕ್ರೌರ್ಯವೇ ಮೆರೆದು
ಮನುಷ್ಯತ್ವ ಎಲ್ಲಿಯೋ ಹೋಗಿಹುದು ಕಳೆದು!

■ ವಿಡಂಬಾರಿ

ಜಗದಗಲ

ಶರತ್‌ಚಂದ್ರ

ಭಾರತ - ಚೀನಾ ಗಡಿ ವಿವಾದದ ಮೂಲ ಎಲ್ಲಿ ?

ಭಾರತ ಚೀನಾ ಗಡಿ ವಿವಾದ ಈಗ ಪುನಃ ಸುದ್ದಿಯಲ್ಲಿದೆ. ಮಾಧ್ಯಮಗಳು ಚೀನಿ ಸೈನ್ಯ ಹಲವು ಬಾರಿ 'ಗಡಿ ಉಲ್ಲಂಘಿಸಿ' ಭಾರತದ ಪ್ರದೇಶಕ್ಕೆ ನುಸುಳುತ್ತಿದೆ ಎಂದು ಅಬ್ಬರದ ಪ್ರಚಾರ ಮಾಡಿವೆ. ಇದನ್ನು ಸೈನ್ಯ ಮತ್ತು ಸರ್ಕಾರಿ ಮೂಲಗಳು ಸ್ಪಷ್ಟವಾಗಿ ನಿರಾಕರಿಸಿದ ಮೇಲೂ ಅದು ಮುಂದುವರೆದಿದೆ. ಈ ಸುಳ್ಳು ಸುದ್ದಿ ಕೊಟ್ಟ ವರದಿಗಾರರ ಮೇಲೆ ಕೇಸು ಹಾಕುವ ಮಾತಿನ ವರೆಗೂ ಇದು ಹೋಯಿತು. ಪ್ರಧಾನಿ ಮನಮೋಹನ ಸಿಂಗ್ ಅರುಣಾಚಲ ಪ್ರದೇಶದ ಭೇಟಿ ಬಗ್ಗೆ ಚೀನಾದ ಟೀಕೆ ಸಹ ಈ ವಿವಾದ ಸುದ್ದಿಯಲ್ಲಿರುವಂತೆ ಮಾಡಿದೆ. ಯಾವುದೇ ಸಮಸ್ಯೆಯ ಬಗ್ಗೆ ನಿಜ ಮಾಹಿತಿ ಕೊಡದೆ ಅರ್ಧ ಮಾಹಿತಿಗಳಿಂದ' ಉದ್ರೇಕ ಹಬ್ಬಿಸುವುದು ಮಾಧ್ಯಮಗಳ ಪ್ರಸಾರ ಹೆಚ್ಚಿಸುವ ಅಜೆಂಡಾಕ್ಕೆ ಸೂಕ್ತವಾಗಿದೆ. ಆದರೆ ಸಮಸ್ಯೆಯ ಪರಿಹಾರಕ್ಕೆ ಸೂಕ್ತವಾಗಿಲ್ಲ. ಈ ಹಿನ್ನೆಲೆಯಲ್ಲಿ ಗಡಿ ವಿವಾದದ ಮೂಲದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ.

ವಸಾಹತುಶಾಹಿ ಬಳುವಳಿ

ಮೊದಲನೆಯದಾಗಿ ಈ ಗಡಿ ವಿವಾದ ಎರಡೂ ದೇಶಗಳ ವಸಾಹತುಶಾಹಿ ಅವಧಿಯ ಬಳುವಳಿ ಎಂದು ಬಹಳ ಜನಕ್ಕೆ ಗೊತ್ತಿಲ್ಲ. ಚರಿತ್ರೆಯಲ್ಲಿ ಎಂದೂ ಎರಡೂ ದೇಶಗಳು ಒಪ್ಪಿದ ಗಡಿ ಅಂತ ಇರಲೇ ಇಲ್ಲ. ಇಂಡಿಯಾವನ್ನು ಆಳುತ್ತಿದ್ದ ಬ್ರಿಟಿಷ್ ಮತ್ತು ಚೀನಾವನ್ನು ಹರಿ ಹಂಚಿಕೊಂಡಿದ್ದ ಪಾಶ್ಚಿಮಾತ್ಯ ವಸಾಹತುಶಾಹಿಗಳು ಸೃಷ್ಟಿಸಿದ ಸಮಸ್ಯೆ. ಸ್ವತಂತ್ರ ಭಾರತ-ಚೀನಾ ಸರ್ಕಾರಗಳ ನಡುವೆ ನಿಗದಿಸಿದ ಗಡಿ ಬಗ್ಗೆ ಒಪ್ಪಂದವೇ ಆಗಲಿಲ್ಲ. ಆದ್ದರಿಂದ 'ಗಡಿ ಉಲ್ಲಂಘನೆ' ಸಹ ಪ್ರತೀ ದೇಶದ ಅನ್ನಿಸಿಕೆ ಆಗುತ್ತದೆ ವಿನಹ ಸಮಸ್ಯೆಯ ವಿವರಣೆ ಸಹ ಕೊಡುವುದಿಲ್ಲ. ನಿಜವಾಗಿ ಹೇಳಬೇಕಾದರೆ ಭಾರತ-ಚೀನಾದ ನಡುವೆ ಮೂರು ಗಡಿಗಳು ಇವೆ! ಎರಡು ಭಾರತ ಮತ್ತು ಚೀನಾ ಸರ್ಕಾರಗಳು ಅಂದು ಕೊಂಡಿರುವವು. ಇನ್ನೊಂದು ಈಗಿನ ಎರಡು ದೇಶಗಳ 'ನಿಜವಾದ ನಿಯಂತ್ರಣದಲ್ಲಿರುವ ಪ್ರದೇಶಗಳ ನಡುವಿನ ಗಡಿ ರೇಖೆ' ಇದು 1962 ರ ಯುದ್ಧದ ನಂತರ ಸ್ಥಾಪಿತವಾದ ಕದನ ವಿರಾಮದ ರೇಖೆ. ಈ ಗಡಿ ರೇಖೆ ಸಹ ಮ್ಯಾಪ್ ಮೇಲೆ ದಾಖಲಾಗಿ ಒಪ್ಪಿತವಾದದ್ದು ಅಲ್ಲ. ಅಲ್ಲದೆ ಭಾರತ-ಚೀನಾ ಗಡಿ ಹಿಮಾಲಯದ ಎತ್ತರ, ದುರ್ಗಮವಾದ, ಹಿಮಾವೃತ್ತ, ಜನವಸತಿ ಇಲ್ಲದ ಪ್ರದೇಶವಾಗಿದ್ದು ಗಡಿ ನಿಗದಿ ಮಾಡುವುದು ಆದರಿಂದಲೂ ಕಷ್ಟಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ 'ಗಡಿ ಉಲ್ಲಂಘನೆ' ನಡೆಯುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಿರುವ ಮಾಧ್ಯಮಗಳು ಯಾವ ಗಡಿಯ ಉಲ್ಲಂಘನೆ ಎಂದು ಮೊದಲು ಹೇಳಬೇಕು !

ವಿವಾದದ ಅಂಶಗಳು

ಎರಡನೇಯದಾಗಿ ಎರಡೂ ದೇಶಗಳು ಗಡಿ ವಿವಾದಿತವಾಗಿದೆ ಎಂದು ಒಪ್ಪಿಕೊಂಡು ಗಡಿ ನಿಗದಿ ಮಾಡಲು ಮಾತುಕತೆ ಆರಂಭಿಸಿವೆ. ಮೂರು ಸ್ತರದ ಮಾತುಕತೆ ನಡೆಸುವ ವ್ಯವಸ್ಥೆ ಆಗಿದೆ. ಆ ಮೂರು ಸ್ತರಗಳೆಂದರೆ - ವಿಶೇಷ ಪ್ರತಿನಿಧಿಗಳು, ಜಂಟಿ ಕಾರ್ಯಪಡೆ, ತಜ್ಞರ ಪಡೆ. ಈಗಾಗಲೇ ಹಲವು ಸುತ್ತಿನ ಮಾತುಕತೆ ನಡೆಸಿವೆ. ವಿಶೇಷ ಪ್ರತಿನಿಧಿಗಳು ಈ ಅಗಸ್ಟ್ ನಲ್ಲಿ 12 ನೇ ಬಾರಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಜಂಟಿ ಕಾರ್ಯಪಡೆ, ತಜ್ಞರ ಪಡೆಗಳು ಇನ್ನೂ ಹೆಚ್ಚು ಬಾರಿ ಮಾತುಕತೆ ನಡೆಸಿವೆ. ಪ್ರಗತಿ ಆಗಿಲ್ಲ ಅಂತಲೂ ಏನಿಲ್ಲ. 3500 ಕಿ.ಮೀ. ಉದ್ದದ ಗಡಿಯಲ್ಲಿ ಪಶ್ಚಿಮ ಮತ್ತು ಪೂರ್ವ ಕೊನೆಗಳು ಮಾತ್ರ ವಿವಾದಿತವಾಗಿದ್ದು, ವಿವಾದ ಇಲ್ಲದ ಮಧ್ಯಭಾಗದ' ಗಡಿಯನ್ನು ಗುರುತಿಸಿ ಮ್ಯಾಪ್‌ನಲ್ಲಿ ದಾಖಲು ಮಾಡುವ ಬೃಹತ್ ಪ್ರಕ್ರಿಯೆ ಜಾರಿಯಲ್ಲಿದೆ. ಸಿಕ್ಕಿಂ ಸಹ ಹಿಂದೆ ವಿವಾದಿತ ಪ್ರದೇಶವಾಗಿದ್ದು, ಅದರ ಬಗ್ಗೆ ತನ್ನ ಹಕ್ಕು ಸಾಧನೆಯನ್ನು ಚೀನಾ ಬಿಟ್ಟು ಕೊಟ್ಟಿದೆ.

ವಿವಾದ ಇರುವುದು ಎರಡು ಪ್ರದೇಶಗಳ ಬಗ್ಗೆ. ಪಶ್ಚಿಮದಲ್ಲಿ ಕಾಶ್ಮೀರ ಗಡಿಯಲ್ಲಿ ಬರುವ ಚೀನಾದ ನಿಯಂತ್ರಣದಲ್ಲಿರುವ ಅಕ್ಸಾಯ್ ಚಿನ್ ಎಂಬ 38 ಸಾವಿರ ಚದರ ಕಿ.ಮೀ. ಪ್ರದೇಶ ಒಂದು. ಇದು ಅಲ್ಲದೆ ಚೀನಾ ಮತ್ತು ಪಾಕಿಸ್ತಾನಗಳ ನಡುವೆ 1963 ರಲ್ಲಿ ಗಡಿ ನಿಗದಿತವಾದಾಗ ಪಾಕ್ ಆಕ್ರಮಿತ ಕಾಶ್ಮೀರದ ಸುಮಾರು ಐದು ಸಾವಿರ ಕಿ.ಮೀ. ಪ್ರದೇಶವನ್ನು ಚೀನಾಕ್ಕೆ ಕೊಟ್ಟು ಬಿಟ್ಟಿದೆ ಅಂತ ಭಾರತದ ವಾದ. ಪೂರ್ವದಲ್ಲಿ ಅರುಣಾಚಲ ಪ್ರದೇಶ ಅನ್ನಿಸಿಕೊಂಡ ಸುಮಾರು 90 ಸಾವಿರ ಕಿ.ಮೀ. ಪ್ರದೇಶವನ್ನು ಭಾರತ ಆಕ್ರಮಿಸಿಕೊಂಡಿದೆ ಅಂತ ಚೀನಾ ಆಪಾದಿಸಿದೆ.


ಜಾನ್ಸನ್, ಮ್ಯಾಕ್ಡೊನಾಲ್ಡ್ ರೇಖೆ ವಿವಾದ

ಎರಡು ದೇಶಗಳು ಸಾಮ್ರಾಜ್ಯಶಾಹಿಗಳ ಆಳ್ವಿಕೆಯಲ್ಲಿ ಇದ್ದಾಗ ಅವರ ನೆಲದ ದಾಹದಿಂದ ಸತತವಾಗಿ ಯುದ್ಧ ಮೋಸಗಳಿಂದ ನೆಲ ಕಬಳಿಸುವುದು ನಡೆದೇ ಇತ್ತು. ಇದರಿಂದ ಗಡಿ ಬದಲಾಗುತ್ತಲೇ ಇತ್ತು. ಭಾರತ ಸರ್ಕಾರ ತನ್ನ ಗಡಿಯನ್ನು ಜಾನ್ಸನ್ ಮತ್ತು ಮ್ಯಾಕ್ ಮೋಹನ್ ರೇಖೆ ಎಂದು ಕರೆಯಲಾಗುವ ರೇಖೆ ಆಧಾರದ ಮೇಲೆ ನಿಗದಿ ಮಾಡುತ್ತದೆ. ಆದರೆ ಈ ಎರಡೂ ರೇಖೆಗಳಿಗೆ ವಿವಾದಿತ ಇತಿಹಾಸವಿದೆ.

ಜಾನ್ಸನ್ ರೇಖೆ 1865 ರಲ್ಲಿ ಜಾನ್ಸನ್ ಎಂಬ ಸರ್ವೇ ಇಂಡಿಯಾ ಅಧಿಕಾರಿ ನಿಗದಿ ಮಾಡಿದ ರೇಖೆ. ಅದರ ಪ್ರಕಾರ ಅಕ್ಸಾಯ್ ಚಿನ್ ಭಾರತದ ಕಾಶ್ಮೀರದ ಭಾಗವಾಗಿತ್ತು. ಇದರ ಆಧಾರದ ಮೇಲೆ ಮ್ಯಾಪ್‌ಗಳನ್ನು ಬ್ರಿಟಿಷ್ ಸರ್ಕಾರ ಮಾಡಿತು. ಆದರೆ ಇದನ್ನು ಚೀನಾದ ಸರ್ಕಾರಕ್ಕೆ ಈ ರೇಖೆಯನ್ನು ಗಡಿ ಮಾಡುವ ಪ್ರಸ್ತಾವ ಮಾಡಿರಲಿಲ್ಲ. ಒಂದು ಹಂತದಲ್ಲಿ ಏಕಪಕ್ಷೀಯವಾಗಿ ಈ ಗಡಿ ರೇಖೆ ನಿರ್ಧರಿಸಿದ್ದಕ್ಕೆ ಬ್ರಿಟಿಷ್ ಸರ್ಕಾರ ಜಾನ್ಸನ್ ನೋಟೀಸ್‌ಗೆ ಕೊಟ್ಟಿತ್ತಂತೆ. 1890 ರ ದಶಕದ ಹೊತ್ತಿಗೆ ಆಗಿನ ಭಾರತ-ಚೀನಾ ವಸಾಹತುಶಾಹಿ ಸರ್ಕಾರಗಳು ರಶ್ಯಾವನ್ನು ಸಮಾನ ವೈರಿ ಎಂದು ಪರಿಗಣಿಸಿದ್ದು ಮೈತ್ರಿಯಿಂದ ಇದ್ದವು. 1899 ರಲ್ಲಿ ಮ್ಯಾಕ್ಡೊನಾಲ್ಡ್ ರೇಖೆಯ ಸುತ್ತ ಗಡಿ ಒಪ್ಪಲಾಯಿತು. ಮ್ಯಾಕ್ಡೊನಾಲ್ಡ್ ರೇಖೆಯ ಪ್ರಕಾರ ಅಕ್ಸಾಯ್ ಚಿನ್ ಚೀನಾದ ಭಾಗವಾಗಿತ್ತು. ಆದರೆ ಜಾನ್ಸನ್ ರೇಖೆ ಆಧಾರಿತ ಮ್ಯಾಪ್‌ಗಳನ್ನು ಬದಲಿಸಲಿಲ್ಲ. 1911 ರಲ್ಲಿ ಚೀನೀ ಕೇಂದ್ರ ಸರ್ಕಾರ ಬಿದ್ದು ಹೋದ ಮೇಲೆ ಬ್ರಿಟಿಷರು ಜಾನ್ಸನ್ ರೇಖೆ ಅಧಿಕೃತ ಗಡಿ ಎಂಬಂತೆ ವ್ಯವಹರಿಸ ತೊಡಗಿದರು !

ಮ್ಯಾಕ್ ಮೋಹನ್ ರೇಖೆ ವಿವಾದ

1826 ರ ಆಂಗ್ಲೋ-ಬರ್ಮ ಯುದ್ಧದಲ್ಲಿ ಈಗಿನ ಅಸ್ಸಾಂ ಪ್ರದೇಶವನ್ನು ಬ್ರಿಟಿಷರು ಗೆದ್ದ ನಂತರ ಭಾರತ ಚೀನಾ ಮೊದಲ ಬಾರಿ ಪೂರ್ವದಲ್ಲಿ ಗಡಿ ಹೊಂದಿದವು. 1913-14 ರಲ್ಲಿ ಭಾರತ, ಚೀನಾ ಮತ್ತು ಟಿಬೆಟ್ (ಆಗ ಟಿಬೆಟ್ ಮೇಲೆ ಚೀನಾದ ನಿಯಂತ್ರಣ ಇರಲಿಲ್ಲ) ಸರ್ಕಾರದ ಪ್ರತಿನಿಧಿಗಳು ಗಡಿ ನಿಗದಿ ಮಾಡಲು ಸಿಮ್ಲಾದಲ್ಲಿ ಸಭೆ ಸೇರಿದವು. ಹೆನ್ರಿ ಮ್ಯಾಕ್ ಮೋಹನ್ ಬ್ರಿಟಿಷ್ ಪ್ರತಿನಿಧಿಯಾಗಿದ್ದು ಈಗ ಮ್ಯಾಕ್ ಮೋಹನ್ ರೇಖೆ ಎಂದು ಹೆಸರಾಗಿರುವ ಗಡಿ ಪ್ರಸ್ತಾವ ಇಟ್ಟನಂತೆ. ಆದರೆ ಮ್ಯಾಕ್ ಮೋಹನ್ ರೇಖೆಯನ್ನು ಚೀನಾದ ಪ್ರತಿನಿಧಿಗೆ ತೋರಿಸಲಿಲ್ಲ. ಗಡಿ ಬಗ್ಗೆ ಕರಡು ಒಪ್ಪಂದ ತಯಾರಿಸಲಾಯಿತು. ಚೀನಾ-ಟಿಬೆಟ್ ನಡುವೆ ಗಡಿ ಬಗ್ಗೆ ವಿವಾದ ಬಂದು ಚೀನಾ ಒಪ್ಪಂದಕ್ಕೆ ಸಹಿ ಹಾಕಲಿಲ್ಲ. ಚೀನಾದ ಒಪ್ಪಿಗೆಯಿಂದ ತ್ರಿಪಕ್ಷೀಯ ಒಪ್ಪಂದ ಆಗಿರಬೇಕು. ಚೀನಾ ಒಪ್ಪದಿದ್ದರೆ ಟಿಬೆಟ್ ಜತೆಗೆ ದ್ವಿಪಕ್ಷೀಯ ಒಪ್ಪಂದ ಮಾಡಬಾರದು ಎಂದು ಬ್ರಿಟಿಷ್ ಸರ್ಕಾರ ನಿರ್ದೇಶನ ನೀಡಿದ್ದರೂ ಮ್ಯಾಕ್ ಮೋಹನ್ ಅದನ್ನೇ ಮಾಡಿದ ! ಮ್ಯಾಕ್ ಮೋಹನ್ ರೇಖೆ ಪ್ರಕಾರ ಈಗಿನ ಅರುಣಾಚಲ ಪ್ರದೇಶ ಭಾರತಕ್ಕೆ ಬರುತ್ತದೆ. 1937 ರ ವರೆಗೂ ಬ್ರಿಟಿಷ್ ಸರ್ಕಾರ ಮ್ಯಾಕ್ ಮೋಹನ್ ರೇಖೆ ಮತ್ತು ಸಿಮ್ಲಾ ಒಪ್ಪಂದವನ್ನು ಒಪ್ಪಂದಗಳ ಅಧಿಕೃತ ರಿಜಿಸ್ಟರ್ ನಲ್ಲಿ ಹಾಕಿರಲಿಲ್ಲ.



ಇತಿಹಾಸದ ಉದ್ದಕ್ಕೂ ಟಿಬೆಟ್ ಚೀನಾದ ಪ್ರಾಂತ್ಯವಾಗಿದ್ದು ಅದಕ್ಕೆ ವಿದೇಶೀ ಸರ್ಕಾರದ ಜತೆ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ಇಲ್ಲ. ಅಲ್ಲದೆ ಆಗಿನ ಚೀನಾ ಸರ್ಕಾರ ಅದಕ್ಕೆ ಸಹಿ ಹಾಕಿರಲಿಲ್ಲ. ಮಾತ್ರವಲ್ಲ ಇದು ಟಿಬೆಟ್ ಜತೆ ಬ್ರಿಟಿಷರು ನೇರವಾಗಿ ವ್ಯವಹರಿಸಬಾರದು ಎಂಬ 1906 ಆಂಗ್ಲೋ-ಚೀ ಮತ್ತು 1907 ಆಂಗ್ಲೋ-ರಶ್ಯಾ ಒಪ್ಪಂದ ಉಲ್ಲಂಘನೆ. ಆದ್ದರಿಂದ ಮ್ಯಾಕ್ ಮೋಹನ್ ರೆ ಮತ್ತು ಸಿಮ್ಲಾ ಒಪ್ಪಂದವನ್ನು ಚೀನಾ ಸರ್ಕಾರ ಮ ಮಾಡುವುದಿಲ್ಲ ಎನ್ನುತ್ತದೆ.

ಬ್ರಿಟಿಷರು ಹಾಕಿದ ರೇಖೆ ದಾಟಬಾರದೇ

ಎರಡೂ ದೇಶಗಳು ಸ್ವತಂತ್ರವಾದ ಆರಂ ವರ್ಷಗಳಲ್ಲಿ 'ಹಿಂದೀ-ಚೀನಿ ಭಾಯಿ ಭಾಯಿ' ಭಾವನೆ ಪ್ರಬಲವಾಗಿತ್ತು. ಬ್ರಿಟಿಷ್ ಅಧಿಕಾರಿಗ ಎಳೆದ ಈ ರೇಖೆಗಳ ಬಗ್ಗೆ ಯಾರೂ ಕೆಡಿಸಿಕೊಳ್ಳಲಿಲ್ಲ. ಆದರೆ ಎರಡೂ ಸರ್ಕಾರಗ ತಮ್ಮ ಹಿಂದಿನ ಸರ್ಕಾರಗಳ ಅಂದಾಜಿನ ಪ್ರಕ ಗಡಿ ನಿಗದಿ ಮಾಡಿಕೊಂಡು 19 ದಶಕದ ಕೊನೆ ಹೊತ್ತಿಗೆ ಮ್ಯಾಪ್ ಮ ಪ್ರಕಟಿಸಲು ಆರಂಭಿಸಿದಾಗ ವಿವ ಆರಂಭವಾಯಿತು. ಚೀನಾ ಸರ್ಕಾ ಮ್ಯಾಕ್ಡೊನಾಲ್ಡ್ ರೇಖೆಯ ಆಧಾರದ ಮೇ ಅಕ್ಸಾಯ್ ಚಿನ್ ಚೀನಾದ ಪ್ರದೇಶ ಎಂ ತೋರುವ ಮ್ಯಾಪ್ ಮಾಡಿ ಪ್ರಕಟಿಸಿದ ಭಾರತ ಸರ್ಕಾರ ಪ್ರತಿಭಟಿಸಿತು. ನೆಹ ಆದೇಶದ ಮೇಲೆ ಮ್ಯಾಕ್ ಮೋಹ ರೇಖೆಯ ಆಧಾರದ ಮೇಲೆ ಅರುಣಾ ಭಾರತದ ಪ್ರದೇಶ ಎಂದು ತೋ ಮ್ಯಾಪ್ ಪ್ರಕಟಿಸಿದಾಗ ಚೀನಾ ಸರ್ಕಾ ಪ್ರತಿಭಟಿಸಿತು. ಇದು ಭಾರತ ಚೀನಾ ಗಡಿ ವಿವಾ ವಿಚಿತ್ರ ಇತಿಹಾಸ.

ಈ ಇತಿಹಾಸದ ವಿಚಿತ್ರಗಳನ್ನು ಮಾತು ಮೂಲಕ ಬಗೆ ಹರಿಸುವುದು ಒಂದೇ ದಾರಿ. ಹಲವು ಸಮಾನ ಅಂಶಗಳಿರುವ ಜಗತ್ತಿನ ದೊಡ್ಡ ವಿಕಾಸಶೀಲ ದೇಶಗಳ ಭಾರತ-ಚೀನಾಗಳೂ 'ಭಾಯಿ-ಭಾ ಆಗಿರುವುದು ಸೂಪರ್ ಪವರ್ ಗಳಿಗೆ ರುಚಿಸಲಿ 1960 ರ ದಶಕದ ಆರಂಭದಲ್ಲೂ ಅಮೆರಿ ಸರ್ಕಾರದ ಚಿತಾವಣೆ ಮೇಲೆ ಭಾರತದ ನೆಹ ಸರ್ಕಾರ ಗಡಿ ವಿವಾದ ಎಬ್ಬಿಸಿತು. ಗಡಿ ಪ್ರದೇ ಇಂಡಿಯಾದ ಕಡೆ ಅಮೆರಿಕನ್ನರಿಗೆ ಬೇಹುಗಾ ನಡೆಸಲು ನಿವೇಶನ ಕೊಟ್ಟು ಅನುವು ಮಾಡಲಾ ಅಂತ ಅಂತ ಚೀನಾ ಸರ್ಕಾರದ ಗುಮಾನಿಯಾಗಿ ಚೀನಾ ಭಾರತವನ್ನು 'ಡೋಂಟ್ ಕೇರ್' ಮಾಡು ಎಂಬುದು ಭಾರತ ಸರ್ಕಾರದ ಆತಂಕವಾಗಿ ಭಾರತದೊಳಗೂ ಅಮೆರಿಕ-ಪರ ಶಕ್ತಿಗಳು ಪ್ರೇಮದ ಉದ್ರೇಕದ ಹೆಸರಲ್ಲಿ ಗಡಿ ವಿವಾದಕ್ಕೆ ಹಾಕಿದವು. ನೆಹರೂ ಚೀನಾ ಬಗ್ಗೆ 'ಟಫ್' ನಿಲ ತೆಗೆದುಕೊಳ್ಳುವಂತೆ ಒತ್ತಡ ಹೇರಿದವು. ಗುಮಾನಿಗಳು 1962 ರ ಯುದ್ಧಕ್ಕೆ ಕಾರಣವಾದ ಈಗಲೂ ಮಾತುಕತೆ ಮೂಲಕ ಗಡಿ ವಿವಾದ ಹರಿಯುವುದು ಹಲವು ವಿರೋಧ ಪಕ್ಷಗಳಿಗೆ ಬೇ ಅವು ಈ ವಿವಾದವನ್ನು ಜ್ವಲಂತವಾಗಿ ಇ ಪಣ ತೊಟ್ಟಿವೆ.

ನೆರೆ ಹಾವಳಿಗೆ ನಲುಗಿದ ಕೊಪ್ಪಳ

...8 ರಿಂದ

...ಾವತಿ: 25.19 ಕೋಟಿ ಸಾರ್ವಜನಿಕ, ಭೌತಿಕ, ..., ಸ್ಥಿರಾಸ್ತಿಗಳಿಗೆ ಹಾನಿಯಾಗಿದೆ. 150 ಮನೆ ...ಪೂರ್ಣ ಕುಸಿದಿದ್ದು ಮತ್ತು 15,460 ಭಾಗಶಃ ...ನೆಗಳು ಕುಸಿದು ನಷ್ಟ 11 ಕೋಟಿ. 20 ...ಸುಮಾರು ಸತ್ತಿದ್ದು ನಷ್ಟ 60 ಸಾವಿರ. 794 ಹೆಕ್ಟೇರ್ ...ೋಟಗಾರಿಕೆ ಬೆಳೆ ಹಾನಿ ನಷ್ಟ, 4 ಕೋಟಿ, 2918 ...ರ ಭತ್ತದ ಬೆಳೆ ಹಾನಿಯಾಗಿದೆ. ವಿದ್ಯುತ್ ಇಲಾಖೆ ...ನಿ 6 ಕೋಟಿ. ಪಿಡಬ್ಲ್ಯೂಡಿ, ಜಿಲ್ಲಾ ...ಚಾಯತ್, ನಗರಸಭೆ ಕಾಮಗಾರಿಗಳ ಹಾನಿ ... ಕೋಟಿಗೂ ಅಧಿಕವಾಗಿದೆ ಎಂದು ...ದಾಜಿಸಲಾಗಿದೆ.

...ಒಟ್ಟು ತಾಲ್ಲೂಕಿನ ಹಾನಿ 219 ಕೋಟಿ ಎಂದು ...ಸಲಾಗುತ್ತದೆ.

...ಷ್ಟಗಿ: 11,150 ಮನೆಗಳು ...ೂರ್ಣನಾಶವಾಗಿವೆ. ಭಾಗಶಃ ಮನೆ ...ವಾಗಿರುವುದು ಇನ್ನೂ ಲೆಕ್ಕಕ್ಕೆ ಸಿಗದಂತಾಗಿದೆ. ...ಂದುರ್ಗದಲ್ಲಿ ಬಂಡೆ ಉರುಳಿ 4 ಜನ ...ನ್ನಪ್ಪಿದ್ದಾರೆ. 10 ಕುಡಿಯುವ ನೀರಿನ ಘಟಕಗಳು ...ಕೆರೆ, ಚೆಕ್ ಡ್ಯಾ ಸುಮಾರು 82 ಲಕ್ಷದಷ್ಟು ...ಯಾಗಿದೆ. ತಾಲೂಕಿನ ದಾಳಿಂಬೆ ಬೆಳೆ ...ಪೂರ್ಣ ನಾಶವಾಗಿದ್ದು ದಾಳಿಂಬೆ, ದ್ರಾಕ್ಷಿ, ...ಗಾರರ ನಷ್ಟದ ಅಂದಾಜು ಹೇಳತೀರದಾಗಿದೆ. ... ಬೇಸಾಯದಲ್ಲಿ ಬೆಳೆದ ಸಜ್ಜೆ, ಜೋಳ, ಮೆಕ್ಕೆ ...ೋಳ, ಶೇಂಗಾ ನಾಶವಾಗಿದ್ದಲ್ಲದೇ ರಾಶಿ ...ಡಲು ಹಾಕಿದ ಗೂಡುಗಳಲ್ಲಿಯೇ ...ಸಕೆಯೊಡೆದು ಬೆಳೆ ಹಾನಿಯಾಗಿದೆ.

...ಬುರ್ಗಾ: 15 ಸಾವಿರ ಮನೆಗಳು ಭಾಗಶಃ ...ದಿವೆ. ಸುಮಾರು 500 ಮನೆಗಳು ಸಂಪೂರ್ಣ ...ಕುಸಿದಿವೆ. ಹಿರೇಹಳ್ಳದ ಹಿನ್ನೀರಿನಿಂದ ಕೆಲವು ...ು ಮುಳಗಡೆಯಾಗಿವೆ. ಹಬ್ಬ ಶೇಂಗಾ, ... ಕೊಳೆತುಹೋಗಿದೆ. ದ್ರಾಕ್ಷಿ ಬೆಳೆಗಾರರು ...ಲಾಗಿದ್ದಾರೆ. ಇಲ್ಲಿ ಸರ್ಕಾರ ಮತ್ತು ...ಧಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲವೆಂದೂ, ...ಕರ ಬೆಂಬಲಿಗರಿಗೆ ಪರಿಹಾರದ ಚೆಕ್ ...ಸಲಾಗುತ್ತಿದೆಯೆಂದು ಆರೋಪ ಕೇಳಿಬರುತ್ತಿದೆ.

...ಪ್ಪಳ: ಹಿಂದೆ ಹಿರೇಹಳ್ಳದ ಸೇತುವೆ ಕುಸಿದಾಗ ... ಮುಖ್ಯಮಂತ್ರಿಗಳಾದ ಹೆಚ್.ಡಿ. ...ರಸ್ವಾಮಿಯವರು ಬೇರೊಂದು ತಾತ್ಕಾಲಿಕ ...ವೆ ನಿರ್ಮಿಸಲು ಸುಮಾರು 50 ಲಕ್ಷ ಹಣ ...ೂರು ಮಾಡಿದ್ದರು. ಈ ಸೇತುವೆ ಕೆಲಸ ...ಯಾಗಿದ್ದು, ಈ ನೆರೆಯಲ್ಲಿ ಸೇತುವೆ ...ಕೊಂಡು ಹೋಗಿದೆ. ಕೊಪ್ಪಳ - ಹುಬ್ಬಳ್ಳಿಯ ...ಯ ಹೆದ್ದಾರಿ 63ರ ರಸ್ತೆ ಸಂಚಾರ ...ಹೋಗಿದೆ. ಹಿರೇಹಳ್ಳಕ್ಕೆ ನಿರ್ಮಿಸಲಾದ ...ಯನದ ಹಿನ್ನೀರು ಮತ್ತು ಪ್ರವಾಹ ಬಂದಾಗ ...ನೀರಿನಿಂದ ಹಾನಿ ಹೆಚ್ಚಾಗಿದೆ. ಈ ತಾಲ್ಲೂಕಿ...ಯ ಸಹಿತ ಸುಮಾರು 16 ಸಾವಿರ ಮನೆಗಳು ... ಕುಸಿದಿದ್ದು 450 ಮನೆಗಳು ಸಂಪೂರ್ಣ ...ೋಗಿವೆ. ಬೆಳೆಗಳು ಸಂಪೂರ್ಣ ನಾಶವಾಗಿದೆ.

...ಕ್ಷೆಯೆಂಬ ವಿಳಂಬ

...ಳೆ ಹಾನಿ ಸಮೀಕ್ಷೆ ಮಾಡಲು ಕೃಷಿ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇದೆ ಎಂದು ನೆಪ ಹೇಳಲಾಗುತ್ತಿದೆ. ಇಡೀ ಜಿಲ್ಲೆಯಲ್ಲಿ ಬೆಳೆ ನಾಶದ ಮಾಹಿತಿ ಸಂಗ್ರಹ ಮಾಡುವ ಕೆಲಸ ನಿಧಾನಗತಿಯಲ್ಲಿ ನಡೆದಿದೆ. ಉಸ್ತುವಾರಿ ಸಚಿವರಾದ ಗೋವಿಂದ ಕಾರಜೋಳ ರವರು ರೈತರು, ಅರ್ಜಿ ಮತ್ತು ಫೋಟೋ, ಪಹಣಿ ನಕಲು ತೆಗೆಸಿಕೊಡುವುದು ಬೇಡ, ಸರ್ಕಾರವೇ ಮಾಹಿತಿ ಸಂಗ್ರಹಿಸುತ್ತದೆಂದು ಹೇಳಿಕೆ ನೀಡಿದ್ದಾರೆ. ಜಿಲ್ಲೆಯಲ್ಲಿ ಕೃಷಿ ಇಲಾಖೆಯು ಇದ್ದೂ ಇಲ್ಲದಂತಿದೆ. ಇಂತಹ ಸಂದರ್ಭದಲ್ಲಿ ರೈತ ಸಂಪರ್ಕ ಕೇಂದ್ರಗಳು ಪ್ರತಿದಿನ ಬೀಗ ಹಾಕಿರುತ್ತವೆ. ಇಲ್ಲಿ ಸಿಬ್ಬಂದಿಗಳು ಇರುವುದಿಲ್ಲ. ತಾಲೂಕಿಗೆ 2-3 ಜನ ಮಾತ್ರ ಸಿಬ್ಬಂದಿ ಇದ್ದು ತಾಲೂಕಿನ ಲಕ್ಷಾನುಗಟ್ಟಲೆ ಎಕರೆ ಭೂಮಿಗಳಿಗೆ ಎಷ್ಟು ದಿವಸದಲ್ಲಿ ಇವರು ಸಮೀಕ್ಷೆ ಮಾಡಬಹುದು, ಯಾವ ರೀತಿಯಲ್ಲಿ ಸಮೀಕ್ಷೆ ಮಾಡಬಹುದು, ಒಂದುದಿವಸಕ್ಕೆ 2-3 ಹಳ್ಳಿ, ಗ್ರಾಮಗಳ ಸಮೀಕ್ಷೆ ಮುಗಿಯಲು ವರ್ಷಗಟ್ಟಲೆ ಕಾಯಬೇಕಾಗಬಹುದು. ಹೀಗಿವೆ ಜಿಲ್ಲೆಯ ಕೃಷಿಯ ಬೆಳೆಯ ನಾಶದ ನಷ್ಟದಪರಿಹಾರದ ಪರಿಸ್ಥಿತಿ.

ಗಾಯದ ಮೇಲೆ ಬರೆ: ಒಂದು ಕಡೆ ನೆರೆ ಹಾವಳಿಗೆ ಜನತೆ ತತ್ತರಿಸುತ್ತಿರುವಾಗ ಜಿಲ್ಲೆಯ ಜೀವನಾಡಿಯಾದ ತುಂಗಭದ್ರ ಎಡ ದಂಡೆಯ ಮುಖ್ಯ ಕಾಲುವೆ ಒಡೆದುಹೋಗಿದೆ. ಮಳೆ ನೀರು ಹೆಚ್ಚು ಸಂಗ್ರಹವಾಗಿ ಕಾಲುವೆಗೆ ನುಗ್ಗಲು ಪ್ರಾರಂಭಿಸಿದಾಗ ರಾಂಪುರದ ಜನತೆ ನೀರಾವರಿ ಇಲಾಖೆಯವರಿಗೆ ಫೋನ್ ಮುಖಾಂತರ ತಿಳಿಸಿ ಕಾಲುವೆಗೆ ಹರಿಸುತ್ತಿರುವ ನೀರಿನ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ತಿಳಿಸಿದರೆ ಸಂಬಂಧಿಸಿದ ನೀರಾವರಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ಅಲ್ಲದೇ ಜನರಿಗೆ ಬೈದು ಸುಮ್ಮನಾಗಿಸಿದ್ದಾರೆ. ಮಧ್ಯಾಹ್ನ 12 ಗಂಟೆಯಿಂದ ಪ್ರಯತ್ನ ನಡೆಸಿದ ಜನತೆ ಸುಮಾರು 2.00 ಗಂಟೆಗೆಕಾಲುವೆಗೆ ಬೋಂಗಾ ಬಿದ್ದಿದೆ, ಕಾಲುವೆ ಒಡೆಯುತ್ತಿದೆ ನೀರು ನಮ್ಮ ರಾಂಪುರ (ಗಂಗಾವತಿ ತಾಲ್ಲೂಕು)ಕ್ಕೆ ನುಗ್ಗಿ ಹಳ್ಳಿ ನಾಶವಾಗುತ್ತಿದೆಯೆಂದು ತಿಳಿಸಿದರೂ ಅಧಿಕಾರಿಗಳು ಕಿವಿ ಕೊಡಲಿಲ್ಲ. ಇದರ ಪರಿಣಾಮ ಅಲ್ಲಿ ಕಾಲುವೆ ಒಡೆದು ಊರಲ್ಲಿ ನೀರು ನುಗ್ಗಿ ಹಾನಿ ಮಾಡಿತು. ಅಲ್ಲಿ ಒಡೆಯದಿದ್ದರೆ 3-4 ಕಡೆ ಒಡೆಯುವ ಸಾಧ್ಯತೆ ಇತ್ತು. ಸುಮಾರು 6 ಲಕ್ಷ ಎಕರೆ ಬತ್ತದ ಬೆಳೆ ಇಂದು ನೀರಿಲ್ಲದೇ ಒಣಗಿಹೋಗಿದೆ. ಕಾಲುವೆಗೆ 15 ದಿವಸದೊಳಗಾಗಿ ನೀರು ಹರಿಸುವುದಾಗಿ ತಿಳಿಸಿದ್ದಾರೆ. ಈದರೆ ಇನ್ನೂ ನೀರು ಹರಿಸಿಲ್ಲ. ಬತ್ತದ ಖಣಜ ಗಂಗಾವತಿ ಬತ್ತಿಹೋಗುವಂತಾಗಿದೆ. ಅಧಿಕಾರಿಗಳ ಮೇಲೆ ಹಿಡಿತವಿಲ್ಲದ ಸರ್ಕಾರ ಇದ್ದೂ ಇಲ್ಲದಂತಾಗಿದೆ. ಇದಕ್ಕೆಲ್ಲಾ ಯಾರು ಹೊಣೆ ಎಂದು ಜನ ಪ್ರತಿದಿನ ಪರದಾಡುವಂತಾಗಿದೆ.

ಇಂತಹ ಸಂದರ್ಭದಲ್ಲಿ ಉದ್ಯೋಗ ಖಾತರಿ ಅಡಿಯಲ್ಲಿ ಕಾಮಗಾರಿ ಆರಂಭಿಸಿಲ್ಲ, ಮಾಡಿದ ಕೆಲಸಕ್ಕೆ ಕೂಲಿ ನೀಡಿಲ್ಲ, ಹೀಗೆ ಪ್ರತಿಯೊಂದು ಹಂತದಲ್ಲಿ ಸರ್ಕಾರ ಮತ್ತು ಜಿಲ್ಲಾಡಳಿತ ವಿಫಲವಾಗಿದೆ.

.....ತತ್ತರಿಸಿದ ಬಳ್ಳಾರಿ

ಪುಟ 9 ರಿಂದ

ರೀತಿಯಾಗಿ ಕೆಂಚನಗುಡ್ಡ ಗ್ರಾಮದ ಜನರು ನನಗೆ ಮತನೀಡಿರುವುದಿಲ್ಲ ಆದ್ದರಿಂದ ಕೆಂಚನಗುಡ್ಡದ ಸಮೀಕ್ಷೆ ಮಾಡುವುದು ಬೇಡ ಎಂದು ಶಾಸಕ ಸೋಮಲಿಂಗಪ್ಪನವರು ತಾಲೂಕು ಆಡಳಿತಕ್ಕೆ ಪರಮಾನು ಹೊರಡಿಸಿದರು. ಇದನ್ನು ತಿಳಿದ ಆ ಗ್ರಾಮದ ಸುಮಾರು ಇನ್ನೂರು ಜನ ತಹಶೀಲ್ದಾರರ ಕಛೇರಿ ಮಂದೆ ಕರ್ನಾಟಕ ಪ್ರಾಂತ ರೈತ ಸಂಘದ ಬಿ. ಅಡಿವೆಪ್ಪನವರ ನೇತೃತ್ವದಲ್ಲಿ ಧರಣಿ ನಡೆಸಿ ಸಮೀಕ್ಷೆಗೆ ಒತ್ತಾಯಿಸಿದ ಘಟನ 05.09.2009 ರಂದು ನಡೆದಿದೆ.

ತಾಲೂಕ ಕಛೇರಿಯಲ್ಲಿ ರಾಶಿರಾಶಿಯಾಗಿ ಪರಿಹಾರ ಸಾಮಗ್ರಿಗಳು ಬಂದು ಬಿದ್ದಿದರೂ, ನಾಲ್ಕೈದು ದಿನ ಹಸಿವಿನಿಂದ ಕಂಗಾಲಾಗಿದ್ದ ಸಂತ್ರಸ್ತರಿಗೆ ವಿತರಣೆಯಾಗಿರಲಿಲ್ಲ ಜಿಲ್ಲಾ ನ್ಯಾಯಾಧೀಶರು ಭಾಗೆವಾಡಿ, ಹಚ್ಚೊಳ್ಳಿ, ಕುಡುದರಹಾಳ್, ಶ್ರೀಧರಗಡ್ಡೆ ಗ್ರಾಮಗಳಿಗೆ ಬೇಟಿ ನೀಡಿ ಅನ್ನ ನೀರಿಗಾಗಿ ಪರದಾಡುತ್ತಿರುವ ಜನರ ಗೋಳಿಗೆ ಸ್ಪಂದಿಸಿ, ಶಾಸಕರು ಮತ್ತು ತಹಶೀಲ್ದಾರರಿಗೆ ಛೀ ಮಾರಿ ಹಾಕಿ ತಕ್ಷಣ ಪರಿಹಾರ ಸಾಮಗ್ರಿಗಳನ್ನು ವಿತರಿಸದಿದ್ದರೆ ಸೂಕ್ತ ಕ್ರಮ ತೆಗೆದು ಕೊಳ್ಳುವುದಾಗಿ ಹೇಳಿದ ಮೇಲೆ ಪರಿಹಾರ ಸಾಮಗ್ರಿಗಳು ಜನರನ್ನು ಹುಡುಕಿಕೊಂಡು ಹೊರಟವು. ಪರಿಹಾರ ಸಾಮಗ್ರಿಗಳ ವಿರತರಣೆಯಲ್ಲೂ ಬಿ.ಜೆ.ಪಿ. ಗೆ ಮತನೀಡಿದ ಗ್ರಾಮಗಳಿಗೆ ಮಾತ್ರ ವಿತರಿಸಿ ಉಳಿದ ಗ್ರಾಮಗಳನ್ನು ನಿರ್ಲಕ್ಷಿಸಿದ್ದ ರಿಂದ ರೊಚ್ಚಿಗೆದ್ದ ಚಳ್ಳಕೋಡ್ಲೂರಿನ ಜನರು ತಾಲೂಕಿಕ ಬಿ.ಜೆ.ಪಿ. ಅಧ್ಯಕ್ಷ ಸಿದ್ದಯ್ಯ ಸ್ವಾಮಿಯವರನ್ನು ಥಳಿಸಿದ್ದಾರೆ. ಅದೇ ರೀತಿ ಕುರುಗೋಡಿನಲ್ಲಿ ಸಚಿವ ಜನಾರ್ಧನ ರೆಡ್ಡಿಯವರಿಗೆ ಮೂನ್ನೂರು ಜನ ಘೇರಾವ್ ಮಾಡಿದ್ದಾರೆ. ಈ ಎಲ್ಲಾ ಘಟನಾವಳಿಗಳು ಬಿ.ಜೆ.ಪಿ ಸರ್ಕಾರದ ವಿಕೃತ ಮನಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿವೆ.

ಭ್ರಷ್ಟರಿಗೆ ಸುಗ್ಗಿ

ಸಮೀಕ್ಷೆ ಮಾಡುವಾಗಲೂ ಸಹ ರಾಜಕೀಯ ಹಸ್ತಕ್ಷೇಪ ನಡೆದಿದ್ದು ತಾತ್ಕಾಲಿಕ ಪರಿಹಾರದ ಚೆಕ್ ವಿತರಣೆಯಲ್ಲೂ ಬಹಳ ಭ್ರಷ್ಟಾಚಾರ ನಡೆದಿದೆ. ಒಂದೇ ಮನೆಯಲ್ಲಿ ಹತ್ತು ಜನರಿಗೆ ಹತ್ತು ಸಾವಿರ ರೂಪಾಯಿನಂತೆ ಚೆಕ್ ನೀಡಲಾಗಿದ್ದು, ಪಕ್ಕದ ಮನೆಗೆ ಪರಿಹಾರವೇ ಸಿಕ್ಕಿರುವುದಿಲ್ಲ. ಕೆಲವು ಮನೆಗಳನ್ನು ಸಮೀಕ್ಷೆಯೇ ಮಾಡಿರುವುದಿಲ್ಲ ಈ ಕಾರಣಕ್ಕಾಗಿ. ಸಿರುಗುಪ್ಪ ತಾಲೂಕಿನ ಮಾಟೂರು ಗ್ರಾಮದಲ್ಲಿ ಜನ ಆಡಳಿತ ವ್ಯವಸ್ಥೆ ವಿರುದ್ಧ ಹಾಗೂ ಶಾಸಕರ ವಿರುದ್ಧ ಗಲಾಟೆ ಮಾಡಿದ್ದಾರೆ. ಈ ಬಗ್ಗೆ ನ್ಯಾಯಾಲಯದಲ್ಲಿ ದೂರು ಸಹ ದಾಖಲಾಗಿದೆ. ಭ್ರಷ್ಟ ಅಧಿಕಾರಿಗಳಿಗೆ ಇದು ಸುಗ್ಗಿಯ ಕಾಲವಾಗಿದೆ ಎಂದು ಜನ ಮತನಾಡಿ ಕೊಳ್ಳುತ್ತಿದ್ದಾರೆ.

ಆತಂಕಕಾರಿ ರೈತರ ಆತ್ಮಹತ್ಯೆಗಳು

ಮುಖ್ಯಮಂತ್ರಿ, ಪ್ರಧಾನ ಮಂತ್ರಿಗಳ ವೈಮಾನಿಕ ಸಮೀಕ್ಷೆಗಳು, ಹೆಲಿಕಾಪ್ಟರ್‌ಗಳ ಹಾರಾಟಗಳು, ಬೀದಿ ಸಂಗ್ರಹಗಳು, ಪರಿಹಾರ ಘೋಷಣೆಗಳು, ಮನೆ ಕಟ್ಟಿಕೊಡುವ ಭರವಸೆಗಳು ಬೆಳೆದು ನಿಂತ ಬೆಳೆಯನ್ನು, ತಮ್ಮ ಸರ್ವಸ್ವವನ್ನು ಕಳೆದುಕೊಂಡ ರೈತರ ಬದುಕಿನಲ್ಲಿ ಭರವಸೆ ತುಂಬಿಲ್ಲ ಎನ್ನುವುದಕ್ಕೆ ರಾಜ್ಯದಲ್ಲಿ ಇದೀಗ ತೀವ್ರಗೊಂಡಿರುವ ಸರಣಿ ಆತ್ಮಹತ್ಯೆಗಳೇ ಸಾಕ್ಷಿಯಾಗಿವೆ. ಒಂದು ಕಡೆ ಬೆಳೆ ಹಾನಿಯ ಅಘಾತ, ಮತ್ತೊಂದು ಕಡೆ ಕೊರಳಲ್ಲಿ ಮಾಡಿರುವ ಖಾಸಗಿ ಹಾಗೂ ಬ್ಯಾಂಕ್ ಸಾಲದ ಬಾರ, ಈ ಬಾಧೆ ಸಹಿಸದೆ ರೈತರು ವಿಷ ಕುಡಿದು, ಎದೆ ಒಡೆದು ಸಾಯುತ್ತಿರುವ ಆತಂಕಕಾರಿ ವರದಿಗಳು ಬರುತ್ತಿವೆ.

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕು ಬಂಕಾಪುರದ ಶೇಖಪ್ಪ ನಿಂಗಪ್ಪ ಬೆಳೆದು ನಿಂತಿದ್ದ ಮೆಣಸಿನ ಹೊಲ, ಶೇಂಗಾ ಬೆಳೆ ಹಾಳಾಗಿದ್ದದ್ದನ್ನು ಕಂಡು ಅಘಾತದಿಂದ ಹೃದಯಾಘಾತವಾಗಿ ಸಾವನ್ನಪ್ಪಿದ ವರದಿ ಬಂದಿದೆ.

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯರೇಬೂದಿಹಾಳ್ ಗ್ರಾಮದ ನೀಲಪ್ಪ ಮಾಗೇರಿ ಬೆಳೆ ಹಾನಿಯಿಂದ ವಿಷ ಕುಡಿದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಬಿಜಾಪುರ ಜಿಲ್ಲೆಯ ತಾಳಿಕೋಟೆ ಸಮೀಪದ ಕೊಡಗನೂರು ಗ್ರಾಮದ ರೈತ 64 ವರ್ಷದ ದುರಗಪ್ಪ ವಡ್ಡರ ಕೈಗೆ ಬರಬೇಕಿದ್ದ ತೊಗರಿ ಬೆಳೆ ನಾಶವಾಗಿದ್ದು ನೋಡಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಬಳ್ಳಾರಿ ಜಿಲ್ಲೆಯ 55 ವರ್ಷದ ವೀರೇಶ್ ಕೂಡ ಇದೇ ಕಾರಣಕ್ಕೆ ಸಾವನ್ನು ತಬ್ಬಿಕೊಂಡಿದ್ದಾರೆ.

ಸರ್ಕಾರಗಳು ಬರೀ ಗಂಜಿ ಕೇಂದ್ರ ತೆರೆದು, ಊಟ ಹಾಕಿಬಿಟ್ಟರೆ, ಮನೆ ಕಟ್ಟಿಸಿಕೊಡುವ ಭರವಸೆ ಕೊಟ್ಟರೆ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ಕಳೆದುಕೊಂಡ ಬೆಳೆಗೆ ನಿಶ್ಚಿತ ಪರಿಹಾರ, ಬ್ಯಾಂಕಿನ ಸಾಲಮನ್ನಾ, ಖಾಸಗಿ ಸಾಲದ ಹೊರೆಯನ್ನು ಇಳಿಸುವ ಸಾಂತ್ವಾನದ ಕ್ರಮ, ಮರಳಿ ಕೃಷಿಗೆ ಮುಂದಾಗಲು ಮುಂದೆ ಹೊಸ ಸಾಲ. ಹೀಗೆ ಎಷ್ಟೋ ಕ್ರಮಗಳು ಅಗತ್ಯವಾಗಿದೆ.

ಇಂತಹ ದೃಢ ಪರಿಹಾರ ಕ್ರಮಗಳು ಮೂಲಕ ಸ್ಥೈರ್ಯ ತುಂಬದೇ ಹೋದಲ್ಲಿ ಆತ್ಮಹತ್ಯೆಯ ಹಾದಿ ಹಿಡಿಯುವ ರೈತರನ್ನು ಬದುಕಿನ ದಾರಿಯ ಕಡೆಗೆ ನಡೆಸಿ ತರುವುದು ಕಷ್ಟವಾಗುತ್ತದೆ.



ವಿನಯ್ ಕುಮಾರ್

'ಬಳ್ಳಾರಿ ನಾಗ' : ಅವಾಸ್ತವಿಕ, ವ್ಯಕ್ತಿ ವಿಜೃಂಭ

ಕಲರ್ ಪೋಸ್ಟರ್, ಕಣ್ಣು ಕುಕ್ಕಿಸುವ ಕಾಸ್ಟ್ಯೂಮ್ಸ್ ಕಂಡಲೆಲ್ಲಾ ಕಾಣಸಿಗುವ ಬಡಿದಾಟದ ದೃಶ್ಯಾವಳಿಗಳು.

ಸಿನಿಮಾಕ್ಕೆ ಹೋಗುವ ಮುನ್ನವೇ ಪ್ರೇಕ್ಷಕನ ಮೇಲೆ 'ಬಳ್ಳಾರಿ ನಾಗ' ಉಂಟು ಮಾಡುವ ಪ್ರಭಾವ ಇದು.

60ರ ದಶಕದಲ್ಲಿ ಆಧುನಿಕತೆ ವಿಧಾನವಾಗಿ ಭಾರತೀಯ ಚಿತ್ರರಂಗದಲ್ಲಿ ತೆರೆದುಕೊಳ್ಳುತ್ತಿತ್ತು. ಜನಗಳಲ್ಲಿ ಉಂಟಾಗುತ್ತಿದ್ದ ತಲ್ಲಣಗಳನ್ನು ಶಮನಗೊಳಿಸಿ ಧೈರ್ಯಹೇಳಲು Sur-Redism (ಅತಿ-ವಾಸ್ತವತೆ)? ಅಂಶಗಳುಳ್ಳ ನಾಯಕನನ್ನು ತಯಾರು ಮಾಡಲಾಗುತ್ತಿತ್ತು. ಒಳ್ಳೆಯತನದ ಸೋಗು ಹೊತ್ತು ಅವರು ದಿಢೀರ್ ಸಮಾಜ ಸುಧಾರಕರಾಗುತ್ತಿದ್ದರು. ಇಂತದ್ದೇ ಇಟ್ಟುಕೊಂಡು ಒಂದಷ್ಟು ಹೊಸ ಮಸಾಲ ಸುರಿದು ತಯಾರಿಸಿರುವ ಚಿತ್ರ ಬಳ್ಳಾರಿ ನಾಗ.

ಒಡೆದುಹೋದ ತನ್ನ ಕುಟುಂಬವನ್ನು ನಾಯಕ ಒಟ್ಟು ಮಾಡುವುದೇ ಕಥಾವಸ್ತು. ಚಿಕ್ಕಂದಿನಲ್ಲಿ ಅವನ ಕಣ್ಣಿಗೆ ಗಾಯವಾಗಿರುತ್ತದೆ. ದೊಡ್ಡ ಗಾಯ. ಅದಕ್ಕೆ ಮುಲಾಮು, ಕನ್ನಡಕ! ಬಿಪಿ, ಸಕ್ಕರೆ ಕಾಯಿಲೆಗೆ Cintinues ಆಗಿ ಮಾತ್ರೆ ತೆಗೆದುಕೊಳ್ಳುವಂತೆ ಯಾವಾಗಲೂ ಕನ್ನಡಕ ಧರಿಸಿರುತ್ತಾನೆ ನಾಯಕ. ಯಥಾಪ್ರಕಾರ ಖಳನಾಯಕರುತ್ತಾನೆ. ಅವನಿಗೆ ಹಿಂಬಾಲಕರೂ ಇರುತ್ತಾರೆ. ಆದರೆ, ಯಾರಿಗೂ ನಾಯಕ ಜಗ್ಗೋದಿಲ್ಲ. ಆತನ ಶಕ್ತಿಯೇ ಹಾಗೆ! ಸಾಕ್ಷಾತ್ ಸಿಂಹದಂತೆ ! ಹತ್ತು ಜನರು ಬಂದರೂ ಪುಡಿ ಪುಡಿ.... 'ನೀನೆ ಬೇರೆ ನಿನ್ನ ಸ್ಟೈಲೇ ಬೇರೆ' ಎಂಬ ಬ್ಯಾಕ್‌ಗ್ರೌಂಡ್ ಹಾಡೂ ಬರುತ್ತದೆ.

ಇಡೀ ಚಿತ್ರದುದ್ದಕ್ಕೂ ಹೀಗೆ ಸುಳ್ಳಿನ ಸರಮಾಲೆಯನ್ನೇ ತೆರೆಯ ಮೇಲೆ ತಂದಿರುವ ದಿನೇಶ್ ಬಾಬು ಬುದ್ಧಿ ನಿಜವಾಗಲೂ ಕೆಟ್ಟಿದೆ. ರಜನೀಕಾಂತ್‌ಗೆ ನೀಡುವಂತಹ ಇಮೇಜ್ ಬಿಲ್ಡಪ್ ನೀಡಲು ಹೋಗಿ ತೀರಾ ಎಡವಟ್ಟಾಗಿದೆ. ತಾಯಿಯ ಸೆಂಟಿಮೆಂಟ್‌ನ್ನು ಬಳಸಲು ಹೋಗಿದ್ದು ಹಳಸಲು ಸರಕಂತೆ ಭಾಸವಾಗುತ್ತದೆ. ಸೌಂಡ್



ಎಫೆಕ್ಟ್ ಮೂಲಕ ಜಾದೂ ಮಾಡುತ್ತೇವೆಂಬುದು ಭ್ರಮೆಯಂತಾಗಿದೆ. ಇಡೀ ಚಿತ್ರದಲ್ಲಿರುವ ಪಾತ್ರವರ್ಗ 'ಫುಲ್ ಮೀಲ್ಸ್' ನಟನೆ ಮಾಡಿದೆ. ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ.

ಇಷ್ಟಾದರೂ ಮುಖ್ಯವಾಗಿ ನಾವು ಗಮನಿಸಬೇಕಾದುದು ನಾಯಕನ ಹಿನ್ನೆಲೆಯ ಆತ ಸಾಮಾನ್ಯ ದನ ಕಾಯುವವನು. ಪರಿಶ್ರಮದಿಂದ ಶ್ರೀಮಂತನಾಗುತ್ತಾನೆ. ಆದರ ಶ್ರೀಮಂತನಾಗುವ ಹಾದಿಯ ತೊಡುಕುಗ ಅಷ್ಟಾಗಿ ತೋರಿಸುವುದಿಲ್ಲ. ಬದಲಾಗಿ ಊರಿಗೆ ನ್ಯಾಯ ಹೇಳುವ ಪಂಚಾಯತು ನಾಗುತ್ತಾನೆ. ಆತನ ಹುಕುಮಿನಂತೆಯೇ ಜ ನಡೆಯಬೇಕಾಗುತ್ತದೆ. ಆ ಮೂಲಕ ಪಾಳೇಗ ಜಮೀನ್ದಾರಿ ವ್ಯವಸ್ಥೆಯನ್ನು ಆದರ್ಶವೆಂ ಬಿಂಬಿಸಲಾಗಿದೆ. ಆತ ಒಬ್ಬ ರೈತ ಬದುಕುವುದು, ಕೂಲಿಕಾರನಾಗುವುದು, ಅ ನಾಯಕನಾಗುವುದು ಇಂತಹ ಸಿನಿಮಾ ಕಾಣಸಿಗುವುದಿಲ್ಲ. ಇಲ್ಲೇನಿದ್ದರೂ ಬಣ್ಣದ ಅ ಮೇಕಪ್, ಕೈ-ಕಾಲು ಅಲ್ಲಾಡಿಸುವಾಗ ಮಾಡಬಲ್ಲವರು ಮಾತ್ರವೇ ಹೀರೋಗ ಜನಸಾಮಾನ್ಯರ ಸಿನಿಮಾವೂ ಅ ತಾಂತ್ರಿಕವಾಗಿಯೂ ಇಂತಹ ಕೆಟ್ಟ ಸಿನಿಮಾ ಕ ಚಿತ್ರರಂಗದಲ್ಲಿ ತಯರಾಗಿರುವುದು ಶೋಚನೀ


'ಜಗತ್ತಿನ ಕೊನೆ' ಎಂಬ ಮಾಧ್ಯಮಗಳ ಸುಳ್ಳು ಬೊಬ್ಬೆ

ಎಲ್ಲ ಮುಗಿದುಹೋಯಿತು... 2012ರ ಡಿಸೆಂಬರ್ 21ಕ್ಕೆ ಪ್ರಪಂಚ ವಿನಾಶ... ಇನ್ನು 1800 ದಿನಗಳಲ್ಲಿ ಮನುಷ್ಯ ಕುಲ, ಜೀವ ಜಗತ್ತು ಪ್ರಳಯ.. ಈ ವೈಜ್ಞಾನಿಕ ಯುಗದಲ್ಲೂ ಹೀಗಂತ ಈ ಮೌಢ್ಯವನ್ನು ಸಾರಿ ಸಾರಿ ಹೇಳಿದ್ದು. ಚಂದಿರನ ಅಂಗಳದಲ್ಲಿ ನೀರಿನ ಅಂಶ ಇದೆ ಎಂದು ವಿಶ್ವದ ವಿಜ್ಞಾನಿಗಳು ಕಂಡುಕೊಂಡ ಸಂದರ್ಭದಲ್ಲೇ ಈ ಸುದ್ದಿ ಘಟಸ್ಫೋಟಗೊಂಡಿದೆ.

ಟಿವಿ9ನ ಆರಂಭದಿಂದಲೂ ನಾಡಿನೆಲ್ಲ ವದಂತಿಗಳನ್ನು ಮೌಢ್ಯಗಳನ್ನು ಬಿತ್ತುತ್ತಾ ಬಂದ 'ಹೀಗೂ ಉಂಟೆ' ಎಂಬ ಕಾರ್ಯಕ್ರಮ, ಸುವರ್ಣ ನ್ಯೂಸ್‌ನ ವಿಶೇಷ ಕಾರ್ಯಕ್ರಮಗಳು 'ಸಂಭವಿಸಲಿರುವ' ಈ ಪ್ರಳಯದ ಬಗ್ಗೆ ತಮ್ಮದೇ ಧಾಟಿಯಲ್ಲಿ ವಿಶ್ಲೇಷಣೆ ಮಾಡಿದವು. ತಮ್ಮದೇ 'ವೈಜ್ಞಾನಿಕ' ಕಾರಣಗಳನ್ನು ನೀಡಿ ಅವನ್ನು ಸಮರ್ಥಿಸಿದವು.

ಪ್ರಪಂಚದ ಪುರಾತನ ಮಾಯನ್ ಕ್ಯಾಲಂಡರ್‌ನಲ್ಲಿ 2012ರ ಬಳಿಕ ಯಾವುದೇ ಉಲ್ಲೇಖ ಇಲ್ಲ ಎಂಬುದೇ ಈ ಪುಂಖಾನು ಪುಂಖದ ವರದಿಗಳ ತಳಹದಿ. ಫ್ರಾನ್ಸ್‌ನ ಭವಿಷ್ಯಕಾರ ನಾಸ್ಟ್ರಡಾಮಸ್ ಇದಕ್ಕೆ ಪುಷ್ಟಿ ನೀಡುವ ಪ್ರಸ್ತಾಪ ಮಾಡಿದ್ದಾನೆ ಎಂಬುದಾಗಿ ಮಾಧ್ಯಮಗಳು ತಮ್ಮ ವಾದವನ್ನು ಸಮರ್ಥಿಸಿಕೊಂಡವು.

ವೈಜ್ಞಾನಿಕ ಕ್ಷೇತ್ರಗಳಲ್ಲಿ ದಿನವೂ ನಿತ್ಯ ಆವಿಷ್ಕಾರ ನಡೆಯುವ ಸಂದರ್ಭದಲ್ಲಿ ಯಾವುದೇ ಆಧಾರವಿಲ್ಲದ ಈ ಮೂಢ ಚರ್ಚೆಗಳನ್ನು ಮಾಧ್ಯಮಗಳು ಅತಿರಂಜಿತವಾಗಿ ಪ್ರಸಾರ ಮಾಡುತ್ತಿರುವುದು ಹಾಸ್ಯಾಸ್ಪದವಾಗಿ ತೋರುತ್ತಿದೆ. ಕೆಲವಾದರೂ ಪ್ರಗತಿಪರ ಧೋರಣೆಯುಳ್ಳ ಮಂಗಳೂರಿನ 'ಕರಾವಳಿ ಅಲೆ' ಪತ್ರಿಕೆಯೂ ಮುಖಪುಟದಲ್ಲೇ ಇಂಥದ್ದೇ ದೊಡ್ಡ ಸುದ್ದಿ


ಸರ್ವನಾಶಕ್ಕ ಸಪ್ತ ಕಾರಣ

ಪ್ರಕಟಿಸಿದ್ದು ಆಶ್ಚರ್ಯಕರವಾಗಿದೆ.

ಇದನ್ನು ವಿಶ್ಲೇಷಿಸಲು ವೈಜ್ಞಾನಿಕ ಭವಿಷ್ಯಕಾರರೂ ಹುಟ್ಟಿಕೊಂಡಿದ್ದಾರೆ. ಇವರ ಪ್ರಕಾರ ಸೂರ್ಯ ಕೂಡ ಒಂದು ಗ್ರಹ. ಜಗತ್ತಿನ ಎಲ್ಲ ವಿದ್ಯಮಾನಗಳನ್ನು, ಗ್ರಹಗಳ ಚಲನೆಯನ್ನು ಜಪತಪಗಳಿಂದ, ಹೋಮ ಹವನಗಳಿಂದ ನಿಯಂತ್ರಿಸ ಬಹುದು, ಎಲ್ಲ ಅನಿಷ್ಟಗಳನ್ನು ನಿಗ್ರಹಿಸಬಹುದು ಎಂಬ ವಾದವನ್ನು ಈ ಪಂಡಿತರು ಮಂಡಿಸುತ್ತಾರೆ. ಇಂತಹ ಹಾಸ್ಯಾಸ್ಪದ, ಹಾಗೂ ಅವೈಜ್ಞಾನಿಕ ಸಂಗತಿಗಳ ಮೂಲಕ ಪ್ರೇಕ್ಷಕ ವರ್ಗವನ್ನು ಸೆಳೆಯುವುದು ಟಿವಿ ಚಾನೆಲ್‌ಗಳ ನೇರ ಉದ್ದೇಶ.

ಮೂಢನಂಬಿಕೆಗಳನ್ನು ಅತಿರಂಜಿತವಾಗಿ ಪ್ರಕಟಿಸುವ ಈ ಸುದ್ದಿ ಮಾಧ್ಯಮಗಳಿಗೆ ಜಗತ್ತಿನ ಹೊಸ ಆವಿಷ್ಕಾರಗಳ ಬಗ್ಗೆ ತಿಳಿಸುವ ಉಮೇದು ಇಲ್ಲ. ಶತಶತಮಾನಗಳಿಂದ ದೇವರೆಂದು ನಂಬಿರುವ ಸೂರ್ಯ ಒಂದು ನಕ್ಷತ್ರ. ಚಂದ್ರನ ಅಂಗಳಕ್ಕೆ ಕಾಲಿಟ್ಟ ಅಪೂರ್ವ ಕ್ಷಣಗಳು, ಚಂದಿರನ ಒಡಲಿನಲ್ಲೂ ನೀರಿನ ಅಂಶಗಳಿವೆ ಎಂಬ ಸಂಶೋಧನೆಗಳನ್ನು ಇವು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುತ್ತಿವೆ. ಜೀವ ಸಂಕುಲದ ಒಳಿತಿಗಾಗಿ, ಮುನ್ನಡೆಗಾಗಿ ನಡೆಯುವ ಆವಿಷ್ಕಾರಗಳ ಬಗ್ಗೆ ಇವು ಯಾಕೆ ಮೌನ ವಹಿಸಿವೆ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಮುಂಜಾನೆ ಎದ್ದ ಕೂಡಲೇ ದೇವರ ಪೂಜೆಯ ಪ್ರಸಾರ, ಭವಿಷ್ಯ ವಾಚನ ಮುಂತಾದವುಗಳಿಂದ ಸಮಾಜವನ್ನು ಮತ್ತೆ ಹಿಂದಿನ ಕಾಲದ ಮೌಢ್ಯಕ್ಕೆ ಕೊಂಡೊಯ್ಯುವ ಪ್ರಯತ್ನವೂ ನಡೆದಿದೆ. ಇದಕ್ಕೆ ಪೂರಕವಾಗಿಯೇ ಪ್ರೇಕ್ಷಕ ವರ್ಗ ಕೂಡ ಸ್ಪಂದಿಸುತ್ತಿರುವುದು ವಿಷಾದನೀಯ.

ಬೆಲೆ ಏರಿಕೆಯ ಬಿಸಿ... ಹಣಕಾಸಿನ ತೊಂದರೆ, ಸಾಂಸಾರಿಕ ತಾಪತ್ರಯ... ಹೀಗೆ ದೈನಂದಿನ ಜಂಜಾಟದಿಂದ ನೊಂದ ಮಧ್ಯಮ, ಕೆಳ ಮಧ್ಯಮ ಹಾಗೂ ಬಡ ಜನತೆಯ ಬಾಳಿನಲ್ಲಿ ಸಾಲು ಸಾಲಾಗಿ ಸಮಸ್ಯೆಗ ಸರಮಾಲೆಯೇ ಬರುತ್ತಿರುವುದರಿಂ ಸಹಜವಾಗಿಯೇ ಅವರು ಕಂಗಾಲಾಗುತ್ತಾರ ಇಂತಹವರಿಗೆ ಭವಿಷ್ಯ ವಾಚನ, ಹೋಮ ಹವನಗಳ ಪರಿಹಾರ ಒಂದು ಪರಿಹಾರವಾ ಕಾಣುತ್ತದೆ.

ಸಮಸ್ಯೆಗಳು ಯಾಕೆ ಸೃಷ್ಟಿಯಾಗುತ್ತವ ಅವುಗಳ ಹಿಂದಿರುವ ಕಹಿ ಸತ್ಯವೇನು ಎಂ ಬಗ್ಗೆ ಈ ಚಾನೆಲ್‌ಗಳು ಯಾವುದೇ ಆಸ ವಹಿಸುತ್ತಿಲ್ಲ. ತಮಗೆ ಭರಪೂರ ಜಾಹೀರಾತ ನೀಡುವ ಕಾರ್ಪೊರೇಟ್ ಜಗತ್ತಿನ ಹಿತಾಸ ಗಳನ್ನು ಕಾಯುವುದೇ ಚಾನೆಲ್‌ಗಳ ಪರಮ ಉದ್ದೇಶ. ಈ ಕಾರ್ಪೊರೇಟ್‌ಗಳು ನಡೆಸು ದಂಧೆಗಳು, ಕೊಳ್ಳುಬಾಕ ಸಂಸ್ಕೃತಿ, ಜನರನ ವಂಚಿಸುವ ಪರಿಯನ್ನು ಕಂಡೂ ಕಾಣದ ಹಾ ವರ್ತಿಸುತ್ತವೆ. ಬೆಲೆ ಏರಿಕೆ ಮತ್ತು ಜನವಿರೋ ನೀತಿಗಳ ವಿರುದ್ಧ ಮಾತನಾಡಿದರ ಕಾರ್ಪೊರೇಟ್ ವಲಯದ ಕೆಂಗಣ್ಣಿ ಗುರಿಯಾಗಬೇಕಾಗುತ್ತದೆ ಎಂಬ ಅರಿವು ಇರು ಇಂತಹವರು, ಈ ಎಲ್ಲ ಸಮಸ್ಯೆಗೆ ಜ ಚಳವಳಿಯೇ ಉತ್ತರ ಎಂಬುದನ್ನು ಮರೆಮಾ ಹೋಮ ಹವನಗಳನ್ನು ನಡೆಸಲು ಪ್ರೇರೇಪ ನೀಡುತ್ತವೆ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH